ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 10 ಶನಿವಾರ 2022

ಸಂಪುಟ: 43 | ಸಂಚಿಕೆ: 233 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com



ವರಿಷ್ಠರು ನಿರ್ಧರಿಸಿದರೆ ವರುಣಾದಲ್ಲೇ ಸ್ಪರ್ಧಿಸುತ್ತೇನೆ

● ವಿಪಕ್ಷ ನಾಯಕ ಸಿದ್ದರಾಮಯ್ಯ ಸ್ಪಷ್ಟನೆ ● ತಮ್ಮ ಹಳೆ ಕ್ಷೇತ್ರದಲ್ಲಿ ಮಿಂಚಿನ ಸಂಚಾರ ● ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ● ಎಲ್ಲೆಡೆ ಮೊಳಗಿದ 'ಮುಂದಿನ ಸಿಎಂ ಸಿದ್ದರಾಮಯ್ಯ' ಘೋಷಣೆ



ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ತಿ.ನರಸೀಪುರ ತಾಲೂಕು ಇಂಡುವಾಳು ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನವನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಶುಕ್ರವಾರ ಉದ್ಘಾಟಿಸಿದರು. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಡಾ.ಯತೀಂದ್ರ ಇನ್ನಿತರರಿದ್ದರು.

ನಂಜನಗೂಡು/ತಿ.ನರಸೀಪುರ, ಡಿ. 9–ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಶುಕ್ರವಾರ ತಮ್ಮ ಹಳೆಯ ಕ್ಷೇತ್ರವಾದ ವರುಣಾದಲ್ಲಿ ಮಿಂಚಿನ ಸಂಚಾರ ಮಾಡಿದರು.

ಕ್ಷೇತ್ರದಲ್ಲಿ ಮೂರು ಕಾರ್ಯಕ್ರಮಗಳಿಗೆ ಹಾಜರಾದ ಅವರು, ತಾವು ಮುಖ್ಯಮಂತ್ರಿ ಆಗಿದ್ದಾಗ ಮಂಜೂರು ಮಾಡಿದ್ದು, ಈಗ ಪೂರ್ಣಗೊಂಡಿರುವ ಯೋಜನೆಗಳನ್ನು ಉದ್ಘಾಟಿಸಿದರು. ಅವರು ಹೋದೆಡೆಯೆಲ್ಲಾ ಅಭೂತಪೂರ್ವ ಸ್ವಾಗತ ದೊರಕಿದ್ದು, "ಮುಂದಿನ ಸಿಎಂ ಸಿದ್ದರಾಮಯ್ಯ" ಎಂಬ ಘೋಷಣೆ ಜೊತೆಗೆ ವರುಣಾದಲ್ಲೇ ಸ್ಪರ್ಧಿಸಬೇಕು ಎಂದು ಕಾರ್ಯಕರ್ತರು ಒತ್ತಾಯಿಸಿದ್ದು ಕಂಡುಬಂತು. ಎಲ್ಲಾ ಕಡೆಯೂ ತಾವು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಎಂಬುದನ್ನು ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟಿದ್ದೇನೆ ಎಂದು ಹೇಳುತ್ತಿದ್ದ ಸಿದ್ದರಾಮಯ್ಯ, ತಿ.ನರಸೀಪುರ ತಾಲೂಕಿನ ಇಂಡುವಾಳು ಗ್ರಾಮದಲ್ಲಿ ಕಾರ್ಯಕರ್ತರು ಭಾರೀ ಒತ್ತಡ ಹೇರಿದಾಗ, ಕ್ಷೇತ್ರದ ಜನರ ಭಾವನೆಗಳನ್ನು ಹೈಕಮಾಂಡ್‌ಗೆ ತಿಳಿಸುತ್ತೇನೆ ಎಂದು ಹೇಳುವುದರ ಮೂಲಕ ಅವರು ವರುಣಾದಲ್ಲೇ ಸ್ಪರ್ಧಿಸಬಹುದು ಎಂಬ ಸೂಚನೆಯನ್ನೂ ಸೂಚ್ಯವಾಗಿ ನೀಡಿದರು.

ಇಂಡುವಾಳು ಗ್ರಾಮದಲ್ಲಿ ಅಂಬೇಡ್ಕರ್ ಭವನ ಉದ್ಘಾಟಿಸಿ ಮಾತನಾಡುತ್ತಿದ್ದ ಸಿದ್ದರಾಮಯ್ಯ, ಕಳೆದ ಚುನಾವಣೆಯಲ್ಲಿ ನಾನು ವರುಣಾದಲ್ಲಿ ಸ್ಪರ್ಧಿಸಲಿಲ್ಲ. ಸ್ಪರ್ಧಿಸಿದ್ದರೆ ನೀವು ನನ್ನನ್ನು ಗೆಲ್ಲಿಸುತ್ತಿದ್ದೀರಿ ಎಂದಾಗ ಕಾರ್ಯಕರ್ತರು 100ಕ್ಕೆ ನೂರು ಗೆಲ್ಲಿಸುತ್ತೇವೆ, ಇಲ್ಲೇ ನಿಲ್ಲಿ ಎಂದು ಒತ್ತಾಯಿಸಿದರು. ಆಗ ಸಿದ್ದರಾಮಯ್ಯ ಅದನ್ನು ಹೈಕಮಾಂಡ್‌ನವರಿಗೆ ಬಿಟ್ಟಿದ್ದೇನೆ ಎಂಬ ಮಾಮೂಲಿ ಡೈಲಾಗ್ ಹೊಡೆದಾಗ ಕಾರ್ಯಕರ್ತರು, ಮತದಾರರೇ ಹೈಕಮಾಂಡ್, ನಾವು ನಿಮ್ಮನ್ನು ಗೆಲ್ಲಿಸುತ್ತೇವೆ, ಬೇಕಾದರೆ ನಿಮ್ಮ ಹೈಕಮಾಂಡ್‌ಗೂ ಹೇಳುತ್ತೇವೆ ಎಂದು ಒಕ್ಕೊರಲಿನಿಂದ ಒತ್ತಾಯ ಮಾಡಿದರು. ಅದೇ ವೇಳೆ ಸಿದ್ದರಾಮಯ್ಯ ವರುಣಾದಲ್ಲೇ ಸ್ಪರ್ಧಿಸಿ ಮತ್ತೊಮ್ಮೆ ಮುಖ್ಯಮಂತ್ರಿ ಆಗಬೇಕು ಎಂಬ ▶ 6ನೇ ಪುಟಕ್ಕೆ

ಜನವರಿ 1ರಿಂದ ಕಂಡ ಕಂಡಲ್ಲಿ ಕಸ ಸುರಿಯುವವರಿಗೆ 'ದಂಡ' ಪ್ರಯೋಗ

ಸಾರ್ವಜನಿಕ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆ, ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಮಹತ್ವದ ನಿರ್ಣಯ



ಮೈಸೂರು, ಡಿ.9(ಆರ್‌ಕೆ)–ಮೈಸೂರು ನಗರವನ್ನು ಸ್ವಚ್ಛವಾಗಿರಿಸಲು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿರುವ ಪಾಲಿಕೆಯು, ಎಲ್ಲೆಂದರಲ್ಲಿ ಕಸ ಸುರಿಯುವವರಿಗೆ 'ಭಾರೀ ದಂಡ' ಪ್ರಯೋಗದ ಎಚ್ಚರಿಕೆ ನೀಡಿದೆ.

2023ರ ಜನವರಿ 1 ರಿಂದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 2016ರ ಘನತ್ಯಾಜ್ಯ ನಿರ್ವಹಣೆ ನಿಯಮಾವಳಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಗಿರುವ ಮೈಸೂರು ಮಹಾನಗರ ಪಾಲಿಕೆಯು, ಸಾರ್ವಜನಿಕ ಸ್ಥಳಗಳಲ್ಲಿ ಕಸ ಸುರಿಯುವವರಿಗೆ 'ದಂಡ'ದ ಬರೆ ಹಾಕಲು ನಿರ್ಧರಿಸಿದೆ. ರಸ್ತೆ ಬದಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಆಟದ ಮೈದಾನದಲ್ಲಿ ಕಸ ಹಾಕುವುದು, ಕಂಡ ಕಂಡಲ್ಲಿ ಉಗುಳುವುದು, ಮೂತ್ರ ವಿಸರ್ಜನೆ ಮಾಡಿದರೆ ಮೊದಲನೇ ಬಾರಿ 500 ರೂ. ಹಸಿ ಹಾಗೂ ಒಣ ಕಸ ▶ 6ನೇ ಪುಟಕ್ಕೆ

ಗುಜರಾತ್, ಹಿಮಾಚಲ ಪ್ರದೇಶದ ನಂತರ ಬಿಜೆಪಿ ವರಿಷ್ಠರ ಚಿತ್ತ ಕರ್ನಾಟಕದತ್ತ

ಇಂದು ವರಿಷ್ಠರಿಂದ ರಾಜ್ಯ ಮುಖಂಡರೊಂದಿಗೆ ಚರ್ಚೆ

● ಅಭ್ಯರ್ಥಿಗಳ ಆಯ್ಕೆ ವರಿಷ್ಠರದ್ದೇ ಅಂತಿಮ ● ಸಮೀಕ್ಷಾ ವರದಿ ಆಧರಿಸಿಯೇ ಅಭ್ಯರ್ಥಿಗಳ ಆಯ್ಕೆ



ಪಿಯೂಷ್ ಗೋಯಲ್ ಧರ್ಮೇಂದ್ರ ಪ್ರಧಾನ್ ಭೂಪೇಂದ್ರ ಯಾದವ್

ಬೆಂಗಳೂರು, ಡಿ.9– ಗುಜರಾತ್, ಹಿಮಾಚಲ ಪ್ರದೇಶ ರಾಜ್ಯ ವಿಧಾನಸಭಾ ಚುನಾವಣೆ ಮುಗಿಯುತ್ತಿದ್ದಂತೆ ಬಿಜೆಪಿ ವರಿಷ್ಠರು ಕರ್ನಾಟಕ ವಿಧಾನಸಭಾ ಚುನಾವಣೆಗೆ ರಂಗ ಪ್ರವೇಶ ಮಾಡುತ್ತಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆಯ ಉಸ್ತುವಾರಿ ವಹಿಸಿಕೊಂಡಿರುವ ಕೇಂದ್ರ ಸಚಿವರಾದ ಪಿಯುಷ್ ಗೋಯಲ್ ಧರ್ಮೇಂದ್ರ ಪ್ರಧಾನ್ ಹಾಗೂ ಭೂಪೇಂದ್ರ ಯಾದವ್ ನಾಳೆ (ಡಿ.10) ರಾಜ್ಯ ನಾಯಕರೊಟ್ಟಿಗೆ ಚುನಾವಣಾ ಪೂರ್ವಭಾವಿ ಸಭೆ ನಡೆಸಲಿದ್ದಾರೆ. ಈ ಮೂವರು ನಾಯಕರು ನಾಳೆ ರಾಜ್ಯಕ್ಕೆ ಭೇಟಿ ನೀಡಲಿದ್ದಾರೋ ಇಲ್ಲವೇ ವಿಡಿಯೋ ಕಾನ್ಫರೆನ್ಸ್ ಮೂಲಕವೇ ಚರ್ಚೆ ಮಾಡಲಿದ್ದಾರೋ ತಿಳಿದು ಬಂದಿಲ್ಲ. ನಾಳೆ ಪೂರ್ವ ಭಾವಿ ಸಭೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆರ್‌ಎಸ್‌ಎಸ್‌ನ ಪ್ರಾದೇಶಿಕ ನಾಯಕರು ತಮ್ಮ ಕಚೇರಿಗೆ ಕರೆಸಿಕೊಂಡು ನಿನ್ನೆ ರಾತ್ರಿ ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ. ಆರ್‌ಎಸ್‌ಎಸ್ ಪ್ರಮುಖ ಮುಕುಂದ್ ಅವರು ಇಂದು ಬೆಳಿಗ್ಗೆ ಮುಖ್ಯಮಂತ್ರಿ ಯವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ, ಸುದೀರ್ಘ ಸಮಾಲೋಚನೆ ನಡೆಸಿದರು. ರಾಜ್ಯ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಡಿಸೆಂಬರ್ 5 ಮತ್ತು 6ರಂದು ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯ ನಾಯಕರಿಂದ ಕೆಲವು ಮಾಹಿತಿ ಪಡೆದಿದ್ದರು. ಈ ಮಾಹಿತಿ ಆಧಾರ ಹಾಗೂ ಸಮೀಕ್ಷೆಗಳ ವರದಿಯನ್ನಾಧಾರವಾಗಿಟ್ಟುಕೊಂಡು ಚುನಾವಣಾ ಉಸ್ತುವಾರಿಗಳು ನಾಳೆ ನೀಲಿ ನಕ್ಷೆಯೊಂದನ್ನು ಸಿದ್ಧಪಡಿಸಿ, ಅದನ್ನು ಕಾರ್ಯರೂಪಕ್ಕೆ ತರಲು ರಾಜ್ಯ ನಾಯಕರಿಗೆ ಸೂಚಿಸಲಿದ್ದಾರೆ. ರಾಜ್ಯ ವಿಧಾನಸಭೆಗೆ 2023ರ ಏಪ್ರಿಲ್–ಮೇ ▶ 6ನೇ ಪುಟಕ್ಕೆ



ಇಂದು ಖ್ಯಾತ ಕಥೆಗಾರ ಡಾ.ಬೆಸಗರಹಳ್ಳಿ ರಾಮಣ್ಣ ಸ್ಮರಣಾರ್ಥ

ಪಿಯುಸಿ ಕನ್ನಡ ಪಠ್ಯಾಧಾರಿತ ರಂಗ ಪ್ರದರ್ಶನ

ಮೈಸೂರು, ಡಿ.9– ಎಸ್.ಬಿ.ಎಜುಕೇಷನ್ ಟ್ರಸ್ಟ್ ಹಾಗೂ ಮೈಸೂರಿನ ಅದಮ್ಯ ರಂಗಶಾಲೆಯ ವತಿಯಿಂದ ಖ್ಯಾತ ಕಥೆಗಾರ, ಜನಪರ ವೈದ್ಯ ಮತ್ತು ಸಂಸ್ಕೃತಿ ಚಿಂತಕರಾದ ಡಾ.ಬೆಸಗರಹಳ್ಳಿ ರಾಮಣ್ಣ ಸ್ಮರಣಾರ್ಥ ಪಿಯುಸಿ ಪಠ್ಯಾಧಾರಿತ ಚಿತ್ರಿತ ನಾಟಕ ಪ್ರದರ್ಶನವು ಡಿ.10ರಂದು ಬೆಳಗ್ಗೆ 10 ಗಂಟೆಗೆ ಎಂ.ಸಿ. ರಸ್ತೆಯ ಜ್ಞಾನಸಾಗರ ಕ್ಯಾಂಪಸ್ಸಿನ ಮಾಂಡವ್ಯ ಎಕ್ಸೆಲೆನ್ಸ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಲಿದೆ ಎಂದು ಅದಮ್ಯ ರಂಗ ಶಾಲೆಯ ಅಧ್ಯಕ್ಷ ಮಂಡ್ಯ ಚಂದ್ರು ತಿಳಿಸಿದ್ದಾರೆ.


ಡಾ.ಬೆಸಗರಹಳ್ಳಿ ರಾಮಣ್ಣ

ರಂಗ ಪ್ರದರ್ಶನಕ್ಕೆ ಮೈಸೂರು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಡಾ.ಬೆಸಗರಹಳ್ಳಿ ರಾಮಣ್ಣರ ಪುತ್ರಿ ಬಿ.ಆರ್. ಪೂರ್ಣಿಮಾ ಚಾಲನೆ ನೀಡಲಿದ್ದು, ಎಸ್.ಬಿ.ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಬಿ.ಶಿವಲಿಂಗಯ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ, ಜಿಲ್ಲಾ ಯುವ ಬರಹಗಾರರ ಬಳಗದ ಸಂಸ್ಥಾಪಕ ಅಧ್ಯಕ್ಷ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಪಾಲ್ಗೊಳ್ಳುವರು.

ಪ್ರಥಮ ಪಿಯುಸಿಯ ಕನ್ನಡ ಪಠ್ಯದಲ್ಲಿರುವ ಡಾ.ಬೆಸಗರಹಳ್ಳಿ ರಾಮಣ್ಣ ಅವರ 'ಗಾಂಧಿ', ಡಾ.ವೀಣಾ ಶಾಂತೇಶ್ವರ ಅವರ 'ನಿರಾಕರಣೆ' ಹಾಗೂ ದ್ವಿತೀಯ ಪಿಯುಸಿಯ ಕನ್ನಡ ಪಠ್ಯದಲ್ಲಿರುವ ಪಿ.ಲಂಕೇಶರ 'ಮುಟ್ಟಿಸಿಕೊಂಡವನು', ಡಾ.ಎಚ್.ನಾಗವೇಣಿ ಅವರ 'ಧಣಿಗಳ ಬೆಳ್ಳಿಲೋಟ' ಕಥೆಗಳನ್ನು ರಂಗರೂಪಕ್ಕೆ ಅಳವಡಿಸಲಾಗಿದ್ದು, ಮಂಡ್ಯ ಚಂದ್ರು ನಿರ್ದೇಶನದಲ್ಲಿ ಅದಮ್ಯ ರಂಗಶಾಲೆಯ ಕಲಾವಿದರು ಅಭಿನಯಿಸಿದ್ದಾರೆ. ಈ ನಾಲ್ಕು ಕಥೆಗಳ ಚಿತ್ರಿತ ರಂಗ ಪ್ರದರ್ಶನ ವಿದ್ಯಾರ್ಥಿಗಳಿಗಾಗಿ ನಡೆಯಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.12, ತಬಲಾ ವಾದಕ ಅನಂತಸ್ವಾಮಿ ಸ್ಮರಣಾರ್ಥ ಸಂಗೀತ, ಸನ್ಮಾನ



ಮೈಸೂರು, ಡಿ.9(ಆರ್‌ಕೆಬಿ)– ಖ್ಯಾತ ತಬಲಾ ವಾದಕ ಎಂ.ಬಿ.ಅನಂತಸ್ವಾಮಿ ಸ್ಮರಣಾರ್ಥ ಡಿ.12ರಂದು ಸಂಜೆ 4.30ಕ್ಕೆ ಮೈಸೂರಿನ ಇರ್ವಿನ್ ರಸ್ತೆ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ವತಿಯಿಂದ ಸಂಗೀತ ಹಾಗೂ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಚಂದ್ರು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಂ.ಬಿ.ಅನಂತಸ್ವಾಮಿ ಅವರು ಮೈಸೂರಿನ ಕಿವುಡ, ಮೂಕ ಮಕ್ಕಳ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಬಳಿಕ ನಿಧನರಾದರು. ಇವರ ಸ್ಮರಣಾರ್ಥ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಶಾಸಕರಾದ ಎಲ್.ನಾಗೇಂದ್ರ, ಜಿ.ಟಿ.ದೇವೇಗೌಡ, ಮೇಯರ್ ಶಿವಕುಮಾರ್ ಇನ್ನಿತರರು ಅತಿಥಿಗಳಾಗಿ ಭಾಗವಹಿಸುವರು.

ಅಂದು ನಾಟಕ ನಿರ್ದೇಶಕರು ಆದ ರಾಜಪ್ಪ, ಎಚ್.ಕೆ.ನರಸಿಂಹಮೂರ್ತಿ, ಎಸ್.ಪುಟ್ಟರಾಜು, ಎಸ್.ರಾಮಲಕ್ಷ್ಮಿ, ಎಚ್.ಎಸ್.ತಾಂಡವಮೂರ್ತಿ, ವಿ.ಆರ್. ರಾಜಗೋಪಾಲ್, ಡಿ.ನಾರಾಯಣ, ಡಾ.ಸಿ.ಪಿ.ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಗುವುದು. ನಂತರ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಏಕಾಂತರಾಜು, ಜಯಲಕ್ಷ್ಮಿ, ಬಿ.ಆರ್.ಜ್ಯೋತಿ, ಮಂಜುನಾಥ್, ಲಕ್ಷ್ಮಿಕಾಂತ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು ಮಾನವ ಹಕ್ಕುಗಳ ದಿನಾಚರಣೆ

ಮೈಸೂರು,ಡಿ.9–ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜೆಎಸ್‌ಎಸ್ ಕಾನೂನು ಕಾಲೇಜು ವತಿಯಿಂದ ಡಿ.10ರಂದು ಬೆಳಗ್ಗೆ 10ಕ್ಕೆ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಮಾನವ ಹಕ್ಕುಗಳ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂಸಂ: 0821–2513225 ಸಂಪರ್ಕಿಸಿ.

ಓಡಿಪಿ ಸಂಸ್ಥೆಯಲ್ಲಿ ಮಹಿಳೆಯರಿಗೆ ಸ್ವಯಂ ಉದ್ದಿಮೆ ತರಬೇತಿ ಸಮಾರೋಪ

ತರಬೇತಿದಾರರಿಂದಲೇ ತಯಾರಿಸಿದ ವಸ್ತುಗಳ, ಆಹಾರ ಪದಾರ್ಥಗಳ ಪ್ರದರ್ಶನ, ಮಾರಾಟ





ಮೈಸೂರಿನ ಓಡಿಪಿ ಸಂಸ್ಥೆಯಲ್ಲಿ ಯಶಸ್ವಿ ಉದ್ದಿಮೆ ತರಬೇತಿ ಪಡೆದು ಯಶಸ್ವಿಯಾದ ಮೈಸೂರಿನ ಮೊಗರಹಳ್ಳಿ ಮಂಟಿಯ ನಿರ್ಮಲಾರಾಣಿ, ಯಾದವಗಿರಿಯ ಲಕ್ಷ್ಮಿ, ರಾಜೀವ್‌ನಗರದ ಯಶೋಧಾ ಸಾಮ್ಯುಯಲ್ ಅವರನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಆರ್.ಕೃಷ್ಣಮೂರ್ತಿ, ಓಡಿಪಿ ಸಂಸ್ಥೆಯ ನಿರ್ದೇಶಕ ಫಾ.ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಎಫ್‌ವಿಟಿಆರ್‌ಎಸ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಫೆಲಿಕ್ಸ್ ಡಿ'ಸೋಜ ಅಭಿನಂದಿಸಿದರು. ತರಬೇತಿ ಪಡೆದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಯಲ್ಲಿ ಪಾಲ್ಗೊಂಡಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.9(ಆರ್‌ಕೆಬಿ)– ಮೈಸೂರಿನ ಓಡಿಪಿ ಸಂಸ್ಥೆ, ಸಿಟಿ ಬ್ಯಾಂಕ್, ಚೈಲ್ಡ್ ಫಂಡ್ ಇಂಡಿಯಾ, ಎಫ್‌ವಿಟಿಆರ್‌ಎಸ್ ಬೆಂಗಳೂರು ಜಂಟಿ ಆಶ್ರಯದಲ್ಲಿ ಉದ್ಯಮಶೀಲತೆ ತರಬೇತಿ ಪಡೆದವರಿಗೆ ಶುಕ್ರವಾರ ಓಡಿಪಿ (ದಿ ಆರ್ಗನೈಜೇಷನ್ ಫಾರ್ ದಿ ಡೆವಲಪ್‌ಮೆಂಟ್ ಆಫ್ ಪೀಪಲ್) ಸಂಸ್ಥೆಯ ಆವರಣದಲ್ಲಿ ಪ್ರಮಾಣ ಪತ್ರ ವಿತರಣೆ ಮತ್ತು ವಸ್ತು ಪ್ರದರ್ಶನ, ಮಾರಾಟ ಏರ್ಪಡಿಸಲಾಗಿತ್ತು. ನಾನಾ ತರಬೇತಿ ಪಡೆದ 400 ಮಂದಿ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಅತಿಥಿಗಳಿಂದ ಪ್ರಮಾಣ ಪತ್ರ ಸ್ವೀಕರಿಸಿದರು.

ವಸ್ತು ಪ್ರದರ್ಶನ ಮತ್ತು ಮಾರಾಟದಲ್ಲಿ 80ಕ್ಕೂ ಹೆಚ್ಚು ಮಳಿಗೆಗಳಲ್ಲಿ ತರಬೇತಿ ಪಡೆದವರಿಂದಲೇ ವಸ್ತುಗಳು ಹಾಗೂ ಆಹಾರ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟವಿತ್ತು. ಈ ವೇಳೆ ಯಶಸ್ವಿ ತರಬೇತಿ ಪಡೆದು ಉದ್ದಿಮೆ ಆರಂಭಿಸಿ, ಯಶಸ್ವಿಯಾದ ಮೈಸೂರಿನ ಮೊಗರಹಳ್ಳಿ ಮಂಟಿಯ ನಿರ್ಮಲಾರಾಣಿ, ಯಾದವಗಿರಿಯ ಲಕ್ಷ್ಮಿ ಮತ್ತು ರಾಜೀವ್‌ನಗರದ ಯಶೋಧಾ ಸಾಮ್ಯುಯಲ್ ಅವರನ್ನು ಅತಿಥಿಗಳು ಅಭಿನಂದಿಸಿದರು.

ತಮ್ಮ ಅನುಭವ ಹಂಚಿಕೊಂಡ ನಿರ್ಮಲಾರಾಣಿ, ಕೇವಲ ಬಳೆಯನ್ನಷ್ಟೇ ಮಾರುತ್ತಿದ್ದ ನನಗೆ ಕೋವಿಡ್ ಸಂದರ್ಭದಲ್ಲಿ ಬಹಳಷ್ಟು ಕಷ್ಟ ಅನುಭವಿಸಬೇಕಾಯಿತು. ಆಗ ನನ್ನ ನೆರವಿಗೆ ಬಂದಿದ್ದು ಓಡಿಪಿ ಸಂಸ್ಥೆ. ಇಲ್ಲಿ ಪಡೆದ ತರಬೇತಿ ಜೊತೆಗೆ 12 ಸಾವಿರ ರೂ. ಆರ್ಥಿಕ ನೆರವಿನಲ್ಲಿ 6 ಸಾವಿರ ವಿನಿಯೋಗಿಸಿ, ಆಸ್ಪತ್ರೆಗಳಿಗೆ ಸಿಲ್ಕ್ ಕ್ಲಾತ್ ಪೂರೈಕೆ ಮಾಡಿದೆ. ಕೇವಲ 6 ಸಾವಿರ ಬಂಡವಾಳ ಡಬ್ಬಲ್, ತ್ರಿಬ್ಬಲ್ ಆಯಿತು. ಮುಂದೆ ಅದು ಲಕ್ಷವನ್ನೂ ಮೀರಿ ಇಂದು 3.5 ಲಕ್ಷ ರೂ.ಗಳ ಬಂಡವಾಳವಾಗಿ ಅಂಗಡಿ ಮಾಡಿದ್ದೇನೆ. ವ್ಯಾಪಾರ ಉತ್ತಮವಾಗಿ ನಡೆಯುತ್ತಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.


ಗೌಸಿಯಾನಗರದ ಉಸ್ಮಾನಿಯಾ ಬ್ಲಾಕ್‌ನ ಸುಮಯ್ಯ ಸುಲ್ತಾನಾ ಮಾತನಾಡಿ, ಕೇವಲ ಸಣ್ಣ ಟೈಲರಿಂಗ್ ಮಾಡುತ್ತಿದ್ದ ನನಗೆ ತರಬೇತಿಯಿಂದ ಬಹಳಷ್ಟು ಅನುಕೂಲವಾಯಿತು. ಮನೆಯಲ್ಲೀಗ ಗಾರ್ಮೆಂಟ್ ತೆರೆದು, ಟೈಲರಿಂಗ್ ಮಾಡಿ ಸಂಪಾದಿಸುತ್ತಿದ್ದೇನೆ. ಇದು ನನ್ನ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿದೆ ಎಂದರು.

ಗೌಸಿಯಾನಗರದ ರುಕ್ಸಾ ಮಾತನಾಡಿ, ಕಡಿಮೆ ಹಣದಲ್ಲಿ ಹೆಚ್ಚು ಸಂಪಾದಿಸುವುದನ್ನು ತರಬೇತಿಯಲ್ಲಿ ಕಲಿತು, ಮುದ್ರಾ ಸಾಲ ಪಡೆದು, ಇದ್ದ ಚಿಕ್ಕ ಅಂಗಡಿ ಈಗ ದೊಡ್ಡ ಅಂಗಡಿ ಮಾಡಿ, ಸಾಲ ತೀರಿಸುತ್ತಿದ್ದೇನೆ. ಅಂಗಡಿಯಲ್ಲಿ ಈಗ ಫ್ರಿಡ್ಜ್, ಶೋಕೇಸ್ ಎಲ್ಲವನ್ನೂ ಮಾಡಿ, ಉತ್ತಮ ವ್ಯಾಪಾರ ನಡೆಸುತ್ತಿದ್ದೇನೆ. ತರಬೇತಿ ನೀಡಿದ ಸಂಸ್ಥೆಗಳಿಗೆ ಧನ್ಯವಾದ ತಿಳಿಸಬಯಸುತ್ತೇನೆ ಎಂದು ಸಂತಸದಿಂದ ಹೇಳಿದರು.

ಪ್ರದರ್ಶನ ಮತ್ತು ಮಾರಾಟದಲ್ಲಿದ್ದ 80 ಮಳಿಗೆಗಳಲ್ಲಿ ರೆಡಿಮೇಡ್ ಗಾರ್ಮೆಂಟ್ಸ್, ಬೇಕರಿ ಉತ್ಪನ್ನಗಳು, ದ್ರಾಕ್ಷಾರಸ, ಕುರುಕಲು ತಿಂಡಿ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಜ್ಯೂಸ್, ಗೋಬಿ, ಬಿರಿಯಾನಿ ಸೇರಿದಂತೆ ನಾನಾ ರೀತಿಯ ವಸ್ತುಗಳ ಮಾರಾಟವಿತ್ತು.

ಇದಕ್ಕೂ ಮುನ್ನ ಸಮಾರೋಪ ಸಮಾರಂಭಕ್ಕೆ ಚಾಲನೆ ನೀಡಿದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಆರ್.ಕೃಷ್ಣಮೂರ್ತಿ ಮಾತನಾಡಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಬಡವರ್ಗದ ಜನರಿಗೆ ಸಿಗುವ ಸರ್ಕಾರಿ ಯೋಜನೆಗಳ ಬಗ್ಗೆ ಪರಿಚಯ ಮಾಡಿಕೊಟ್ಟರು. ತರಬೇತಿ ಬಳಿಕ ತಯಾರಿಸಿದ ವಸ್ತುಗಳ ಗುಣಮಟ್ಟ ಕಾಯ್ದುಕೊಳ್ಳುವ ಜೊತೆಗೆ, ನೀವು ತಯಾರಿಸಿದ ವಸ್ತುಗಳ ಮೇಲೆ ಗುಣಮಟ್ಟ ಖಾತರಿ ಲೇಬಲ್, ಮಾರುಕಟ್ಟೆ ಒದಗಿಸಿ ಕೊಳ್ಳುವ ಪ್ರಯತ್ನ ಮಾಡಬೇಕು. ಇಲಾಖೆಯಲ್ಲಿ ಅಲ್ಪಸಂಖ್ಯಾತ ಸಮುದಾಯದವರಿಗೆ 20 ಲಕ್ಷದವರೆಗೆ ಶೇ.4ರ ಬಡ್ಡಿಯಲ್ಲಿ ಸಾಲ ಸೌಲಭ್ಯವಿದ್ದು, ಈ ಸೌಲಭ್ಯ ಬಳಸಿಕೊಂಡು, ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗುವಂತೆ ಸಲಹೆ ನೀಡಿದರು.

ಬೆಂಗಳೂರಿನ ಎಫ್‌ವಿಟಿಆರ್‌ಎಸ್ (ಫಂಕ್ಷನಲ್ ವೊಕೇಷನಲ್ ಟ್ರೈನಿಂಗ್ ಅಂಡ್ ರೀಸರ್ಚ್ ಸೊಸೈಟಿ) ಕಾರ್ಯನಿರ್ವಾಹಕ ನಿರ್ದೇಶಕ ಫೆಲಿಕ್ಸ್ ಡಿ'ಸೋಜ ಅಧ್ಯಕ್ಷತೆ ವಹಿಸಿದ್ದರು. ಯೋಜನಾಧಿಕಾರಿ ಜಿಮ್ಮಿ ಮ್ಯಾಥ್ಯೂ, ಲೆಕ್ಕಾಧಿಕಾರಿ ಮಧುಸೂದನ್, ಸಂಯೋಜಕಿ ಕುಮಾರಿ ಬೆಡ್ಸಿ, ಓಡಿಪಿ ಸಂಸ್ಥೆಯ ನಿರ್ದೇಶಕ ಫಾ.ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಯೋಜನಾ ಸಂಯೋಜಕಿ ಮೊಲ್ಲಿ ಫುರ್ಟಡೋ, ಜ್ಯೋತಿ ನಿಲಯ ಸಮಾಜ ಸೇವಾ ಸಂಸ್ಥೆಯ ಸಿಸ್ಟರ್ ಮೋನಿಕಾ ಶಾಂತಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಮಂಚೇಗೌಡನಕೊಪ್ಪಲಿನಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವರಸಿದ್ಧಿ ವಿನಾಯಕ ದೇವಾಲಯಕ್ಕೆ ಶಾಸಕ ಜಿ.ಟಿ.ದೇವೇಗೌಡ ಭೇಟಿ ನೀಡಿದ ವೇಳೆ ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘದಿಂದ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಡಿ.ರಾಮಚಂದ್ರು, ಕಾರ್ಯದರ್ಶಿ ರವಿ, ಉಪಾಧ್ಯಕ್ಷ ಸಿ.ಮಂಜುನಾಥ್ ಇತರರಿದ್ದರು.

6 ತಿಂಗಳ ನಂತರ ಡಿ.16ರಂದು ಮುಡಾ ಸಭೆ

ಮೈಸೂರು, ಡಿ.9(ಆರ್‌ಕೆ)–ಮೂರು ಬಾರಿ ಮುಂದೂಡಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಭೆಯು 6 ತಿಂಗಳ ನಂತರ ಡಿಸೆಂಬರ್ 16ರಂದು ನಿಗದಿಯಾಗಿದೆ. ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ನಗರ ಯೋಜನಾ ವಿಭಾಗ, ಇಂಜಿನಿಯರಿಂಗ್, ನಿವೇಶನ, ಭೂಸ್ವಾಧೀನ ಶಾಖೆ ಸೇರಿದಂತೆ 350ಕ್ಕೂ ಅಧಿಕ ವಿಷಯಗಳು ಚರ್ಚೆಗೆ ಬರಲಿವೆ.

ಈ ಹಿಂದೆ ಜೂನ್ 22ರಂದು ನಡೆದ ಮುಡಾ ಸಭೆಯಲ್ಲಿ ಹಲವು ಮಹತ್ವದ ವಿಷಯಗಳು ಇತ್ಯರ್ಥವಾಗಿದ್ದನ್ನು ಹೊರತುಪಡಿಸಿದರೆ, ಬೇರೆ ಬೇರೆ ಕಾರಣಗಳಿಂದಾಗಿ ಕಳೆದ 6 ತಿಂಗಳಿಂದ ಸಭೆಗಳೇ ನಡೆದಿರಲಿಲ್ಲ. ಮೂರು ಬಾರಿ ನಿಗದಿಯಾಗಿದ್ದ ಸಭೆಗಳನ್ನೂ ಸಹ ಮುಂದೂಡಲಾಗಿತ್ತು. ಪರಿಣಾಮ ವಸತಿ ಬಡಾವಣೆಗಳಿಗೆ ನಕ್ಷೆ ಅನುಮೋದನೆ, ನಿವೇಶನಗಳ ಬಿಡುಗಡೆ, ತುಂಡು ಭೂಮಿ ಮಂಜೂರು, 152 ಸಿಎ ನಿವೇಶನಗಳ ಹಂಚಿಕೆಗೆ ಅನುಮೋದನೆ ಸೇರಿದಂತೆ ಹಲವು ವಿಷಯಗಳು ಡಿಸೆಂಬರ್ 16ರ ಸಭೆಯಲ್ಲಿ ಚರ್ಚೆಗೆ ಬರಲಿವೆ.

ಜನಸಂಪರ್ಕ ಸಭೆ

ಮೈಸೂರು,ಡಿ.9–ನ.ರಾ ಮೊಹಲ್ಲಾ ವಿಭಾಗದ ವ್ಯಾಪ್ತಿಯ ಕೇಂದ್ರ, ಚಾಮುಂಡಿಪುರಂ, ಹಾಗೂ ವರುಣ ಉಪವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆ ನಡೆಸಲು ಉದ್ದೇಶಿಸಿದ್ದು, ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಡಿ.13ರ ಬೆಳಗ್ಗೆ 11ಕ್ಕೆ ಕೇಂದ್ರ ಕಚೇರಿಯಲ್ಲಿ, ಮಧ್ಯಾಹ್ನ 3ಕ್ಕೆ ಚಾಮುಂಡಿಪುರಂ, ಡಿ.14ರ ಬೆಳಗ್ಗೆ 11ಕ್ಕೆ ನ.ರಾ ಮೊಹಲ್ಲಾ, ಮಧ್ಯಾಹ್ನ 3ಕ್ಕೆ ಜ್ಯೋತಿನಗರ, ಡಿ.15ರ ಬೆಳಗ್ಗೆ 11ಕ್ಕೆ ವರುಣದಲ್ಲಿ ಜನಸಂಪರ್ಕ ಸಭೆಯಲ್ಲಿ ಹಾಜರಾಗಿ ಸಲಹೆ ಸೂಚನೆ ನೀಡಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ನಿತ್ಯಾರಾಧನೆ, ಬೆಳಗ್ಗೆ 9ಕ್ಕೆ ನವಗ್ರಹ ಶಾಂತಿ ಹೋಮ, ಶನಿಶಾಂತಿ ಹೋಮ, ನವನೀತ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಸೇಂಟ್ ಥಾಮಸ್ ಇನ್‌ಸ್ಟಿಟ್ಯೂಷನ್ಸ್:** ವಿಜ್ಞಾನ ಪ್ರದರ್ಶನ–2022, ಅಧ್ಯಕ್ಷತೆ: ಸೇಂಟ್ ಥಾಮಸ್ ಇನ್‌ಸ್ಟಿಟ್ಯೂಷನ್ಸ್ ವ್ಯವಸ್ಥಾಪಕ ರೆ.ಶೈಜು ಪಿ.ಜಾನ್, ಸ್ಥಳ: ಸೇಂಟ್ ಥಾಮಸ್ ಶಾಲೆ ಆವರಣ, ವಿಶ್ವೇಶ್ವರನಗರ, ಬೆಳಗ್ಗೆ 9ಕ್ಕೆ.

■ **ದಸರಾ ವಸ್ತುಪ್ರದರ್ಶನ :** ಸಂಜೆ 6.30ರಿಂದ ಬಾಲಾಜಿ ಭಜನಾ ಮಂಡಳಿಯ ವೀಣಾ ಅವರಿಂದ ಭಜನೆ, ರಾತ್ರಿ 7 ರಿಂದ ಯೋಗನರಸಿಂಹ ಭಜನಾ ಮಂಡಳಿಯ ವನಜಾಕ್ಷಿ ಅವರಿಂದ ಸುಗಮ ಸಂಗೀತ, ರಾತ್ರಿ 8 ರಿಂದ ಮ್ಯೂಸಿಕಲ್ ಗ್ರೂಪ್‌ನ ನಂಜಮ್ಮ ಅವರಿಂದ ಆರ್ಕೆಸ್ಟ್ರಾ, ಸ್ಥಳ: ಪಿ. ಕಾಳಿಂಗರಾವ್ ಕಲಾ ಮಂಟಪ.

■ **ಸದ್ವಿದ್ಯಾ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ :** ವಾರ್ಷಿಕ ಕ್ರೀಡಾಕೂಟ, ಮುಖ್ಯ ಅತಿಥಿಗಳು: ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಚಿದಾನಂದಗೌಡ, ಗೌರವ ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಅಧ್ಯಕ್ಷ ಪ್ರೊ ಗೋಪಾಲಚಾರ್, ಪ್ರತಿಜ್ಞಾ ಬೋಧನೆ: ಪ್ರೊ. ನರಹರಿಬಾಬು, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 9ಕ್ಕೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.


■ **ವಿವೇಕಾನಂದ ಭಾರತೀಯ ಅಧ್ಯಯನ ಸಂಸ್ಥೆ, ಸ್ವರಾಲಯ ಆರ್ಟ್ಸ್ ಫೋರಂ ಹ್ಯೂಸ್ಟನ್ (ಯುಎಸ್‌ಎ):** 14ನೇ ವಾರ್ಷಿಕ ಸುಲೋಚನಾ ಪಟ್ಟಾಭಿರಾಮನ್ ಉತ್ಸವ, ಮುಖ್ಯ ಅತಿಥಿಗಳು: ವಿದುಷಿ ಧರಿತ್ರಿ ಆನಂದ ರಾವ್, ಅಧ್ಯಕ್ಷತೆ : ಶ್ರೀಮತಿ ಶ್ರೀನಿಧಿ, ಸ್ಥಳ: ವಿವೇಕಾನಂದ ಭಾರತೀಯ ಅಧ್ಯಯನ ಸಂಸ್ಥೆ, ಹೆಬ್ಬಾಳು, ಬೆಳಗ್ಗೆ 10ಕ್ಕೆ.

■ **ರೀಜನಲ್ ಟಿಬೇಟಿಯನ್ ಯೂತ್ ಕಾಂಗ್ರೆಸ್ ಮತ್ತು ಮಹಿಳಾ ಸಂಘ ಬೈಲುಕುಪ್ಪೆ** ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ಶಾಂತಿಯುತ ಮೆರವಣಿಗೆ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ಕನ್ನಡ ಹಬ್ಬ, ಕನ್ನಡ ವಿಕಾಸ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪ್ರಾಸ್ತಾವಿಕ ನುಡಿ: ವೇದಿಕೆ ಅಧ್ಯಕ್ಷೆ ಹೆಚ್.ಎಲ್ ಯಮುನಾ, ಅಧ್ಯಕ್ಷತೆ: ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ. ರಾಮು, ಪ್ರಶಸ್ತಿ ಪ್ರದಾನ ಮಾಡುವವರು: ಶಾಸಕ ಎಲ್. ನಾಗೇಂದ್ರ, ಮಾಜಿ ಶಾಸಕ ವಾಸು, ಅಶೋಕ್ ಚಿಕ್ಕ ರಾಮೇಗೌಡ, ಕವೀಶ್‌ಗೌಡ, ನಂದೀಶ್, ಪ್ರಶಸ್ತಿ ಪುರಸ್ಕೃತರು: ಸಾಹಿತಿ ಸತೀಶ್ ಜವರೇಗೌಡ, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್:** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು: ರಾಮಯ್ಯ ವಿವಿ ಕುಲಪತಿ ಡಾ.ಕುಲದೀಪ್‌ಕುಮಾರ್ ರೈನಾ, ಅಧ್ಯಕ್ಷತೆ: ಎನ್‌ಐಇ ಆಡಳಿತ ಮಂಡಳಿ ನಿರ್ದೇಶಕ ಶ್ರೀನಾಥ್ ಬಾಟ್ನಿ, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಬೆಳಗ್ಗೆ 10.30ಕ್ಕೆ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ,**



ಇಂದಿನ ಪಂಚಾಂಗ

10.12.2022 ಶನಿವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಿತೀಯ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

ಮೈಸೂರು ಕೇಂದ್ರ: ಮೈಬಿಲ್ಡ್ ವಸ್ತುಪ್ರದರ್ಶನ, ಉದ್ಘಾಟನೆ: ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಶ್ರೀ ಸ್ವಾಮಿ ಯುಕ್ತೇಶಾನಂದ ಸ್ವಾಮೀಜಿ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಮಹಾಜನ ಕಾನೂನು ಕಾಲೇಜು:** ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ, ಉದ್ಘಾಟನೆ: ಹುಬ್ಬಳ್ಳಿ ಕಾನೂನು ವಿವಿ ಕುಲಪತಿ ಪ್ರೊ ಬಸವರಾಜು, ಅಧ್ಯಕ್ಷತೆ: ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ್ ಭಾಗವತ್, ಸಂಪನ್ಮೂಲ ವ್ಯಕ್ತಿ: ಡಾ.ಸತೀಶ್ ಗೌಡ, ಮುಖ್ಯ ಅತಿಥಿಗಳು: ಪ್ರತಾಪ್ ಲಿಂಗಯ್ಯ, ಡಾ. ಎಂ.ಬಿ. ಸುರೇಶ್, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ:** ಸಾಧಕರೊಂದಿಗೆ ಸಂವಾದ ತಿಂಗಳ ಸಾಧಕರು ಬಹುಮುಖಿ ಕೆ.ಎಸ್.ರಾಘವೇಂದ್ರ, ಮುಖ್ಯ ಅತಿಥಿಗಳು: ರಾಮ್‌ಸನ್ಸ್ ಪ್ರತಿಷ್ಠಾನ ಮುಖ್ಯಸ್ಥ ಆರ್.ಜಿ. ಸಿಂಗ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ

■ **ಅಕಾಡೆಮಿ ಆಫ್ ಫ್ಯಾಮಿಲಿ ಫಿಸಿಷಿಯನ್ಸ್ ಆಫ್ ಇಂಡಿಯಾ, ಜೆಎಸ್‌ಎಸ್ ಆಸ್ಪತ್ರೆ:** ಎಎಫ್‌ಪಿ ಐಕಾನ್ ಕರ್ನಾಟಕ–2022, ಫ್ಯಾಮಿಲಿ ಮೆಡಿಸಿನ್ ಅಪ್‌ಡೇಟ್ ಕುರಿತು 3ನೇ ರಾಜ್ಯ ಮಟ್ಟದ ಸಮ್ಮೇಳನ, ಗೌರವ ಅತಿಥಿಗಳು: ಬೆಂಗಳೂರು ಮೆಡಿಕಲ್ ಕಾಲೇಜು ಡೀನ್ ಡಾ.ಕೆ.ರವಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ.ಹೆಚ್. ಬಸವನಗೌಡಪ್ಪ, ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ.ದಾಕ್ಷಾಯಿಣಿ, ಎಎಫ್‌ಪಿಐ ಚುನಾಯಿತ ರಾಷ್ಟ್ರೀಯ ಅಧ್ಯಕ್ಷ ಡಾ.ಮೋಹನ್ ಕುಬೇಂದ್ರ, ಪ್ರಾಸ್ತಾವಿಕ ಭಾಷಣ: ಎಎಫ್‌ಪಿಐ ರಾಷ್ಟ್ರೀಯ ಅಧ್ಯಕ್ಷ ಡಾ.ರಾಮನ್‌ಕುಮಾರ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಮಧ್ಯಾಹ್ನ 12ಕ್ಕೆ

■ **ಪದವಿಪೂರ್ವ ಶಿಕ್ಷಣ ಇಲಾಖೆ, ಸಂತ ಫಿಲೋಮಿನಾ ಪದವಿಪೂರ್ವ ಕಾಲೇಜು :** ಟೇಬಲ್ ಟೆನ್ನಿಸ್ ಪಂದ್ಯಾವಳಿಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಶಾಖಾಧಿಕಾರಿ ವಿರುಪಾಕ್ಷಪ್ಪ ಅಂಗಡಿ, ಮೈಸೂರು ಜಿಲ್ಲಾ ಪ್ರಾಂಶುಪಾಲರ ಸಂಘದ ಉಪಾಧ್ಯಕ್ಷೆ ನಾಗಮ್ಮ, ಬಹುಮಾನ ವಿತರಣೆ: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಕೃಷ್ಣಯ್ಯ, ಕಾಲೇಜು ಸಂಚಾಲಕ ಮುರಳೀಧರ್, ಸ್ಥಳ: ಸಂತ ಫಿಲೋಮಿನಾ ಕಾಲೇಜು ಒಳಾಂಗಣ, ಮಧ್ಯಾಹ್ನ 3.30ಕ್ಕೆ.

■ **ದಕ್ಷಿಣ ಭಾರತದ ಅತೀ ದೊಡ್ಡ ಫ್ಯಾಷನ್ ವೀಕ್:** ಮೈಸೂರು ಫ್ಯಾಷನ್ ವೀಕ್ ಸೀಸನ್–6, ಸ್ಥಳ: ಮೈಸೂರು ಯೂನಿಯನ್, ಸಂಜೆ 4ರಿಂದ.

■ **ಓಡಿಸ್ಸಿ ಇಂಟರ್‌ನ್ಯಾಷನಲ್ ಫೋರಂ, ಪೂರಿ ಜಗನ್ನಾಥ್ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್ :** ಮೈಸೂರು ಓಡಿಸ್ಸಿ ಉತ್ಸವ, ಅತಿಥಿಗಳು: ಇಂಟರ್‌ನ್ಯಾಷನಲ್ ಓಡಿಸ್ಸಿ ಫೆಸ್ಟಿವಲ್ ಸ್ಥಾಪಕ ಶ್ಯಾಮ್ ಹರಿ ಚಕ್ರ, ಪೂರಿ ಜಗನ್ನಾಥ್ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಘನಶ್ಯಾಮ್ ಪ್ರಧಾನ್, ಭೂಷಣ್ ಪ್ರದರ್ಶಕ ಕಲೆಗಳ ಅಕಾಡೆಮಿ ಸ್ಥಾಪಕ ಬದರಿ ದಿವ್ಯಾ ಭೂಷಣ್, ಶ್ರೀಕೃಷ್ಣ ಗಾನಸಭಾ ಅಧ್ಯಕ್ಷ ಶ್ರೀಧರ್ ರಾಜೇ ಅರಸ್, ಭರತನಾಟ್ಯ ಕಲಾವಿದೆ ಕೃಪಾ ಫಡ್ಕೆ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್:** 88ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ಡಾ.ವಿಜಯೇಂದ್ರಾ ಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ ಪ್ರವಚನ, ಸ್ಥಳ: ಟ್ರಸ್ಟ್ ಆವರಣ, ಶ್ರೀ ಗೀತಾಮಂದಿರ ರಸ್ತೆ, ಅಶೋಕ ರಸ್ತೆ.

■ **ಶ್ರೀ ನಾಗಾನಂದ ದತ್ತಾತ್ರೇಯ ಮಠ:** ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 47ನೇ ವರ್ಷದ ಸಪ್ತಾಹ, ಕಳಸ ಸ್ಥಾಪನೆ, ಗಣಪತಿ ಪೂಜೆ, ವರುಣ ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ, ದತ್ತ ಸಹಸ್ರನಾಮ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11ರಿಂದ ಭಜನೆ, ಶ್ರೀ ದತ್ತಾತ್ರೇಯ ಉತ್ಸವ, ಔದಂಬರ ಪೂಜೆ, ಮ. 1.30ಕ್ಕೆ ಮಹಾಮಂಗಳಾರತಿ, ಶ್ರೀಯವರಿಂದ ಪ್ರವಚನ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಮಠದ ಆವರಣ, ಬೆಲವತ್ತ ಗ್ರಾಮ.

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಗಾನಭಾರತೀ:** ದಿವಂಗತ ಕೆ.ವನಜಾಕ್ಷಮ್ಮ ಸಂಸ್ಮರಣಾ ಅಂಗವಾಗಿ 27ನೇ ಸಂಗೀತ–ನೃತ್ಯ ಆರಾಧನೆ, ಸಂಜೆ 6ರಿಂದ ಪ್ರೊ.ಎಸ್. ಮಲ್ಲಣ್ಣ ಹಾಗೂ ಕು.ಸುದೇಷ್ಣಾ ಅವರಿಂದ ಸುಗಮ ಸಂಗೀತ ಗಾಯನ, ವಿದ್ವಾನ್ ಎಂ.ಆರ್.ಹನುಮಂತರಾಜು–ತಬಲಾ, ವಿದ್ವಾನ್ ಎ.ಎಸ್.ಪ್ರಸನ್ನಕುಮಾರ್–ಕೀಬೋರ್ಡ್, ಸಂಜೆ 7ರಿಂದ ನೂಪುರ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು : ಭರತಾಂಜಲಿ ನೃತ್ಯಶಾಲೆ ನಿರ್ದೇಶಕ ಡಾ. ಶೀಲಾ ಶ್ರೀಧರ್, ಅಧ್ಯಕ್ಷತೆ: ಜೆಎಸ್‌ಎಸ್ ಕಾಲೇಜು ಪ್ರಾಂಶುಪಾಲ ಪ್ರೊ.ಮಲ್ಲಣ್ಣ, ಉಪಸ್ಥಿತರು: ನೃತ್ಯಗಿರಿ ಸಂಸ್ಥೆ ನಿರ್ದೇಶಕರಾದ ಡಾ.ಕೃಪಾ ಫಡ್ಕೆ, ಸಂಜೆ 7.30ರಿಂದ ವಿದ್ವಾನ್ ಕೆ.ಆರ್.ವಿಶ್ವದೀಪ ಅವರಿಂದ ಭರತನಾಟ್ಯ, ಸ್ಥಳ:ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮ



■ **ವನರಂಗ :** ಮೈಸೂರಿನ ಸುಂದರೇಶ ಮತ್ತು ತಂಡದವರಿಂದ ಡೊಳ್ಳು ಕುಣಿತ, ಯದುಕುಮಾರ್ ಮತ್ತು ತಂಡದಿಂದ ನಾದಸ್ವರ, ಸಂಜೆ 5ರಿಂದ

■ **ಶ್ರೀರಂಗ ಮಂದಿರ (ಚಲನಚಿತ್ರೋತ್ಸವ) :** ಬೆಳಗ್ಗೆ 10.30 ರಿಂದ ಹಿಮಾಲಯ ವಿತ್ ಮೈಕಲ್ ಪಾಲಿನ್–ಲೀಪಿಂಗ್ ಟೈಗರ್ಸ್ ಅಂಡ್ ನೇಕೆಡ್ ನಾಗಾಸ್ ಇಂಗ್ಲಿಷ್ ಚಲನಚಿತ್ರ, ನಿರ್ದೇಶನ : ಜಾನ್ ಪಾಲ್ ಡೇವಿಡ್‌ಸನ್, ಮಧ್ಯಾಹ್ನ 12 ರಿಂದ ಇಂಡೋ–ಪಾಕ್ ಕಾನ್‌ಫ್ಲಿಕ್ಟ್–1971ವ (ಇ), ನಿರ್ದೇಶನ: ಫಿಲ್ಮ್ ಡಿವಿಷನ್, ಮುಕ್ತಿ –2017 (ಇ), ನಿರ್ದೇಶನ : ಮನು ಚೊಬೆ, ಮಧ್ಯಾಹ್ನ 2ರಿಂದ 1971 (2020) (ಇ), ನಿರ್ದೇಶನ : ಅಮೃತ್ ಸಾಗರ್.

■ **ಬಿ.ವಿ. ಕಾರಂತ ರಂಗಚಾವಡಿ :** ಬೆಳಗ್ಗೆ 10.30ಕ್ಕೆ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಲೇಖಕಿ ಡಾ.ಲೀಲಾ, ಮುಖ್ಯ ಅತಿಥಿಗಳು : ನಾಟಕಕಾರ ಸೇತುರಾಂ, ಅಧ್ಯಕ್ಷತೆ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಮಧ್ಯಾಹ್ನ 12.15 ರಿಂದ ಗೋಷ್ಠಿ–1 ವಿಷಯ: ಪ್ರಾಚೀನ ಸಂಸ್ಕೃತಿ ಮತ್ತು ಭಾರತೀಯತೆ, ಉಪನ್ಯಾಸ: ಚಿಂತಕರಾದ ಡಾ.ವಿ.ಜಿ.ಆರತಿ, ಅಧ್ಯಕ್ಷತೆ : ಶಿಕ್ಷಣ ತಜ್ಞ ಕೆ.ಎಂ. ಅಶೋಕ್‌ಗೌಡ, ಮಧ್ಯಾಹ್ನ 1.30ರಿಂದ ಗೋಷ್ಠಿ–2 ವಿಷಯ: ಭವಿಷ್ಯದಲ್ಲಿ ಭಾರತೀಯ ಸಂಸ್ಕೃತಿ, ಉಪನ್ಯಾಸ : ವಾಗ್ಮಿ ರಮಾನಂದ ಐನಕೈ, ಅಧ್ಯಕ್ಷತೆ: ಸಂಸ್ಕೃತ ವಿದ್ವಾಂಸ ಹೆಚ್.ವಿ. ನಾಗರಾಜರಾವ್.

■ **ವನರಂಗ :** ಬಹುರೂಪಿ ಉತ್ಸವ, ಉದ್ಘಾಟನೆ : ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ, ರಂಗೋತ್ಸವ ಪುಸ್ತಿಕೆ ಬಿಡುಗಡೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಬುಲೆಟಿನ್ ಬಿಡುಗಡೆ : ಸಚಿವ ವಿ. ಸುನೀಲ್‌ಕುಮಾರ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ಚಲನಚಿತ್ರ ನಟ ರಮೇಶ್ ಅರವಿಂದ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಸಂಜೆ 5.30ಕ್ಕೆ.

■ **ಭೂಮಿಗೀತ :** ತಿರುವನಂತಪುರಂನ ಸೋಪಾನಂ ತಂಡದಿಂದ ಕರ್ಣಭಾರಂ (ಸಂಸ್ಕೃತ) ನಾಟಕ ಪ್ರದರ್ಶನ, ರಚನೆ : ಮಹಾಕವಿ ಭಾಸ, ನಿರ್ದೇಶನ : ಕೆ.ಎನ್. ಫಣಿಕ್ಕರ್, ಸಂಜೆ 6.30ಕ್ಕೆ.

■ **ಸಂಪತ್ ರಂಗ ಮಂದಿರ :** ಮೈಸೂರಿನ ಅಭಿಯಂತರು ತಂಡದಿಂದ ಚಿದಂಬರ ರಹಸ್ಯ (ಕನ್ನಡ) ನಾಟಕ ಪ್ರದರ್ಶನ, ರಚನೆ : ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ : ಹೆಚ್.ಎಸ್. ಸುರೇಶ್‌ಬಾಬು, ಸಂಜೆ 7ಕ್ಕೆ

■ **ಕಲಾಮಂದಿರ :** ಬೆಂಗಳೂರಿನ ಸ್ಪಂದನ ತಂಡದಿಂದ ಕರಿಮಾಯಿ (ಕನ್ನಡ) ನಾಟಕ ಪ್ರದರ್ಶನ, ರಚನೆ: ಡಾ. ಚಂದ್ರಶೇಖರ ಕಂಬಾರ, ನಿರ್ದೇಶನ : ಬಿ. ಜಯಶ್ರೀ, ಸಂಜೆ 7.30ಕ್ಕೆ.

■ **ಕೌಟಿಲ್ಯ ವಿದ್ಯಾಲಯ:** ಸಾಂಸ್ಕೃತಿಕ ಪರ್ವ–2022–23, ಬೆಳಗ್ಗೆ 9.30ರಿಂದ ಕಿರಿಯರ ಕೀರ್ತಿಗೆ ಹಿರಿಯರ ಸ್ಫೂರ್ತಿ ಸಂಭ್ರಮಾಚರಣೆ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಶಾಸಕ ಜಿ.ಟಿ.ದೇವೇಗೌಡ, ಬೆಂಗಳೂರು ಆರ್‌ವಿ ವಿಶ್ವವಿದ್ಯಾನಿಲಯ ಕುಲಪತಿ ಡಾ.ವೈ.ಎಸ್.ಆರ್.ಮೂರ್ತಿ, ಗೌರವ ಅತಿಥಿಗಳು: ಚಿತ್ರನಟ ಡಾ.ಶ್ರೀನಾಥ್ ಮತ್ತು ಗೀತಾ ಶ್ರೀನಾಥ್, ಅಧ್ಯಕ್ಷತೆ: ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಟಿ.ಬಾಬು, ಮಧ್ಯಾಹ್ನ 3.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಆದಾಯ ಇಲಾಖೆ ಜಂಟಿ ಆಯುಕ್ತೆ ಶ್ಯಾಮಲಾ, ಕರ್ನಾಟಕ ಪೊಲೀಸ್ ಅಕಾಡೆಮಿ ಡಿಜಿಐಪಿ ಮತ್ತು ನಿರ್ದೇಶಕ ಅನುಪಮ್ ಅಗರವಾಲ್, ಅಧ್ಯಕ್ಷತೆ: ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಟಿ.ಬಾಬು, ಸ್ಥಳ:ಕರಾಮುವಿ ಘಟಿಕೋತ್ಸವ ಭವನ, ಮಾನಸಗಂಗೋತ್ರಿ

■ **ಮೈಸೂರು ವಿಶ್ವವಿದ್ಯಾನಿಲಯ:** ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿವಿ ಹಣಕಾಸು ಅಧಿಕಾರಿ ಡಾ.ಸಂಗೀತಾ ಗಜಾನನ ಭಟ್, ಮುಖ್ಯ ಅತಿಥಿಗಳು: ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ, ಸಂದರ್ಶಕ ಪ್ರಾಧ್ಯಾಪಕ ಪ್ರೊ.ರಾಮಸ್ವಾಮಿ, ನಿವೃತ್ತ ಪ್ರಾಧ್ಯಾಪಕ ಪ್ರೊ ಶ್ರೀನಿವಾಸ, ಚಂದನವಾಹಿನಿ ದೂರದರ್ಶನ ನಿರೂಪಕಿ ಶ್ರೀಮತಿ ಸವಿ ಪ್ರಕಾಶ್, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ :** 25ನೇ ವರ್ಷದ ರಜತ ಮಹೋತ್ಸವ, ಬೆಳಗ್ಗೆ 11ಕ್ಕೆ ಒಕ್ಕೂಟದ ವಿವಿಧ ಮಹಿಳಾ ಬಳಗಗಳಿಂದ ವಚನ ಗಾಯನ, ಮಧ್ಯಾಹ್ನ 12.30ಕ್ಕೆ ಬದನವಾಳು ಬಿ.ಶಿವಕುಮರಶಾಸ್ತ್ರಿ ಅವರಿಂದ ಸುಗಮ ಸಂಗೀತ, ಮಧ್ಯಾಹ್ನ 2.30ಕ್ಕೆ ಸಭಾ ಕಾರ್ಯಕ್ರಮ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಉಪಸ್ಥಿತರು: ಮಾಜಿ ಸಚಿವರಾದ ಈಶ್ವರ ಖಂಡ್ರೆ, ಭೀಮಣ್ಣ ಖಂಡ್ರೆ, ನೈಸ್ ಸಂಸ್ಥೆ ಮ್ಯಾನೇಜಿಂಗ್ ಡೈರೆಕ್ಟರ್ ಅಶೋಕ್ ಖೇಣಿ, ಮುಖ್ಯ ಅತಿಥಿಗಳು: ಸಚಿವರಾದ ಸಿ.ಸಿ.ಪಾಟೀಲ್, ಮುನೇನಕೊಪ್ಪ ಶಂಕರ್ ಪಾಟೀಲ್, ಶಶಿಕಲಾ ಎಸ್. ಜೊಲ್ಲೆ, ಶಾಸಕರಾದ ಸಿ.ಎಸ್.ನಿರಂಜನ್‌ಕುಮಾರ್, ಲಿಂಗೇಶ್, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ವಿದುಷಿ ಎಸ್. ಹಿರಣ್ಮಯಿ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಕೃತಿಕ್ ಕೌಶಿಕ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜಂ –ಮೃದಂಗ, ವಿದ್ವಾನ್ ಶ್ರೀನಿಧಿ–ಘಟ, ಸ್ಥಳ: ಶ್ರೀ ನಾದ ಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಕು. ಅಶ್ವಿನಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್ –ಮೃದಂಗ, ಸ್ಥಳ: ಶ್ರೀರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಕಲಾಸುರುಚಿ– ಕುತೂಹಲಿ:** ಸೈನ್ಸ್ ಸಂಜೆ, ಪ್ರವೀಣ್ ಕುಮಾರ್ ಸಯ್ಯಪರಾಜು ಅವರಿಂದ ಪಂಚಭೂತಗಳಿಂದ ಪ್ಲಾಟಿನಂವರೆಗೆ ಮೂಲವಸ್ತುಗಳ ಚರಿತ್ರೆ ಕುರಿತು ಉಪನ್ಯಾಸ, ಸ್ಥಳ: ಸುರುಚಿ ರಂಗ ಮನೆ, ಸಂಜೆ 6.30ಕ್ಕೆ


ಬಿಳುಗಲಿ ಗ್ರಾಮದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಅಧ್ಯಕ್ಷತೆ: ಗ್ರಾಪಂ ಅಧ್ಯಕ್ಷೆ ಅಂಬಿಕಾ, ಸಂವಿಧಾನ ಮತ್ತು ವಚನ ಸಾಹಿತ್ಯ ಕುರಿತು ಡಾ.ಪ್ರೇಮ್‌ಕುಮಾರ್ ಅವರಿಂದ ಉಪನ್ಯಾಸ, ಉಪಸ್ಥಿತರು : ಜೈನಹಳ್ಳಿ ಸತ್ಯನಾರಾಯಣಗೌಡ, ಸಂಜೆ 4ಕ್ಕೆ

ಚಿಕ್ಕೆರೆಯೂರಿನಲ್ಲಿಂದು, ಹೆಚ್.ಡಿ. ಕೋಟೆ ತಾಲೂಕು

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಡರ್ಸ್ :** ಚಿಕ್ಕರೆಯೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ದಂತ ಮತ್ತು ಆರೋಗ್ಯ ತಪಾಸಣೆ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖನ ದಾ.ಶ್ರೀರಾಮ್‌ಭಟ್, ಪ್ರಸ್ತುತಿ –ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ, ಲೇಖನ ಶ್ರೀನಿವಾಸ್‌ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ, 10.00 ವಿ.ದೊರೆಸ್ವಾಮಿ ಅಯ್ಯಂಗಾರ್ – ವೀಣಾವಾದನ.

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಮಹದೇವಮ್ಮ ಮತ್ತು ತಂಡ, 1.00 ಪ್ರಗತಿ ಪಥ– ಪ್ರಧಾನಮಂತ್ರಿ NIVVIK ಯೋಜನೆ, ಮಾತನಾಡುತ್ತಾರೆ ಡಾ.ಜಿ.ಅಚ್ಯುತರಾವ್, 1.20 ಭಾವಗೀತೆ, 3.30 ಮಕ್ಕಳ ಮಂಟಪ– ಮೆಲ್ಲಹಳ್ಳಿಯ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವಿವಿಧ್ಯ, 4.30 ನೆನಪಿನಂಗಳ–ಹಿರಿಯ ರಂಗ ಹಾಗೂ ಚಲನಚಿತ್ರ ಕಲಾವಿದರಾದ ಡಿಕ್ಕಿ ಮಾಧವರಾವ್ ಅವರೊಂದಿಗೆ ಹೆಚ್.ಕೆ.ರಾಮನಾಥ್ ನಡೆಸಿದ್ದ ಸಂವಾದ. ಪ್ರಸ್ತುತಿ– ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ, "ತೋರಣ ಹೂರಣ" ಪ್ರಸ್ತುತಿ– ಎಸ್.ಸುಬ್ರಹ್ಮಣ್ಯ, 9.15 ಮಾನವ ಹಕ್ಕುಗಳು–ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ್ ಭೂತೆ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಸುನೀಲ್ ಗಾರ್ಗೇಯನ್– ಗಾಯನ, ಮಾಂಬಳಂ ಷಣ್ಮುಗಂ– ತವಿಲ್, 10.30 ಸವಿನೆನಪು


ಉಳಿತಾಯದ ಲೊಕೇಷನ್ ಪಿನ್
ಪ್ರತಿದಿನ 5% ರಿಯಾಯಿತಿಗಾಗಿ
5%
more
HYPER MART
ಉಳಿತಾಯ ಪ್ರತಿ ದಿನ
ಎಲ್ಲದರ ಮೇಲೆಯೂ ಪ್ರತಿದಿನ ರಿಯಾಯಿತಿಗಳು
ಕನಿಷ್ಠ ಖರೀದಿ ಅಗತ್ಯವಿಲ್ಲ
ಬಿಲ್ ಮೇಲೆ ಎಲ್ಲಾ ರಿಯಾಯಿತಿಗಳು
ಹಾಟ್ ಡೀಲ್ಸ್
ಕೂಲ್ ಸೇವಿಂಗ್ಸ್
Offers that keep you warm
SAVE ₹20
ಕೋತಾಸ್ ಕಾಫಿ ಪೌಡರ್ 500 Gm ಪೌಚ್
MRP* ₹300
MORE PRICE* ₹280
SAVE ₹70
ಟಾಟಾ ಗೋಲ್ಡ್ ಲೀಫ್ ಟೀ 500 gm ಪೌಚ್
MRP* ₹285
MORE PRICE* ₹215
SAVE ₹74
ಬೂಸ್ಟ್ 750 Gm ರಿಫಿಲ್
MRP* ₹399
MORE PRICE* ₹325
SAVE ₹95
ರೆಡ್ ಲೇಬಲ್ ಟೀ ರೆಗ್ಯುಲರ್ 1 Kg ಪೌಚ್
MRP* ₹570
MORE PRICE* ₹475
SAVE ₹151
ರೆಡ್ ಲೇಬಲ್ ನ್ಯಾಚುರಲ್ ಕೇರ್ 1 Kg ಪೌಚ್
MRP* ₹650
MORE PRICE* ₹499
SAVE ₹136
ಡಾಬರ್ ಹನಿ 1 Kg
MRP* ₹475
MORE PRICE* ₹339
ದವಸ ಧಾನ್ಯಗಳು | ದೈನಂದಿನ ಅಗತ್ಯಗಳು | ಹಣ್ಣು ಮತ್ತು ತರಕಾರಿಗಳು | ಫ್ಯಾಷನ್ | ಮನೆ ಅಗತ್ಯತೆಗಳು
Narayan Shastri Road, Devraj Mohalla,
Mysore: 9964039444, 9964039333
*Conditions apply. "Minimum 5% discount is not applicable on Baby Food, Fresh Milk, Pouch Curd, loose staples, Fruits and Vegetables, apparel, footwear, liquor and cigarvettes. More Retail Pvt Ltd. reserves the right to withdraw/change the discount and/or change price of the products displayed here without prior notice". Offers valid till 11th December 2022 only.
Scan to visit our website
ಕನಿಷ್ಠ 5%+
ಜೊತೆಗೆ ಮತ್ತಷ್ಟು ಡಿಸ್ಕೌಂಟ್ಸ್
ಪ್ರತಿದಿನ
*T&C Apply

ನಕ್ಕರೆ ಅದೇ ಸ್ವರ್ಗ

ಆತ : ನನ್ನ ಹೆಂಡತಿ ವಿವಾಹ ವಾರ್ಷಿಕೋತ್ಸವಕ್ಕೆ ಚೈನು ಗಿಫ್ಟ್ ಕೊಡಿ ಅಂತ ಕೇಳಿದಳು. ತಂದುಕೊಟ್ಟೆ. ಮನೆಯಿಂದ ಹೊರಗೆ ಬಿಸಾಕಿದಳು..

ಗೆಳೆಯ : ಯಾಕೋ ಬೆಳ್ಳಿ ಚೈನ್ ತಂದುಕೊಟ್ಟಿದ್ದಕ್ಕಾ?

ಆತ : ಇಲ್ಲ ಸೈಕಲ್ ಚೈನು...

ಮೈಸೂರು ಮಿತ್ರ

ಶನಿವಾರ, 10 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಾದ ಶುದ್ಧಿಯಿಂದ, ಭಾವ ಪುಷ್ಟಿಯಿಂದ ಕೂಡಿದ ಸಂಗೀತ ಕೊಡುವ ಆನಂದವನ್ನು ಎಂತಹ ಐಶ್ವರ್ಯವೂ ಕೊಡಲಾರದು.
–ಬಾನ್ಸುರಿ ವಾದಕ ಪನ್ನಾಲಾಲ್ ಘೋಷ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಲಹವೇ ಕೇಡಿಗೆ ಮೂಲ

ನಿಮ್ಮ ಪತ್ರಗಳು

ನಾಡೋಜ ಪ್ರಶಸ್ತಿಗೆ ಡಾ.ಮಂಜುನಾಥ್ ಅರ್ಹರು



ಮಾನ್ಯರೆ,

ಬೆಂಗಳೂರಿನ ಶ್ರೀ ಜಯದೇವ ಆಸ್ಪತ್ರೆಯ ಮುಖ್ಯಸ್ಥರು ಮತ್ತು ಸೌಮ್ಯ ಸ್ವಭಾವದ ಸದಾ ಹಸನ್ಮುಖಿ ಡಾ. ಸಿ.ಎನ್. ಮಂಜುನಾಥ್ ಅವರ ಪರಿಶ್ರಮ ಮತ್ತು ಸೇವೆಯನ್ನು ಗುರುತಿಸಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಈ ಸಾಲಿನ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಗೌರವವನ್ನು ನೀಡುತ್ತಿರುವುದು ಅತ್ಯಂತ ಶ್ಲಾಘನೀಯ. ಈ ಪ್ರಶಸ್ತಿಗೆ ಅವರು ಶ್ರೇಷ್ಠ ಅರ್ಹರು ಕೂಡ. ಜಯದೇವ ಆಸ್ಪತ್ರೆಯನ್ನು ವಿಶ್ವಮಟ್ಟದಲ್ಲಿ ಗುರುತಿಸುವುದಕ್ಕೆ ಎಲ್ಲರ ಸಹಕಾರ ಪಡೆದು ಉತ್ತುಂಗಕ್ಕೇರಿಸಿರುವುದು ಸಂತಸದ ಸಂಗತಿ. ಯಾವುದೇ ಬಡ ರೋಗಿ ಜಯದೇವ ಆಸ್ಪತ್ರೆಗೆ ಬಂದರೆ ಮೊದಲು ಶುಶ್ರೂಷೆ. ನಂತರ ಉಳಿದ ವಿಷಯಗಳ ಬಗ್ಗೆ ಗಮನಹರಿಸುವಂತೆ ಅರಿವು ಮೂಡಿಸುವ ಮೂಲಕ ಗಮನ ಸೆಳೆದಿದ್ದಾರೆ. ಇನ್ನೂ ಹೆಚ್ಚಿನ ಕಾಲ ಇವರ ಪ್ರಾಮಾಣಿಕ ಸೇವೆ ನಮ್ಮ ನಾಡಿನ ಜನತೆಗೆ ದೊರಕಲಿ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ರೈತರಿಗೆ ಆನ್‌ಲೈನ್ ಬಗ್ಗೆ ತರಬೇತಿ ಅಗತ್ಯ

ಮಾನ್ಯರೆ,

ಬೆಳೆಗಳ ವಿತರಣೆ ಹಾಗೂ ಖರೀದಿಗೆ ರಾಜ್ಯದ ರೈತರು ಸಂಪೂರ್ಣ ಆನ್‌ಲೈನ್‌ನಲ್ಲಿ ವ್ಯವಹರಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಸರ್ಕಾರ ಈ ಯೋಜನೆ ಜಾರಿಗೆ ತಂದಿರುವುದು ರೈತರಿಗೆ ತುಂಬಾ ಉಪಯುಕ್ತವಾಗಿದೆ. ಇದರಿಂದ ರೈತರಿಗೆ ಸಾರಿಗೆ ವೆಚ್ಚ, ಶ್ರಮ, ದಳ್ಳಾಳಿಗೆ ನೀಡುವ ಹಣ ಉಳಿತಾಯವಾಗುತ್ತದೆ. ಈ ಆನ್‌ಲೈನ್ ಮಾರಾಟ ದೇಶದಲ್ಲೇ ಮೊದಲಾಗಿದೆ. ಆನ್‌ಲೈನ್ ಮಾರಾಟ ಪಾರದರ್ಶಕವಾಗಿರುವುದರಿಂದ ಯಾವುದೇ ಬೆಳೆ ಹಾಗೂ ಬೀಜದಲ್ಲಿ ಮೋಸವಾಗುವುದಿಲ್ಲ. ಆಕಸ್ಮಿಕವಾಗಿ ಮೋಸವಾದರೂ ಇಂತಹವರಿಂದಲೇ ಖರೀದಿಸಿದ್ದೇವೆಂಬ ಮಾಹಿತಿ ತಿಳಿದಿರುತ್ತದೆ. ಇದು ರೈತರಿಗೆ ತುಂಬಾ ಉಪಯುಕ್ತವಾಗಿದೆ. ಆದರೆ ಪ್ರತಿಯೊಬ್ಬ ರೈತರಿಗೂ ಮೊಬೈಲ್‌ನಲ್ಲಿ ಹೇಗೆ ಆನ್‌ಲೈನ್ ವ್ಯವಹಾರ ಮಾಡಬೇಕೆಂಬ ತರಬೇತಿಯನ್ನು ನೀಡಬೇಕು. ಇದರಿಂದ ಮತ್ತೊಬ್ಬರನ್ನು ಆಶ್ರಯಿಸುವುದು ತಪ್ಪುತ್ತದೆ. ಆನ್‌ಲೈನ್‌ನಲ್ಲಿ ವ್ಯವಹಾರ ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದರೆ ಮತ್ತೊಬ್ಬರಿಂದ ಮೋಸ ಹೋಗುವ ಸಾಧ್ಯತೆ ಇರುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ರೈತರಿಗೂ ಆನ್‌ಲೈನ್‌ನಲ್ಲಿ ಹೇಗೆ ವ್ಯವಹರಿಸಬೇಕೆಂಬ ತರಬೇತಿಯನ್ನು ರೈತರಿಗೆ ಸರ್ಕಾರ ನೀಡಲಿ. ಇದರಿಂದ ರೈತರು ಜಾಗೃತಗೊಂಡು ಆನ್ ಲೈನ್ ವ್ಯವಹಾರವನ್ನು ಧೈರ್ಯವಾಗಿ ಕೈಗೊಳ್ಳಬಹುದು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ದೆಹಲಿ ಪಾಲಿಕೆ ಚುನಾವಣೆಯಲ್ಲಿ ಎಎಪಿ ಕಮಾಲ್

ಮಾನ್ಯರೆ,

ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಹದಿನೈದು ವರ್ಷಗಳ ಅಧಿಕಾರ ಕಳೆದುಕೊಂಡಿದೆ. ಇದಕ್ಕೆ ಬಿಜೆಪಿಯ ಅಧಿಕಾರದ ವಿರೋಧಿ ಅಲೆಗಿಂತ ಕೇಜ್ರಿವಾಲ್ ಅವರ ಉಚಿತ ಉಡುಗೊರೆ ಹೆಚ್ಚು ಎಂಬುದು ಕೆಲಸ ಮಾಡಿದೆ. ಭಾರತೀಯ ಜನತಾ ಪಕ್ಷ ಇದರಿಂದ ಕಲಿತುಕೊಳ್ಳಬೇಕಾದ ಪಾಠಗಳಲ್ಲಿ ಮುಖ್ಯವಾಗಿದ್ದು, ಜನ ಇನ್ನೂ ಪೂರ್ಣ ತೆರಿಗೆ ಪಾವತಿ ಮನಸ್ಥಿತಿಗೆ ಬಂದಿಲ್ಲ.

ಜನಸಾಮಾನ್ಯರು ಈಗಲೂ ಜೀವನಕ್ಕಾಗಿ ಕಷ್ಟಪಡುತ್ತಿರುವಾಗ ಮುಟ್ಟಿದ್ದಕ್ಕೆಲ್ಲಾ ತೆರಿಗೆ ಹಾಕುತ್ತಾ ಕೂತರೆ, ಎಲ್ಲಾ ಸಬ್ಸಿಡಿಗಳನ್ನು ರದ್ದು ಮಾಡಿ ಮಧ್ಯಮ ವರ್ಗದವರನ್ನು ಅದರಲ್ಲೂ ತೆರಿಗೆದಾರರನ್ನು ಗುರಿ ಮಾಡುವುದನ್ನು ಜನ ಸಹಿಸಲ್ಲ ಎಂಬುದೂ ಸತ್ಯವೇ. ಏಕೆಂದರೆ ಜನರ ಜೀವನಮಟ್ಟ ಮತ್ತು ಮಾರುಕಟ್ಟೆ ಇನ್ನೂ ಒಂದು ಹಂತದಲ್ಲಿ ನಿಯಂತ್ರಣದಲ್ಲಿ ಇಲ್ಲದಿರುವಾಗ ನಿಮ್ಮ ಪ್ರಾಮಾಣಿಕ ತೆರಿಗೆಯ ಪಾಠ ಯಾರಿಗೂ ರುಚಿಸುವುದಿಲ್ಲ. ಆಗ ಸಹಜವಾಗಿ ಜನ ಯಾರು ಉಚಿತವಾಗಿ ಕೊಡುತ್ತಾರೋ ಆ ಕಡೆಯೇ ವಾಲುತ್ತಾರೆ.

ಮುಗ್ಧ ಸಹೋದರರಿಗೆ ಸರ್ಕಾರದಿಂದ ಎಲ್ಲವೂ ಉಚಿತವಾಗಿ ಸಿಗುತ್ತಿರುವಾಗ ಮಧ್ಯಮ ವರ್ಗದ ಕುಟುಂಬಗಳು ಉಚಿತದ ಆಕರ್ಷಣೆಗೆ ಒಳಗಾಗುವುದು ಆಶ್ಚರ್ಯವೇನಲ್ಲ. ಇದರಿಂದ ನಷ್ಟವಾಗುವುದು ಪ್ರಾಮಾಣಿಕವಾಗಿ ತೆರಿಗೆ ಪಾವತಿಯ ಪಾಠ ಮಾಡುವವರಿಗೇನೇ. ಬಿಜೆಪಿಗೆ ಇದೊಂದು ಎಚ್ಚರಿಕೆಯ ಗಂಟೆಯಾಗಬೇಕಾಗಿದೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಅಗತ್ಯ ವಸ್ತು, ಗ್ಯಾಸ್ ಸಿಲಿಂಡರ್ ಬೆಲೆ ಕಡಿಮೆ ಆಗಲಿ

ಮಾನ್ಯರೆ,

ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಹಾಗೂ ಅಡುಗೆ ಅನಿಲದ ದರ ಆಗಾಗ್ಗೆ ಏರಿಕೆ ಮಾಡುತ್ತಿರುವುದು ಖಂಡನೀಯ. ಓಟು ಪಡೆಯುವಾಗ ಇಲಿಯಂತೆ ಬಂದು ಮತದಾರರ ಕಾಲು ಹಿಡಿಯುವ ಶಾಸಕರು ಮತ್ತು ಸಂಸದರಿಗೆ ನಾಚಿಕೆ, ಮಾನ, ಮರ್ಯಾದೆ ಇಲ್ಲ. ಅಗತ್ಯ ವಸ್ತುಗಳು ಹಾಗೂ ಅಡುಗೆ ಅನಿಲ ದರ ಏರುತ್ತಿದ್ದರೂ ಸದನದಲ್ಲಿ ಯಾರೂ ವಿರೋಧಿಸದೇ ಕಾಲಹರಣ ಮಾಡುತ್ತಿರುವ ಇವರಿಗೆ ಖಂಡನೆ. ಈ ಸಂಬಂಧ ಮುಖ್ಯಮಂತ್ರಿಗಳು ತುರ್ತಾಗಿ ಅಗತ್ಯ ವಸ್ತುಗಳು ಹಾಗೂ ದಿನನಿತ್ಯ ಬಳಕೆಯ ಅಡುಗೆ ಸಿಲಿಂಡರ್ ದರ ಕಡಿಮೆ ಮಾಡುವಂತೆ ಈ ಮೂಲಕ ಮನವಿ.

– ನೊಂದ ನಿವಾಸಿಗಳು, ಮೈಸೂರು.

ನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ

ಮಾನ್ಯರೆ,

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪ್ರೀಪೇಯ್ಡ್ ಆಟೋ ಸ್ಟ್ಯಾಂಡ್ ಇರುವುದು ಸರಿಯಷ್ಟೆ, ಆದರೆ ಅದರ ಪಕ್ಕದಲ್ಲೇ ಫುಟ್‌ಪಾತ್ ವ್ಯಾಪಾರಕ್ಕೆ ಅವಕಾಶ ಕೊಡಲಾಗಿದೆ. ಇದರಿಂದ ಸಾರ್ವಜನಿಕರು ಹಾಗೂ ಪಾದಚಾರಿಗಳ ಓಡಾಡಕ್ಕೆ ತುಂಬಾ ತೊಂದರೆಯಾಗಿದೆ. ಇದನ್ನು ಸಂಬಂಧಪಟ್ಟವರು ಗಮನಿಸಿ ಪಾದಚಾರಿಗಳಿಗೆ ಅನುವು ಮಾಡಿಕೊಡುವಂತೆ ಮನವಿ.

–ಬಿ.ಎಂ. ಸ್ವಾಮಿ, ಜೆ.ಪಿ. ನಗರ, ಮೈಸೂರು.

ಸಂಸದರೆ ಇತ್ತ ಗಮನ ಕೊಡಿ

ಮಾನ್ಯರೆ,

ಸರ್ಕಾರದ ಮಟ್ಟದಲ್ಲಿ ನಿರಾಶ್ರಿತರಿಗಾಗಿ ಆಶ್ರಯ ಯೋಜನೆ ಎಂಬುದಿದೆ ಅಲ್ಲವೇ? ಹುಣಸೂರು ನಗರದಲ್ಲಿ ನಿರಾಶ್ರಿತರಿಗೆ ಆಶ್ರಯ ನಿವೇಶನದ ಹಕ್ಕು ಪತ್ರವನ್ನು ನೀಡಿ ಹದಿನೆಂಟು ವರ್ಷಗಳು ಮುಗಿಯುತ್ತಾ ಬಂದಿದ್ದರೂ ಸಹ ಇವತ್ತಿಗೂ ನಗರ ಸಭೆ ಅಧಿಕಾರಿಗಳು ಜಾಗವನ್ನು ಗುರುತಿಸಿಲ್ಲದಿರುವುದು ಅವರ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಇನ್ನು ರಾಜಕಾರಣಿಗಳಿಗಂತೂ ಇದರ ಅರಿವೇ ಇಲ್ಲ? ನೀವಾದರೂ (ಸಂಸದ ಪ್ರತಾಪ್ ಸಿಂಹ) ದಯಮಾಡಿ ಮೂಲೆ ಗುಂಪಾಗಿರುವ ಆಶ್ರಯ–ಯೋಜನೆಗೆ ಚಾಲನೆ ನೀಡಿ ನಿರಾಶ್ರಿತರ ಬಾಳಿಗೆ ಬೆಳಕು ನೀಡಬೇಕೆಂದು ಮನವಿ.

– ಕಾಳಿಂಗಚಾರ್, ಕುಂಬಾರಕೊಪ್ಪಲು, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಭಾರತ–ಅಮೇರಿಕ ಸಂಬಂಧದಲ್ಲಿ ಏರಿಳಿತಗಳು

ಕೆಲವು ದಶಕಗಳಿಂದ ಭಾರತ–ಅಮೇರಿಕ ನಡುವಿನ ರಾಜತಾಂತ್ರಿಕ ಸಂಬಂಧ ಆರಕ್ಕೆ ಏರದೇ, ಮೂರಕ್ಕೆ ಇಳಿಯದೇ ಮುಂದುವರಿಯುತ್ತಿದೆ. 1962ರ ಭಾರತ–ಚೀನಾ ಯುದ್ಧ, 1965ರ ಭಾರತ – ಪಾಕ್ ಯುದ್ಧಗಳ ಸಂದರ್ಭದಲ್ಲಿ ಅಮೇರಿಕವು ಭಾರತವನ್ನು ಬೆಂಬಲಿಸಿತು. ಆದರೆ 1971ರ ಭಾರತ–ಪಾಕ್ ಯುದ್ಧವಾದಾಗ ಅಮೇರಿಕವು ಪೂರ್ಣವಾಗಿ ಪಾಕ್ ಪರ ವಾಲಿತ್ತು. 1998ರಲ್ಲಿ ಶಾಂತಿಯುತ ಉದ್ದೇಶಗಳಿಗಾಗಿ ಪರಮಾಣು ಬಾಂಬ್ ಸ್ಫೋಟ (ಪೋಖ್ರಾನ್) ಮಾಡಿದ ನಂತರ ಅಮೇರಿಕವು ಭಾರತದ ಮೇಲೆ ಅನೇಕ ನಿರ್ಬಂಧಗಳನ್ನು ಹೇರಿತು. ಕಾರ್ಗಿಲ್ ಸಂಘರ್ಷದ ವೇಳೆ ಭಾರತವನ್ನು ಬೆಂಬಲಿಸಿತು. 2008ರಲ್ಲಿ ಭಾರತ–ಅಮೇರಿಕ ಮಧ್ಯೆ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಮತ್ತೆ ಸಂಬಂಧ ಸುಧಾರಿಸಿತು. ಅಮೇರಿಕದಿಂದ ಭಾರತ ಶಸ್ತ್ರಾಸ್ತ್ರಗಳನ್ನು ಖರೀದಿಸಿತು. ವಾಣಿಜ್ಯ ವ್ಯವಹಾರ 157 ಬಿಲಿಯನ್ ಡಾಲರ್ ಏರಿಕೆ ದಾಖಲಿಸಿತು. 2019ರಲ್ಲಿ ಟೆಕ್ಸಾಸ್‌ನಲ್ಲಿ ನಡೆದ ಹೌಡಿ ಮೋದಿ ಕಾರ್ಯಕ್ರಮದಲ್ಲಿ ಮೋದಿ ಹಾಗೂ ಡೊನಾಲ್ಡ್ ಟ್ರಂಪ್ ಭಾಗವಹಿಸುವಿಕೆಯು ಭಾರತವು ಅಮೇರಿಕದ ಗುಂಪಿನಲ್ಲಿ ಸೇರಿ ತನ್ನ ಬಹುಕಾಲದ ಆಪ್ತಮಿತ್ರ ರಷ್ಯಾದಿಂದ ದೂರ ಸರಿದಂತೆ ಭಾಸವಾಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ ಭಾರತವು ದೃಢವಾದ ವಿದೇಶ ನೀತಿ ಅನುಸರಿಸುತ್ತಿರುವುದರಿಂದ ಅಮೇರಿಕವು ಅಸಮಾಧಾನಗೊಂಡಿದೆ. ರಷ್ಯಾದಿಂದ ಎಸ್ 400 ಕ್ಷಿಪಣಿ ನಾಶಕ ವ್ಯವಸ್ಥೆಯ ಖರೀದಿಯನ್ನು ಅಮೇರಿಕಾ ತೀವ್ರವಾಗಿ ವಿರೋಧಿಸಿತು. ಬೆದರಿಕೆಯನ್ನೂ ಹಾಕಿತು. ಭಾರತದಿಂದ ಅಮೇರಿಕವು ಈಗ ಅಂತರವನ್ನು ಕಾಯ್ದುಕೊಳ್ಳುವ ಯತ್ನದಲ್ಲಿದೆ.

ಜಾಗತಿಕ ವೇದಿಕೆಗಳಲ್ಲಿ ಭಾರತದ ಸಂವಹನದ ರೀತಿ, ಬಡ ರಾಷ್ಟ್ರಗಳ ಪರ ಭಾರತವು ವಹಿಸುತ್ತಿರುವ ಪಾತ್ರದಿಂದ ಭಾರತವಿಂದು ವಿಶ್ವ ನಾಯಕತ್ವ ಗಳಿಸುತ್ತಿರುವುದು ಭಾರತದೊಳಗಿನ ಕೆಲವು ರಾಜಕಾರಣಿಗಳಂತೆ, ವಿಶ್ವದ ಕೆಲವು ಶಕ್ತಿ ರಾಷ್ಟ್ರಗಳು ವಿಶೇಷವಾಗಿ ಅಮೇರಿಕ ಅಸಮಾಧಾನ ಹೊಂದಿದೆ. ಪೂರ್ವ ಯೂರೋಪ್‌ನಲ್ಲಿ ನ್ಯಾಟೋ ವಿಸ್ತರಣೆ ತಡೆಯಲು ರಷ್ಯಾ ದೇಶವು ಯುಕ್ರೇನ್ ಮೇಲೆ ಮಾಡಿರುವ ಆಕ್ರಮಣಕ್ಕೆ ಪ್ರತಿಯಾಗಿ ಅಮೇರಿಕವು ರಷ್ಯಾ ಮೇಲೆ ಹೇರಿದ ನಿರ್ಬಂಧಗಳು ಜಗತ್ತಿನ ಮೇಲೆ ದುಷ್ಪರಿಣಾಮ ಬೀರಿವೆ. ಈ ಹಿನ್ನೆಲೆಯಲ್ಲಿ ಜಾಗತಿಕ ಹಿತಾಸಕ್ತಿಗೆ ಪೂರಕವಾಗಿ ಭಾರತವು ಅಮೇರಿಕದೊಡನಿರುವ ತನ್ನ ಸಂಬಂಧದ ಪುನರಾವಲೋಕನ ಮಾಡುತ್ತಿದೆಯೆಂದು ವಿದೇಶಾಂಗ ಮಂತ್ರಿ ಎಸ್. ಜೈಶಂಕರ್ ಹೇಳಿದ್ದರು. ಭಾರತವಿಂದು ವಿಶ್ವದ ಪ್ರತಿಯೊಂದು ದೇಶದ ವೈಯಕ್ತಿಕ ಹಿತಾಸಕ್ತಿಗಳನ್ನು ಗುರುತಿಸುವುದರೊಂದಿಗೆ ಜಗತ್ತನ್ನು ಏಕಸೂತ್ರದಲ್ಲಿ ತರಬೇಕೆಂಬ ಭಾವನೆ ಹೊಂದಿದೆ. ಇಲ್ಲಿ ಯಾವುದೇ ಬಲಾಢ್ಯ ದೇಶಕ್ಕೆ ತನ್ನದೇ ಆದ ಗುಂಪನ್ನು ರಚಿಸಿ ವಿಶ್ವದ ಮೇಲೆ ತನ್ನ ಆಸಕ್ತಿಯ ವಿಷಯಗಳನ್ನು ಹೇರುವುದಕ್ಕೆ ಅವಕಾಶ ನೀಡದಂತಹ ವ್ಯವಸ್ಥೆ ತರಲು ಭಾರತ ಪ್ರಯತ್ನಶೀಲವಾಗಿದೆ. ಅದೇ ರೀತಿ ದೇಶಗಳ ನಡುವಿನ ಸಂಬಂಧಗಳನ್ನು ರಾಷ್ಟ್ರೀಯ ಹಿತಾಸಕ್ತಿಯ ಆಧಾರದ ಮೇಲೆ ರೂಪಿಸಲು ಯತ್ನಿಸುತ್ತಿದೆ.

ಇಂಡಿಯಾ ಫಸ್ಟ್ ನೀತಿಗೆ ಅಮೆರಿಕದ ಅಸಹನೆ

ಇತ್ತೀಚಿನ ವರ್ಷಗಳಲ್ಲಿ ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿ 'ಇಂಡಿಯಾ ಫಸ್ಟ್' ಮತ್ತು 'ಸೇಫ್ ವರ್ಲ್ಡ್' ವಿದೇಶ ನೀತಿ ಅನುಸರಿಸುತ್ತಿದೆ. ಈ ನೀತಿಯಂತೆ ತನಗೆ ಅವಶ್ಯವೆನಿಸಿದ ಶಸ್ತ್ರಾಸ್ತ್ರಗಳನ್ನು ಅಮೇರಿಕ ಹಾಗೂ ರಷ್ಯಾದಿಂದ ಖರೀದಿಸುತ್ತಿದೆ. ಗಡಿ ಸಮಸ್ಯೆಗೆ ಸಂಬಂಧಿಸಿದಂತೆ ಚೀನಾದೊಂದಿಗೆ ದೃಢವಾದ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದರೂ ಇದರಿಂದ ವಾಣಿಜ್ಯ ವ್ಯವಹಾರದ ಮೇಲೆ ಯಾವುದೇ ಪರಿಣಾಮ ಬೀರದಂತೆ ಎಚ್ಚರ ವಹಿಸಿತು. ಯುಕ್ರೇನ್ ಯುದ್ಧ ಆರಂಭದಿಂದ ಭಾರತವು ಸ್ಪಷ್ಟ ಹಾಗೂ ಸ್ಥಿರವಾದ ನಿಲುವು ತೋರಿತು. ಯುದ್ಧ ನಿಲ್ಲಿಸಿ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳಬೇಕೆಂದು ರಷ್ಯಾಕ್ಕೆ ಸ್ಪಷ್ಟವಾಗಿ ತಿಳಿಸಿತು. ಆದರೆ ವಿಶ್ವ ಸಂಸ್ಥೆಯಲ್ಲಿ ರಷ್ಯಾವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಅಮೇರಿಕ ಹಾಗೂ ಮಿತ್ರ ದೇಶಗಳ ನಿರ್ಣಯಗಳನ್ನು ಬೆಂಬಲಿಸದೇ ಎರಡು ಬಲಾಢ್ಯ ದೇಶಗಳಿಂದ ಸಮಾನ ಅಂತರ ಕಾಯ್ದುಕೊಂಡಿದೆ.



> ಶೀತಲಸಮರದ ನಂತರ ಭಾರತ–ಅಮೇರಿಕ ಜಂಟಿಯಾಗಿ ಭಯೋತ್ಪಾದನೆ ವಿರುದ್ಧ ಕ್ರಮ, ಪ್ರಜಾಸತ್ತೆಗೆ ಉತ್ತೇಜನ, ಹಿಂದೂ ಮಹಾಸಾಗರದಲ್ಲಿ ಭಯಮುಕ್ತ ನೌಕಾ ಸಂಚಾರ, ಏಷ್ಯಾ ಉಪಖಂಡದಲ್ಲಿ ಅಧಿಕಾರ ಸಮತೋಲನ ತರುವುದು ಮೊದಲಾದ ಅನೇಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದವು. 2020ರಲ್ಲಿ ಭಾರತ ಅಮೇರಿಕವು ಉಪಗ್ರಹಗಳಿಂದ ಬರುವ ಸೂಕ್ಷ್ಮ ದತ್ತಾಂಶಗಳನ್ನು ಪರಸ್ಪರ ಹಂಚಿಕೊಳ್ಳುವ ಮಿಲಿಟರಿ ಒಪ್ಪಂದಕ್ಕೆ ಸಹಿ ಹಾಕಿದವು. ಭವಿಷ್ಯದಲ್ಲಿ ಭಾರತ–ಅಮೇರಿಕ ಸಂಬಂಧ ಇನ್ನೂ ಬಲಿಷ್ಠವಾಗಲಿದೆ ಎನ್ನುತ್ತದೆ ಅಮೇರಿಕ. ಆದರೆ ಭಾರತ ಶಕ್ತಿಶಾಲಿಯಾಗುವುದು ಅಮೇರಿಕೆಗೆ ಬೇಕಾಗಿಲ್ಲ.

ಜಗತ್ತಿನ ದೇಶಗಳು ತಾವೇ ರೂಪಿಸಿದ ನಿಯಮಗಳು ವಿಶ್ವಸಂಸ್ಥೆಯ ಸನದು, ಅಂತರಾಷ್ಟ್ರೀಯ ಕಾನೂನುಗಳು, ದೇಶಗಳ ಸಾರ್ವಭೌಮತ್ವ ಮತ್ತು ಗಡಿಗಳನ್ನು ಮಾನ್ಯ ಮಾಡುವುದು ಮೊದಲಾದ ನಿಯಮಗಳ ಆಧಾರದಲ್ಲಿ ಜಾಗತಿಕ ವ್ಯವಸ್ಥೆಗಳಿರಬೇಕೆಂದು ಭಾರತದ ಅನಿಸಿಕೆಯಾಗಿದೆ. ಈ ಕಾರಣಗಳಿಗಾಗಿ ಭಾರತವು ಸದಾಕಾಲ ಅಮೇರಿಕವನ್ನು ಬೆಂಬಲಿಸುವ, ಹಿಂಬಾಲಿಸುವ ಮತ್ತು ನಂಬಿಕೆಗೆ ಅರ್ಹ ದೇಶವೆಂದು ಭಾವಿಸಬಾರದೆಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ನಿರಂತರವಾಗಿ ಅಮೇರಿಕಕ್ಕೆ ಸಂದೇಶಗಳನ್ನು ನೀಡುತ್ತಿದ್ದಾರೆ. ಈ ಸಂದೇಶಗಳಿಂದ ಅಸಮಾಧಾನಗೊಂಡಿರುವ ಅಮೇರಿಕವು ಭಾರತದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆಯೆಂದು ಅಪಾದಿಸಿತು. ಪ್ರತಿಯಾಗಿ ಅಮೇರಿಕದಲ್ಲಿ ಕರಿಯರು ಹಾಗೂ ಅಶ್ವೇತವರ್ಣಿಯರ ಮೇಲಾಗುತ್ತಿರುವ ದೌರ್ಜನ್ಯಗಳ ಬಗ್ಗೆ ಚಿಂತೆ ವ್ಯಕ್ತಪಡಿಸಿ ಭಾರತವು ತಿರುಗೇಟು ನೀಡಿತು.

ಭಾರತವು ತಾನು ಸ್ವೀಕರಿಸಿರುವ ಸುರಕ್ಷಿತ ಜಗತ್ತು (ಸೇಫ್ ವರ್ಲ್ಡ್) ಎಂಬ ಭಾವನೆಗನುಗುಣವಾಗಿ ಕೊರೊನಾ ಮಹಾ ಮಾರಿಯ ವಿರುದ್ಧ ಹೋರಾಟದಲ್ಲಿ ಜಗತ್ತಿಗೆ ಉಚಿತವಾಗಿ ಕೋಟ್ಯಾಂತರ ಲಸಿಕೆಗಳನ್ನು ನೀಡಿ ಲಕ್ಷಾಂತರ ಜನರ ಪ್ರಾಣ ಉಳಿಸಿತು. ಆದರೆ ಇದನ್ನು ಸಹಿಸದ ಅಮೇರಿಕದ ಬಹುರಾಷ್ಟ್ರೀಯ ಔಷಧ ಕಂಪನಿಗಳು ವಾಷಿಂಗ್‌ಟನ್‌ನ ಮೌನ ಸಮ್ಮತಿಯೊಂದಿಗೆ ಭಾರತದ ಲಸಿಕೆಗಳ ವಿರುದ್ಧ ಅಪಪ್ರಚಾರ ಮಾಡಿದವು. ದುರದೃಷ್ಟವೆಂದರೆ ಭಾರತದ ವಿಪಕ್ಷ ರಾಜಕಾರಣಿಗಳು ಈ ಅಪಪ್ರಚಾರದಲ್ಲಿ ಭಾಗಿಯಾಗಿದ್ದರು.

ಜೋ ಬೈಡನ್‌ಗೆ ಭಾರತದ ಬಗ್ಗೆ ಇರುವ ದ್ವಂದ್ವ

2018 ರಲ್ಲಿ ಟ್ರಂಪ್ ಸರಕಾರವು ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಅಮೇರಿಕಗೆ ಸಹಕಾರ ನೀಡುವುದಿಲ್ಲವೆಂಬ ಕಾರಣ ನೀಡಿ ಪಾಕಿಸ್ತಾನಕ್ಕೆ ಎಲ್ಲಾ ರೀತಿಯ ನೆರವನ್ನು ಸ್ಥಗಿತಗೊಳಿಸಿತು. ಆದರೆ ಬೈಡನ್ ಸರಕಾರವು ಎಫ್–16 ವಿಮಾನಗಳ ಬಿಡಿಭಾಗಗಳು ಹಾಗೂ ನಿರ್ವಹಣೆಗಾಗಿ 460 ಮಿಲಿಯನ್ ಡಾಲರ್ ತಡೆ ಹಿಡಿಯಲ್ಪಟ್ಟಿದ್ದ ನೆರವಿನ ಮೊತ್ತವನ್ನು ಬಿಡುಗಡೆಗೊಳಿಸಿತು. ಅನಂತರ ಸೆಪ್ಟೆಂಬರ್ 27 ರಂದು ಅಮೇರಿಕದ ಸ್ಟೇಟ್ ಸೆಕ್ರೆಟರಿ ಎಂಟನಿ ಬ್ಲಿಂಕೆನ್ ಮತ್ತು ಪಾಕ್ ವಿದೇಶ ಸಚಿವ ಬಿಲಾವಲ್ ಭುಟ್ಟೋ ಭೇಟಿ ನಂತರ ಅಮೇರಿಕಾ ಸರಕಾರದ ವಕ್ತಾರ ನೆಡ್‌ಪ್ರೈಸ್‌ರವರು ಸ್ಪಷ್ಟ ಶಬ್ದಗಳಲ್ಲಿ ಪಾಕ್ –ಅಮೇರಿಕಾ ಸಂಬಂಧವನ್ನು ಭಾರತ ಪ್ರಶ್ನಿಸುವಂತಿಲ್ಲ ಎಂದು ನುಡಿದರು. ಭಾರತ ತನ್ನ ಸಹಜ ಮಿತ್ರ ಎನ್ನುತ್ತಾ ಪಾಕ್‌ಗೆ ನೆರವು ನೀಡುವುದು ಅಮೇರಿಕದ ಇಬ್ಬಗೆ ನೀತಿಯನ್ನು ತೋರಿಸುತ್ತದೆ. ಪಾಕಿಸ್ತಾನ ವಿಶ್ವಾಸಘಾತಕ ದೇಶವೆಂದು ಅಮೇರಿಕ ಆರೋಪಿಸುತ್ತದೆ. ಅಧ್ಯಕ್ಷ ಜೋ ಬೈಡನ್ ಇತ್ತೀಚೆಗೆ ಲಾಸ್ ಏಂಜಲೀಸ್‌ನಲ್ಲಿ ನಡೆದ ಡೆಮಾಕ್ರಾಟ್ ಪಕ್ಷದ ಸಭೆಯಲ್ಲಿ ಯಾವುದೇ ಉತ್ತರದಾಯಿತ್ವ, ವಿವೇಚನೆ ಇಲ್ಲದ, ಅಣ್ವಸ್ತ್ರ ಹೊಂದಿರುವ ಅತ್ಯಂತ ಅಪಾಯಕಾರಿ ದೇಶಗಳಲ್ಲಿ ಪಾಕಿಸ್ತಾನವು ಸೇರಿದೆ ಎಂದು ಬಣ್ಣಿಸಿದ್ದರು. ಆದರೆ ಭಾರತವನ್ನು ಶಕ್ತಿಶಾಲಿಯಾಗುವುದನ್ನು ತಡೆಯಬೇಕೆಂಬ ಗುಪ್ತ ಕಾರ್ಯಸೂಚಿಗಾಗಿ ಪಾಕ್‌ಗೆ ನೆರವು ನೀಡುವುದನ್ನು ಅಮೇರಿಕವು ಮುಂದುವರಿಸಿದೆ.

ಅರವತ್ತರ ದಶಕದಲ್ಲಿ ಕಮ್ಯೂನಿಸ್ಟ್ ಚೀನಾದ ಉತ್ಕರ್ಷದಿಂದ ಅಮೇರಿಕ ಚಿಂತಿತವಾಯಿತು. ಟಿಬೆಟ್ ಮೇಲೆ ಚೀನಿ ಆಕ್ರಮಣ ಕೊರಿಯನ್ ಯುದ್ಧದಲ್ಲಿ ಚೀನಾದ ಪರೋಕ್ಷ ಪ್ರವೇಶದಿಂದ ಅಮೇರಿಕ ಆತಂಕಗೊಂಡಿತು. ಇದೇ ಕಾಲದಲ್ಲಿ ಭಾರತ–ಚೀನಾ ಸಂಬಂಧ ಹದಗೆಡುತ್ತಿರುವುದನ್ನು ಗಮನಿಸಿದ ಅಮೇರಿಕವು ಭಾರತವನ್ನು ಚೀನಾಕ್ಕೆ ಪರ್ಯಾಯ ಶಕ್ತಿಯಾಗಿ ರೂಪಿಸಿ ಅದರ ಪ್ರಯೋಜನ ಪಡೆಯಲೆತ್ನಿಸಿತು. ಆದರೆ ಅಮೇರಿಕದ ಈ ರೀತಿಯ ರಾಜಕಾರಣ ದೀರ್ಘಕಾಲ ಮುಂದುವರಿಯಲಿಲ್ಲ.

ಶೀತಲಸಮರದ ನಂತರ ಭಾರತ–ಅಮೇರಿಕ ಜಂಟಿಯಾಗಿ ಭಯೋತ್ಪಾದನೆ ವಿರುದ್ಧ ಕ್ರಮ, ಪ್ರಜಾಸತ್ತೆಗೆ ಉತ್ತೇಜನ, ಹಿಂದೂ ಮಹಾಸಾಗರದಲ್ಲಿ ಭಯಮುಕ್ತ ನೌಕಾ ಸಂಚಾರ, ಏಷ್ಯಾ ಉಪಖಂಡದಲ್ಲಿ ಅಧಿಕಾರ ಸಮತೋಲನ ತರುವುದು ಮೊದಲಾದ ಅನೇಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದವು. 2020ರಲ್ಲಿ ಭಾರತ ಅಮೇರಿಕವು ಉಪಗ್ರಹಗಳಿಂದ ಬರುವ ಸೂಕ್ಷ್ಮ ದತ್ತಾಂಶಗಳನ್ನು ಪರಸ್ಪರ ಹಂಚಿಕೊಳ್ಳುವ ಮಿಲಿಟರಿ ಒಪ್ಪಂದಕ್ಕೆ ಸಹಿ ಹಾಕಿದವು. ಭವಿಷ್ಯದಲ್ಲಿ ಭಾರತ–ಅಮೇರಿಕ ಸಂಬಂಧ ಇನ್ನೂ ಬಲಿಷ್ಠವಾಗಲಿದೆ ಎನ್ನುತ್ತದೆ ಅಮೇರಿಕ. ಆದರೆ ಭಾರತ ಶಕ್ತಿಶಾಲಿಯಾಗುವುದು ಅಮೇರಿಕೆಗೆ ಬೇಕಾಗಿಲ್ಲ. ಅಕ್ಟೋಬರ್ 27 ರಂದು ಅಮೇರಿಕ ತನ್ನ ನೂತನ ರಾಷ್ಟ್ರೀಯ ರಕ್ಷಣಾ ನೀತಿ ಪ್ರಕಟಿಸಿತು. ಇದರಲ್ಲಿ ಇಂಡೋ–ಫೆಸಿಫಿಕ್ ವಲಯದಲ್ಲಿ ಚೀನಾವನ್ನು ನಿಯಂತ್ರಿಸಲು ತಾನು ಭಾರತದೊಂದಿಗೆ ಜಂಟಿಯಾಗಿ ಕಾರ್ಯಾಚರಿಸುವುದಾಗಿ ತಿಳಿಸಿದೆ. ಇದರೊಂದಿಗೆ ಪಾಕಿಸ್ತಾನಕ್ಕೆ ನೀಡುವ ನೆರವಿನ ಬಗ್ಗೆ ಯಾರು ಪ್ರಶ್ನಿಸುವಂತಿಲ್ಲ ಎನ್ನುತ್ತದೆ ಅಮೇರಿಕ. ಇದರರ್ಥ ಭಾರತವು ಎರಡು ಕ್ಷೇತ್ರಗಳಲ್ಲಿ ಹೋರಾಡುವ ಪರಿಸ್ಥಿತಿ ಸೃಷ್ಟಿಸಿ ಭಾರತವನ್ನು ದುರ್ಬಲಗೊಳಿಸುವ ಹುನ್ನಾರ ಈ ನೀತಿಯಲ್ಲಿ ಅಡಗಿದೆ. ಅಮೇರಿಕದ ಕುಟಿಲತನ ಅರಿತಿರುವ ಭಾರತ ತನ್ನ ರಕ್ಷಣಾ ಸಮಸ್ಯೆ ತಾನೇ ನಿಭಾಯಿಸಲು ಸಮರ್ಥ ಎಂದು ತಿಳಿಸಿದೆ.

ಮೈಸೂರು ಫ್ಯಾಷನ್ ವೀಕ್ ಸೀಸನ್–6

ಶೋ ಟಾಪರ್ ಆಗಿ ಹೊರ ಹೊಮ್ಮಿದ ನಟಿ ಧನ್ಯಾ ರಾಮ್‌ಕುಮಾರ್









ಮೈಸೂರು,ಡಿ.9(ಜಿಎ)–ಕೈಮಗ್ಗದ ಸೀರೆಯುಟ್ಟು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದ ನಟಿ ಧನ್ಯಾ ರಾಮ್‌ಕುಮಾರ್ 'ಮೈಸೂರು ಫ್ಯಾಷನ್ ವೀಕ್' ಸೀಸನ್–6'ನಲ್ಲಿ ಶೋ ಟಾಪರ್ ಆಗಿ ಮಿಂಚಿದರು.


ದಕ್ಷಿಣ ಭಾರತದ ಅತೀ ದೊಡ್ಡ ಫ್ಯಾಷನ್ ಶೋ 'ಮೈಸೂರು ಫ್ಯಾಷನ್ ವೀಕ್' ಸೀಸನ್–6' ಶುಕ್ರವಾರದಿಂದ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಮೈಸೂರು ಯೂನಿಯನ್‌ನಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸೇರಿದಂತೆ ಹಲವು ಕಂಪನಿಗಳ ಪ್ರಾಯೋಜಕತ್ವದಲ್ಲಿ ನಡೆದ ಶೋನಲ್ಲಿ ಮಾಡೆಲ್‌ಗಳು ಚಿತ್ತಾಕರ್ಷಕ ಸೀರೆಯುಟ್ಟು ಹೆಜ್ಜೆ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು.

ಫ್ಯಾಷನ್ ಶೋನಲ್ಲಿ ಖ್ಯಾತ ಫ್ಯಾಷನ್ ವಿನ್ಯಾಸಕರು, ಟಾಪ್ ಮಾಡೆಲ್‌ಗಳು ಮತ್ತು ಹೆಸರಾಂತ ಸೆಲೆಬ್ರಿಟಿಗಳು ಭಾಗವಹಿಸಿದ್ದರು. ಖ್ಯಾತ ಡಿಸೈನರ್ ಶ್ರವಣ್ ಕುಮಾರ್ ವಿನ್ಯಾಸ ಮಾಡಿರುವ ರೇಷ್ಮೆಯ ಸೀರೆಗಳನ್ನು ಧರಿಸಿದ ಮಾಡೆಲ್‌ಗಳಾದ ಸೋನಾಲಿಕಾ ಸಹಾಯ್, ಶ್ವೇತಾ ಡಾಲಿ, ಕರಿಷ್ಮಾ ಮೋದಿ, ಐರಿಸ್ ಭಾಸ್ಕರ್ ಮೈಟಿ, ಪಾರುಲ್ ಬಿಂದಾಲ್, ರಿಯಾ ಸುಬೋಧ್, ಜಸ್ಪಾಲ್ ಕೌರ್ ಚನಾ, ಜಾಕಿ ಬೆಸ್ವರ್‌ವಿಚ್, ಪ್ರಿಯಾಂಕಾ ದಿವಾನ್, ವೀಣಾ ಸಿಂಗ್, ಶಾನವಾಜ್ ಆಲಂ, ಸನ್ನಿ ಕಾಂಬ್ಳೆ, ಸುಜೋ ಮ್ಯಾಥ್ಯೂ, ಗೋಕುಲ್ ಗಣೇಶ್, ರಿತೇಶ್ ರಾವತ್, ರಿತೇಶ್ ರಾವತ್ ಮೊದಲಾದ ಸೂಪರ್ ಮಾಡೆಲ್‌ಗಳು ರ್‍ಯಾಂಪ್ ವಾಕ್ ಮಾಡಿದರು.

ಇದರಲ್ಲಿ ಡಾ.ರಾಜ್‌ಕುಮಾರ್ ಮೊಮ್ಮಗಳಾದ ನಟಿ ಧನ್ಯಾ ರಾಮ್‌ಕುಮಾರ್ ಚಿನ್ನದ ಬಣ್ಣದ ರೇಷ್ಮೆ ಸೀರೆ ಧರಿಸಿ, ಹೆಜ್ಜೆ ಹಾಕಿ ಶೋ ಟಾಪರ್ ಆಗಿ ಗಮನ ಸೆಳೆದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರು ನನಗೆ ಅಚ್ಚುಮೆಚ್ಚು. ತಿಂಗಳಲ್ಲಿ ಅನೇಕ ಬಾರಿ ಬರುತ್ತೇನೆ. ಮೊದಲ ಬಾರಿಗೆ 'ಮೈಸೂರು ಫ್ಯಾಷನ್ ವೀಕ್'ನಲ್ಲಿ ಭಾಗವಹಿಸುತ್ತಿದ್ದೇನೆ. ಖ್ಯಾತ ಡಿಸೈನರ್ ಶ್ರವಣ್‌ಕುಮಾರ್ ವಿನ್ಯಾಸ ಮಾಡಿರುವ ಉಡುಪು ಧರಿಸಿರುವುದಕ್ಕೆ ಸಂತಸವಾಗುತ್ತಿದೆ. ಮೈಸೂರು ಸಿಲ್ಕ್ ಸೀರೆ ನಮ್ಮ ಇಡೀ ಕುಟುಂಬಕ್ಕೆ ನೆಚ್ಚಿನ ಸೀರೆಯಾಗಿದ್ದು, ಅನೇಕ ಸೀರೆಗಳನ್ನು ತಾಯಿ ಸಂಗ್ರಹಿಸಿದ್ದಾರೆ ಎಂದರು. ಶೋನಲ್ಲಿ ಕೊಮಲ್ ಸೂದ್, ಪದ್ಮಸಿತಾ, ಚಾರು ಪರಾಶರ್, ನಜೀಮ್ ಅಲಿಖಾನ್, ಫೆಲಿಕ್ಸ್ ಬಂದೀಶ್, ಮುಖೇಶ್, ಆಸಿಫ್ ಮರ್ಚೆಂಟ್, ಅಂಜಲಿ, ಪಂಕಜ್ ಕಪೂರ್, ಸೋನಿ, ಕಿಂಗ್‌ಶುಕ್, ಪ್ರಶಾಂತ್, ರೀನಾ ಢಾಕಾ, ವಿಪಿನ್ ಅಗರ್ವಾಲ್, ಚೈತನ್ಯ ರಾವ್ ಮೊದಲಾದವರು ವಿನ್ಯಾಸ ಮಾಡಿದ ವಸ್ತ್ರಗಳನ್ನು ಧರಿಸಿ ಮಾಡಲ್‌ಗಳು ರ್‍ಯಾಂಪ್ ವಾಕ್ ಮಾಡಿದರು.

ಇಂದು ಮೈಸೂರಿಗೆ ಮುಖ್ಯಮಂತ್ರಿ ಬೊಮ್ಮಾಯಿ



ಮೈಸೂರು, ಡಿ.9(ಎಂಟಿವೈ)– ರಂಗಾಯಣದ ಬಹುರೂಪಿ ನಾಟಕೋತ್ಸವ ಉದ್ಘಾಟನೆ ಸೇರಿದಂತೆ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ(ಡಿ.10) ಮೈಸೂರಿಗೆ ಆಗಮಿಸಲಿದ್ದಾರೆ. ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಮಧ್ಯಾಹ್ನ 12.30ಕ್ಕೆ ವಿಶೇಷ ವಿಮಾನದಲ್ಲಿ ಮೈಸೂರಿನತ್ತ ಪ್ರಯಾಣ ಬೆಳೆಸಲಿದ್ದು, ಮಧ್ಯಾಹ್ನ 1.05ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಬಳಿಕ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದ ಆವರಣದಲ್ಲಿ ನಡೆಯುವ ಬಸವ ಬಳಗಗಳ ಒಕ್ಕೂಟದ ರಜತ ಮಹೋತ್ಸವ 'ಬೆಳ್ಳಿ ಬೆಳಗು' ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ ಭೋಜನದ ನಂತರ 3 ಗಂಟೆಗೆ ಇನ್ಫೋಸಿಸ್‌ನಲ್ಲಿ ಇಂಡಿಯಾ ಅಂತರ ರಾಷ್ಟ್ರೀಯ ಕಾರ್ಯಕ್ರಮ ಅನ್‌ಲಿಷ್ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಸಂಜೆ 4.30ಕ್ಕೆ ರಂಗಾಯಣದ ವನರಂಗದಲ್ಲಿ ಪ್ರಸಕ್ತ ಸಾಲಿನ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವನ್ನು ಉದ್ಘಾಟಿಸಲಿದ್ದಾರೆ. ಸಂಜೆ 5.30ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮಂಗಳೂರಿಗೆ ಪ್ರಯಾಣಿಸಲಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಹೈಡ್ರಾಮಾ: ಸಿಎಂ ಸ್ಥಾನಕ್ಕೆ ಬಲಪ್ರದರ್ಶನ, ಕಿತ್ತಾಟ

ಶಿಮ್ಲಾ: ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ 40 ಸೀಟುಗಳನ್ನು ಗೆದ್ದು ಅಧಿಕಾರಕ್ಕೆ ಬಂದ ಮರುದಿನವೇ ಪಕ್ಷದಲ್ಲಿ ಬಿಕ್ಕಟ್ಟು ಎದುರಾಗಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಜಿದ್ದಾಜಿದ್ದಿ ಏರ್ಪಟ್ಟಿದ್ದು, ಸಿಎಂ ಆಯ್ಕೆ ಸಂಬಂಧ ಕಾಂಗ್ರೆಸ್ ನಾಯಕರು ಆಯೋಜಿಸಿದ್ದ ಸಭೆ ಕೋಲಾಹಲಕ್ಕೆ ಸಾಕ್ಷಿಯಾಗಿದೆ. ಸಿಎಂ ಸ್ಥಾನದ ಮುಂಚೂಣಿ ಅಭ್ಯರ್ಥಿಯಾಗಿರುವ ಪ್ರತಿಭಾ ಸಿಂಗ್ ಅವರ ಬೆಂಬಲಿಗರು ಘೋಷಣೆಗಳನ್ನು ಕೂಗಿದ್ದಲ್ಲದೆ, ತಮ್ಮದೇ ನಾಯಕರ ಬೆಂಗಾವಲು ವಾಹನಕ್ಕೆ ಅಡ್ಡಿಪಡಿಸಿದ್ದಾರೆ.

ಶಿಮ್ಲಾದ ಒಬೆರಾಯ್ ಸೆಸಿಲ್ ಹೊರಭಾಗದಲ್ಲಿ ಸೇರಿಕೊಂಡಿದ್ದ ಪ್ರತಿಭಾ ಸಿಂಗ್ ಬೆಂಬಲಿಗರು, ಛತ್ತೀಸಗಡ ಸಿಎಂ ಭೂಪೇಶ್ ಬಾಘೆಲ್ ಅವರ ಬೆಂಗಾವಲು ವಾಹನವನ್ನು ತಡೆದಿದ್ದಾರೆ. ಕಾಂಗ್ರೆಸ್ ವರಿಷ್ಠರ ಅಣತಿಯಂತೆ ಬಾಘೆಲ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಲು ತೆರಳಿದ್ದರು.

ಬಾಘೆಲ್ ಅವರ ಕಾರನ್ನು ಸುತ್ತುವರಿದ ಕಾಂಗ್ರೆಸ್ ಕಾರ್ಯಕರ್ತರು, ಪ್ರತಿಭಾ ಸಿಂಗ್ ಅವರ ಪರವಾಗಿ ಘೋಷಣೆಗಳನ್ನು ಕೂಗಿದರು. ಹಿಮಾಚಲ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷರಾಗಿರುವ ಪ್ರತಿಭಾ, ಸಂಸದೆಯಾಗಿದ್ದಾರೆ. ಮಾಜಿ ಸಿಎಂ, ದಿವಂಗತ ವೀರಭದ್ರ ಸಿಂಗ್ ಅವರ ಪತ್ನಿಯಾಗಿರುವ ಪ್ರತಿಭಾ ಸಿಂಗ್ ಅವರು ಸಿಎಂ ಸ್ಥಾನದ ಮುಂಚೂಣಿಯಲ್ಲಿದ್ದಾರೆ. ಸುಖ್ವಿಂದರ್ ಸಿಂಗ್ ಸುಖು, ಮುಕೇಶ್ ಅಗ್ನಿಹೋತ್ರಿ ಮತ್ತು ಹರ್ಷವರ್ದನ್ ಚೌಹಾಣ್ ಕೂಡ ರೇಸ್‌ನಲ್ಲಿದ್ದಾರೆ. ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕರಾಗಿರುವ ಸುಖು ಅವರ ಬೆಂಬಲಿಗರು ಸಹ ಸಭೆ ನಡೆಯುವ ಹೋಟೆಲ್ ಹೊರಗೆ ನೆರೆದಿದ್ದು, ಬಲ ಪ್ರದರ್ಶನ ಮಾಡಿದ್ದಾರೆ.

ಮುಖ್ಯಮಂತ್ರಿ ಆಯ್ಕೆಗೆ ಸಭೆ ನಡೆಸುವುದಕ್ಕೂ ಮುನ್ನ ರಾಜ್ಯಪಾಲರನ್ನು ಭೇಟಿ ಮಾಡಿದ ಕಾಂಗ್ರೆಸ್ ವೀಕ್ಷಕರು, ಅವರೊಂದಿಗೆ ಮಾತುಕತೆ ನಡೆಸಿದರು. ಕಾಂಗ್ರೆಸ್ ಹಿರಿಯ ನಾಯಕರು ಹಾಗೂ ಹೊಸ ಶಾಸಕರ ಜತೆ ಸಭೆಗೆ ಹಾಜರಾಗುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಹಿರಿಯ ಮುಖಂಡ ರಾಜೀವ್ ಶುಕ್ಲಾ, ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲ ಎಂದಿದ್ದಾರೆ.

ಉಚಿತ ಮಧುಮೇಹ ತಪಾಸಣೆ, ಜಾಗೃತಿ ಶಿಬಿರ

ಮೈಸೂರು, ಡಿ.9–ಮೈಸೂರಿನ ದಟ್ಟಗಳ್ಳಿ 3ನೇ ಹಂತದಲ್ಲಿರುವ ನಯನ ಕುಮಾರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಡಿ.12ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಉಚಿತ ಮಧುಮೇಹ ತಪಾಸಣೆ, ಜಾಗೃತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9513310100, 9513310103 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಿಧಾನಸಭೆ – 2023

ಚುನಾವಣಾ ಜಿದ್ದಾಜಿದ್ದಿ

ಕ್ಷೇತ್ರದ ಶಾಸಕರ ಪರಂಪರೆ

1978–ಪುಟ್ಟಸ್ವಾಮಿ	(ಜನತಾ ಪಕ್ಷ)
1983–ಹೆಚ್.ಕೆಂಪೇಗೌಡ	(ಜನತಾ ಪಕ್ಷ)
1985–ಹೆಚ್.ಕೆ.ಕೆಂಪೀರೇಗೌಡ	(ಜನತಾ ಪಕ್ಷ)
1989–ಹರ್ಷಕುಮಾರಗೌಡ	(ಕಾಂಗ್ರೆಸ್)
1994–ಶಂಕರಲಿಂಗೇಗೌಡ	(ಬಿಜೆಪಿ)
1999–ಶಂಕರಲಿಂಗೇಗೌಡ	(ಬಿಜೆಪಿ)
2004–ಶಂಕರಲಿಂಗೇಗೌಡ	(ಬಿಜೆಪಿ)
2008–ಶಂಕರಲಿಂಗೇಗೌಡ	(ಬಿಜೆಪಿ)
2013–ವಾಸು	(ಕಾಂಗ್ರೆಸ್)
2018–ಎಲ್.ನಾಗೇಂದ್ರ	(ಬಿಜೆಪಿ)

ಚಾಮರಾಜ ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್

ಟಿಕೆಟ್ ಆಕಾಂಕ್ಷಿಗಳ ಪೈಪೋಟಿ



ಮತದಾರರ ಸಂಖ್ಯಾಬಲ

1,15,916 ಪುರುಷ ಮತದಾರರು

1,18,248 ಮಹಿಳಾ ಮತದಾರರು

26 ತೃತೀಯ ಲಿಂಗ ಮತದಾರರು

2,34,190 ಒಟ್ಟು ಮತದಾರರು



ಎಲ್.ನಾಗೇಂದ್ರ | ವಾಸು | ಕೆ.ಹರೀಶ್‌ಗೌಡ | ಕೆ.ವಿ.ಶ್ರೀಧರ್ | ಸಿ.ಮಹದೇಶ್ | ಎಸ್.ಬಿ.ಎಂ.ಮಂಜು | ಡಾ.ಮಂಜುನಾಥ್ | ಡಿ.ಮಾದೇಗೌಡ | ಸಂದೀಶ್ ಪ್ರೀತಂ

■ ಎಂ.ಬಿ.ಪವನ್‌ಮೂರ್ತಿ

ಮೈಸೂರು,ಡಿ.9– ಮೈಸೂರು ಮಹಾನಗರದೊಳಗೆ ಬೆರೆತು ಹೋಗಿದ್ದರೂ ಗ್ರಾಮೀಣ ಸೊಗಡಿನ ಕೊಪ್ಪಲುಗಳ ಜೊತೆಗೆ ಪ್ರತಿಷ್ಠಿತ ಬಡಾವಣೆಗಳನ್ನೂ ಹೊಂದಿರುವ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 2023ರ ಚುನಾವಣೆಗೆ ಪ್ರಮುಖ ಮೂರು ಪಕ್ಷಗಳಲ್ಲೂ ಆಕಾಂಕ್ಷಿಗಳು ಟಿಕೆಟ್ ಗಿಟ್ಟಿಸಲು ತಮ್ಮದೇ ಕಾರ್ಯತಂತ್ರದಲ್ಲಿ ತೊಡಗಿದ್ದಾರೆ.

ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳಿದ್ದರ ನಡುವೆ ಪಕ್ಷದ ಟಿಕೆಟ್‌ಗಾಗಿ ನೇರ ಪೈಪೋಟಿ ಏರ್ಪಟ್ಟಿದೆ. ಬಿಜೆಪಿಯಲ್ಲಿ ಹಲವು ಆಕಾಂಕ್ಷಿಗಳಿದ್ದರೆ, ಜೆಡಿಎಸ್‌ನಲ್ಲಿ ಮೂವರ ಹೆಸರು ಮುನ್ನೆಲೆಗೆ ಬಂದಿವೆ. ಕ್ಷೇತ್ರದ ಹಾಲಿ ಬಿಜೆಪಿ ಶಾಸಕ ಎಲ್.ನಾಗೇಂದ್ರ ಪುನರಾಯ್ಕೆ ಬಯಸಿ ಕ್ಷೇತ್ರದ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೆ, ಇವರ ಪಕ್ಷದ ಇನ್ನಿತರ ಆಕಾಂಕ್ಷಿಗಳು ಟಿಕೆಟ್ ಗಿಟ್ಟಿಸಿಕೊಳ್ಳಲು ತಮ್ಮದೇ ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ಕ್ಷೇತ್ರದ ಮಾಜಿ ಶಾಸಕ ವಾಸು ಮತ್ತು ಕೆ.ಹರೀಶ್‌ಗೌಡ ಕಾಂಗ್ರೆಸ್ ಟಿಕೆಟ್ ಪ್ರಬಲ ಆಕಾಂಕ್ಷಿಗಳಾಗಿದ್ದು, ಅಂತಿಮವಾಗಿ ಟಿಕೆಟ್ ಗಿಟ್ಟಿಸುವವರ್ಯಾರು ಎಂಬ ಕೌತುಕ ಕಾಡುವಂತಾಗಿದೆ. ಜೆಡಿಎಸ್‌ನಿಂದ ನಗರ ಪಾಲಿಕೆ ಸದಸ್ಯ ಹಾಗೂ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ, ಕಾರ್ಯಾಧ್ಯಕ್ಷರೂ ಆದ ಕೆ.ವಿ.ಶ್ರೀಧರ್, ಹಾಲಿ ಪಾಲಿಕೆ ಸದಸ್ಯ ಎಸ್.ಬಿ.ಎಂ.ಮಂಜು, ನಗರ ಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್ ಆಕಾಂಕ್ಷಿಗಳಾಗಿದ್ದಾರೆ.

ಒಕ್ಕಲಿಗ ಸಮುದಾಯದ ಮತದಾರರ ಸಂಖ್ಯೆ ಹೆಚ್ಚಿರುವ ಜೊತೆಗೆ ಈವರೆಗೆ ಸ್ಪರ್ಧಿಸಿರುವ ಬಹುತೇಕ ಅಭ್ಯರ್ಥಿಗಳು ಇದೇ ಸಮುದಾಯದವರೇ. ಈವರೆಗೆ ಕ್ಷೇತ್ರದ ಶಾಸಕ ಸ್ಥಾನ ಅಲಂಕರಿಸಿದವರೂ ಒಕ್ಕಲಿಗ ಸಮುದಾಯದವರೇ ಎಂಬುದು ಕುತೂಹಲಕಾರಿ ಅಂಶ. ಈ ಹಿನ್ನೆಲೆಯಲ್ಲಿ ಈಗಲೂ ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳಿಗೆ ಮೂರು ಪ್ರಮುಖ ಪಕ್ಷಗಳು ಅವಕಾಶ ನೀಡುವುದು ಬಹುತೇಕ ಖಚಿತ ಎನ್ನುವುದು ರಾಜಕೀಯ ವಲಯದ ಲೆಕ್ಕಾಚಾರ.

1978ರಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬಂದಿತು. ಈವರೆಗೆ ಕ್ಷೇತ್ರದಲ್ಲಿ ಒಟ್ಟು 11 ಚುನಾವಣೆಗಳು ನಡೆದಿದ್ದು, ಹೆಚ್.ಎಸ್.ಶಂಕರಲಿಂಗೇಗೌಡರು ಸತತ 4 ಬಾರಿ ಚುನಾಯಿತರಾಗಿ ದಾಖಲೆ ಬರೆದಿದ್ದಾರೆ.

ನಾಲ್ಕು ಬಾರಿ ಸ್ಪರ್ಧಿಸಿ ಅದರಲ್ಲಿ ಒಮ್ಮೆ ಗೆದ್ದು ಬೀಗಿದ್ದ ವಾಸು, ಕಳೆದ ಬಾರಿ ಬಿಜೆಪಿ ಅಭ್ಯರ್ಥಿ, ಹಾಲಿ ಶಾಸಕ ಎಲ್.ನಾಗೇಂದ್ರ ಎದುರು ಪರಾಭವಗೊಂಡರು. ಮೇಯರ್ ಆಗಿ ವೀರಪ್ಪ ಮೊಯ್ಲಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅವರ ರಾಜಕೀಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ವಾಸು ಅವರಿಗೆ ಒಮ್ಮೆ ಶಾಸಕರಾಗಲು ಜನಾಶೀರ್ವಾದ ದೊರೆತ್ತಿತ್ತು. ಇದೀಗ ಮತ್ತೊಮ್ಮೆ ಆಯ್ಕೆ ಬಯಸಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿ ಪಕ್ಷದ ನಿಯಮದಂತೆ ಅರ್ಜಿ ಸಹ ಸಲ್ಲಿಸಿದ್ದಾರೆ. ಈ ನಡುವೆ ಕಾಂಗ್ರೆಸ್ ಟಿಕೆಟ್‌ಗೆ ಕೆ.ಹರೀಶ್‌ಗೌಡ ಸಹ ಪ್ರಬಲ ಆಕಾಂಕ್ಷಿಯಾಗಿದ್ದು, ದಶಕಕ್ಕೂ ಹೆಚ್ಚು ಕಾಲ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ತಮ್ಮದೇ ಛಾಪು ಮೂಡಿಸಿದ್ದಾರೆ. ಆರಂಭದಲ್ಲಿ ಜೆಡಿಎಸ್ ನಲ್ಲಿದ್ದ ಹರೀಶ್‌ಗೌಡ, ಹೆಚ್.ಡಿ.ರೇವಣ್ಣ ಅವರ ಶಿಷ್ಯರಾಗಿದ್ದರು. 2013 ಹಾಗೂ 2018ರ ಚುನಾವಣೆಗಳಲ್ಲಿ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಬದಲಾದ ರಾಜಕೀಯ ಸ್ಥಿತ್ಯಂತರದಲ್ಲಿ 2013ರಲ್ಲಿ ಜೆಡಿಎಸ್‌ನಿಂದ ಹೆಚ್.ಎಸ್.ಶಂಕರಲಿಂಗೇಗೌಡರಿಗೆ ಟಿಕೆಟ್ ನೀಡಿ, ಮುಂದಿನ ಚುನಾವಣೆಗೆ ಟಿಕೆಟ್ ನೀಡುವುದಾಗಿ ಹರೀಶ್‌ಗೌಡರನ್ನು ವರಿಷ್ಠರು ಸಮಾಧಾನಪಡಿಸಿದ್ದರು. ಆದರೆ 2018ರಲ್ಲೂ ಮತ್ತೆ ಹರೀಶ್‌ಗೌಡ ಮತ್ತೆ ಜೆಡಿಎಸ್ ಟಿಕೆಟ್‌ನಿಂದ ವಂಚಿತರಾದರು. ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರಿಗೆ ಪಕ್ಷದ ಟಿಕೆಟ್ ದಕ್ಕಿತು. ಇದರಿಂದ ಬೇಸರಗೊಂಡ ಕೆ.ಹರೀಶ್‌ಗೌಡ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಪರಾಭವಗೊಂಡರು. ಬಳಿಕ ಪಾಲಿಕೆ ಚುನಾವಣೆಯಲ್ಲಿ ತಮ್ಮ ಕಡೆಯಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ, ಇಬ್ಬರನ್ನು ಗೆಲ್ಲಿಸಿಕೊಳ್ಳುವಲ್ಲೂ ಯಶಸ್ವಿಯಾದರು. ನಂತರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ ಅವರು, ಈ ಬಾರಿ ಕಾಂಗ್ರೆಸ್‌ನಿಂದ ಕ್ಷೇತ್ರದ ಟಿಕೆಟ್ ಪಡೆದು ಸ್ಪರ್ಧಿಸಲು ಪ್ರಬಲ ಆಕಾಂಕ್ಷಿಯಾಗಿದ್ದು, ಟಿಕೆಟ್‌ಗಾಗಿ ಕೆಪಿಸಿಸಿ ನಿಯಮದಂತೆ ಅರ್ಜಿ ಸಲ್ಲಿಸಿದ್ದಾರೆ. ಕ್ಷೇತ್ರದಲ್ಲಿ ತಮ್ಮದೇ ಕಾರ್ಯಕರ್ತರ ಪಡೆ ಹೊಂದಿರುವ ಕೆ.ಹರೀಶ್‌ಗೌಡ, ನಿತ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸಿದ್ದರಾಮಯ್ಯ ಆಪ್ತರಾಗಿರುವ ಹರೀಶ್‌ಗೌಡಗೆ ಈ ಬಾರಿ ಟಿಕೆಟ್ ಖಚಿತ ಎಂಬುದು ಅವರ ಅಭಿಮಾನಿಗಳ ವಿಶ್ವಾಸದ ಮಾತು. ಮತ್ತೊಂದೆಡೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಆಪ್ತರಾದ ವಾಸು ಪರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬ್ಯಾಟ್ ಮಾಡಲಿದ್ದಾರೆ ಎನ್ನುವುದು ವಾಸು ಬೆಂಬಲಿಗರ ವಿಶ್ವಾಸ. ಶಾಸಕರಾಗಿದ್ದಾಗ ಕ್ಷೇತ್ರದಲ್ಲಿ ಜಯದೇವ ಆಸ್ಪತ್ರೆ, ಮೈಸೂರು ಜಿಲ್ಲಾ ಆಸ್ಪತ್ರೆ, ಟ್ರಾಮಾ ಸೆಂಟರ್, ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು ಕಟ್ಟಡ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹೀಗೆ ಜನರಿಗೆ ಆರೋಗ್ಯ, ಶಿಕ್ಷಣಕ್ಕಾಗಿ ಮೂಲಸೌಕರ್ಯ ಕಲ್ಪಿಸಿರುವ ಅವರ ಕೊಡುಗೆಯನ್ನು ಕಳೆದ ಬಾರಿ ಮನವರಿಕೆ ಮಾಡಿಕೊಳ್ಳದ ಮತದಾರರು ಈ ಬಾರಿ ಖಂಡಿತ ಅವರ ಕೈಹಿಡಿಯುತ್ತಾರೆ. ಪಕ್ಷ ಅವರಿಗೆ ಸ್ಪರ್ಧಿಸಲು ಅವಕಾಶ ನೀಡಬೇಕಷ್ಟೆ ಎನ್ನುತ್ತಾರೆ.

ಪುನರಾಯ್ಕೆ ಬಯಸಿ ಸಜ್ಜಾಗುತ್ತಿರುವ ಹಾಲಿ ಶಾಸಕರು

ಕ್ಷೇತ್ರದಲ್ಲಿ ಬಿಜೆಪಿಯ ಹಾಲಿ ಶಾಸಕ ಎಲ್.ನಾಗೇಂದ್ರ ನಿತ್ಯ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು, ಪುನರಾಯ್ಕೆ ಬಯಸಿ ಸ್ಪರ್ಧೆಗೆ ಸಜ್ಜಾಗುತ್ತಿದ್ದಾರೆ. ಎಲ್.ನಾಗೇಂದ್ರ ಅವರಿಗೇ ಈ ಬಾರಿ ಬಿಜೆಪಿ ಟಿಕೆಟ್ ಎಂಬುದು ಅವರ ಬೆಂಬಲಿಗರು, ಕ್ಷೇತ್ರದ ಪಕ್ಷದ ಕಾರ್ಯಕರ್ತರ ಬಲವಾದ ವಿಶ್ವಾಸ. ಅಷ್ಟು ಮಾತ್ರವಲ್ಲದೆ, ಅವರೇ ಪುನರಾಯ್ಕೆ ಆಗುತ್ತಾರೆ ಎಂಬ ಅಚಲ ವಿಶ್ವಾಸವೂ ಈ ಕಾರ್ಯಕರ್ತರಲ್ಲಿ ಇದೆ.

ಹಾಲಿ ಶಾಸಕರು ಕ್ಷೇತ್ರದಲ್ಲಿ ನಿತ್ಯ ಸಕ್ರಿಯವಾಗಿ ಪಾದಯಾತ್ರೆ ಮೂಲಕ ಕ್ಷೇತ್ರದ ಜನತೆಯ ಕುಂದು ಕೊರತೆ ಆಲಿಸುವುದು, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವುದು ಸೇರಿದಂತೆ ಕಾರ್ಯಕರ್ತರ ಸಂಪರ್ಕದಲ್ಲಿದ್ದು ಸಕ್ರಿಯರಾಗಿದ್ದಾರೆ. ಹಾಲಿ ಶಾಸಕರು, ಸಾಕಷ್ಟು ಅಭಿವೃದ್ಧಿ ಕಾರ್ಯದ ಮೂಲಕ ಜನಮನ್ನಣೆ ಗಳಿಸಿರುವುದರಿಂದ ಇವರಿಗೇ ಟಿಕೆಟ್ ಲಭಿಸುತ್ತದೆ ಎಂಬ ಲೆಕ್ಕಾಚಾರ ಹರಿದಾಡುತ್ತಿದ್ದು, ಬಿಜೆಪಿ ವರಿಷ್ಠರ ಲೆಕ್ಕಾಚಾರ ಇದಕ್ಕೆ ಪೂರಕವಾಗಿ ಕೆಲಸ ಮಾಡಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ಮತ್ತೊಂದೆಡೆ ಕ್ಷೇತ್ರದ ಬಿಜೆಪಿ ಟಿಕೆಟ್‌ಗೆ ಹಲವರ ಹೆಸರು ಮುನ್ನೆಲೆಗೆ ಬರುತ್ತಿವೆ. ಬಿಜೆಪಿ ಮಾಜಿ ನಗರಾಧ್ಯಕ್ಷ ಡಾ.ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಪಾಲಿಕೆ ಮಾಜಿ ಸದಸ್ಯ ನಂದೀಶ್ ಪ್ರೀತಂ, ಮುಖಂಡ ಜಯಪ್ರಕಾಶ್ ಅವರೂ ಟಿಕೆಟ್ ಆಕಾಂಕ್ಷಿಗಳು ಎಂಬ ಮಾತುಗಳು ವ್ಯಾಪಕವಾಗಿ ಕೇಳಿ ಬರುತ್ತಿವೆ.

ತಮ್ಮ ತಂದೆ ಶಂಕರಲಿಂಗೇಗೌಡರು ನಾಲ್ಕು ಬಾರಿ ಕ್ಷೇತ್ರದ ಶಾಸಕರಾಗಿ, ಜನನಾಯಕರಾಗಿದ್ದರು. ಅವರ ನಾಮಬಲ ನಮ್ಮ ಕೈ ಹಿಡಿಯಲಿದೆ ಎಂಬ ವಿಶ್ವಾಸದಲ್ಲಿ ನಂದೀಶ್ ಪ್ರೀತಂ ಕ್ಷೇತ್ರದಲ್ಲಿ ಅಭಿಮಾನಿಗಳನ್ನು ಸಂಘಟಿಸಿ, ತಮ್ಮ ತಂದೆಯ ಆಪ್ತರು, ಅಭಿಮಾನಿಗಳನ್ನು ಭೇಟಿಯಾಗಿ ಬೆಂಬಲ ಕೋರಿದ್ದಾರೆ. ಅಲ್ಲದೆ, ತಮಗೆ ಟಿಕೆಟ್ ನೀಡುವಂತೆ ಪಕ್ಷದ ಮುಖಂಡರಲ್ಲಿಯೂ ಪ್ರಭಾವ ಬೀರುತ್ತಿದ್ದಾರೆ ಎನ್ನಲಾಗುತ್ತಿದೆ.

ಜೆಡಿಎಸ್‌ನಲ್ಲಿ ಸದ್ಯ ಮೂವರ ಹೆಸರು ಮುನ್ನೆಲೆಗೆ

ಜೆಡಿಎಸ್‌ನಲ್ಲಿ ಸದ್ಯಕ್ಕೆ ಮೂವರ ಹೆಸರು ಮುನ್ನೆಲೆಗೆ ಬಂದಿವೆ. ನಗರ ಪಾಲಿಕೆ ಸದಸ್ಯ ಹಾಗೂ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್, ಪಾಲಿಕೆ ಸದಸ್ಯ ಎಸ್.ಬಿ.ಎಂ.ಮಂಜು, ನಗರ ಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್ ಟಿಕೆಟ್ ಆಕಾಂಕ್ಷಿಗಳು ಎನ್ನಲಾಗುತ್ತಿದೆ. 2018ರಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಸದ್ಯ ರಾಜಕಾರಣದಿಂದ ದೂರ ಸರಿದು ಶೈಕ್ಷಣಿಕವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ ವೃತ್ತಿ ಕ್ಷೇತ್ರದಲ್ಲಿ ಹಲವು ಮಹತ್ತರ ಕಾರ್ಯಗಳಿಗೆ ತಮ್ಮ ಎಲ್ಲಾ ಸಮಯ ಮೀಸಲಿಟ್ಟಿರುವ ಅವರು ಇನ್ನು ಚುನಾವಣಾ ರಾಜಕಾರಣದತ್ತ ಮುಖ ಮಾಡುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಎಂದು ರಾಜಕೀಯ ವಲಯದಲ್ಲಿ ಚರ್ಚೆ ಆಗುತ್ತಿದೆ. ಕೆ.ವಿ.ಶ್ರೀಧರ್ ಕ್ಷೇತ್ರದಲ್ಲಿ ನಿರಂತರ ಒಂದಿಲ್ಲೊಂದು ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು, ಜನಮನದಲ್ಲಿ ನೆಲೆ ನಿಲ್ಲಲು ಶ್ರಮಿಸುತ್ತಿದ್ದಾರೆ. ಕ್ಷೇತ್ರ ವ್ಯಾಪ್ತಿಯ ಹಬ್ಬಗಳು ಭಾಗದಲ್ಲಿ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಮನ್ನಣೆ ಗಳಿಸಿದ್ದಾರೆ. ಪರಿಸರ ಸಂರಕ್ಷಣೆಗಾಗಿ ಬಹುದೊಡ್ಡ ಕೊಡುಗೆ ನೀಡುತ್ತಾ ಬಂದಿದ್ದಾರೆ. ಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್ ಹಾಗೂ ಹಾಲಿ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಸಹ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ಒಟ್ಟಾರೆ ಪಕ್ಷದ ವರಿಷ್ಠರ ತೀರ್ಮಾನಕ್ಕೆ ಇವರೆಲ್ಲಾ ಕಾದಿದ್ದಾರೆ.

ಹಳೆ ವಿದ್ಯಾರ್ಥಿ ಎಂದು ಹೇಳಿಕೊಂಡು ಹಲವು ಶಾಲೆಗಳ ಶಿಕ್ಷಕರಿಗೆ ಲಕ್ಷಾಂತರ ರೂ. ವಂಚಿಸಿದ ನಕಲಿ ಕಸ್ಟಮ್ಸ್ ಅಧಿಕಾರಿ!

● ವಿಮಾನ ನಿಲ್ದಾಣದಲ್ಲಿ ಜಪ್ತಿ ಮಾಡಿದ ಚಿನ್ನಾಭರಣ ಕಡಿಮೆ ಬೆಲೆಗೆ ಕೊಡಿಸುವುದಾಗಿ ಹೇಳಿ 7.5 ಲಕ್ಷ ರೂ. ವಂಚನೆ ● ಮೈಸೂರಿನ ಸೆನ್ ಪೊಲೀಸ್ ಠಾಣೆ ಅಧಿಕಾರಿಗಳಿಂದ ಆರೋಪಿ ಬಂಧನ



ಸುದೀಪ್/ ಸ್ಯಾಂಡಿ

ಮೈಸೂರು, ಡಿ. 9(ಆರ್‌ಕೆ)– ತಾನು ಶಾಲೆಯ ಹಳೇ ವಿದ್ಯಾರ್ಥಿ ಈಗ ಕಸ್ಟಮ್ಸ್ ಅಧಿಕಾರಿ ಎಂದು ಹೇಳಿ, ಹಲವು ಶಾಲೆಗಳ ಶಿಕ್ಷಕರ ಪರಿಚಯ ಮಾಡಿಕೊಂಡು, ಆಯಾಯ ಶಾಲೆಯ ಶಿಕ್ಷಕರ ಮೊಬೈಲ್ ನಂಬರ್ ಪಡೆದು, ಕಡಿಮೆ ಹಣಕ್ಕೆ ಚಿನ್ನಾಭರಣ ಕೊಡಿಸುವುದಾಗಿ ನಂಬಿಸಿ, ಲಕ್ಷಾಂತರ ರೂ. ವಂಚಿಸಿದ್ದ ವ್ಯಕ್ತಿಯನ್ನು ಮೈಸೂರಿನ ಸೆನ್ ಪೊಲೀಸ್ ಠಾಣೆ ಅಧಿಕಾರಿಗಳು ಬಂಧಿಸಿದ್ದಾರೆ.

ಬೆಂಗಳೂರಿನ ಸಿಂಗಪಾಳ್ಯ ನಿವಾಸಿ ಗೋವಿಂದಪ್ಪ ಅವರ ಮಗ ಜಿ.ಸುದೀಪ್ ಅಲಿಯಾಸ್ ಸ್ಯಾಂಡಿ ಅಲಿಯಾಸ್ ಸಂತೋಷ್ ಬಂಧಿತ ಆರೋಪಿಯಾಗಿದ್ದು, ಪ್ರಸ್ತುತ ಆತ ಅಮೆಜಾನ್ ಕಂಪನಿಯಲ್ಲಿ ಸ್ಕ್ಯಾನರ್ ಆಗಿ ಕೆಲಸ ಮಾಡುತ್ತಿದ್ದನೆಂಬುದು ವಿಚಾರಣೆಯಿಂದ ತಿಳಿದುಬಂದಿದೆ.


ಮೈಸೂರಿನ ವಿಜಯನಗರದಲ್ಲಿರುವ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಸ್ಕಿರ ದೂರವಾಣಿ (ಲ್ಯಾಂಡ್‌ಲೈನ್)ಗೆ ಫೋನ್ ಮಾಡಿ ತಾನು ಸಂತೋಷ್, ಶಾಲೆಯ ಹಳೇ ವಿದ್ಯಾರ್ಥಿ ಎಂದು ಪರಿಚಯ ಮಾಡಿ ಕೊಂಡು ಕೆಲ ಶಿಕ್ಷಕರ ಮೊಬೈಲ್ ನಂಬರ್‌ಗಳನ್ನು ಪಡೆದುಕೊಂಡಿದ್ದನು. ನಂತರ ಶಿಕ್ಷಕರೊಬ್ಬರಿಗೆ ಕರೆ ಮಾಡಿ ತಾನು ಈಗ ಕಸ್ಟಮ್ಸ್ ಅಧಿಕಾರಿ ಎಂದು ನಂಬಿಸಿದ್ದಾನೆ. ಏರ್‌ಪೋರ್ಟ್‌ನಲ್ಲಿ ವಶಪಡಿಸಿಕೊಂಡಿರುವ ಭಾರೀ ಪ್ರಮಾಣದ ಚಿನ್ನದ ಆಭರಣಗಳನ್ನು ನಮ್ಮ ಕಚೇರಿಯಲ್ಲಿ ಹರಾಜು ಹಾಕುತ್ತಿದ್ದು, ಅದನ್ನು ತಮಗೆ ಕಡಿಮೆ ಬೆಲೆಗೆ ಕೊಡಿಸುವುದಾಗಿ ನಂಬಿಸಿ ಶಿಕ್ಷಕಿಯೊಬ್ಬರಿಂದ 2,27,000 ರೂ. ತನ್ನ ಖಾತೆಗೆ ಜಮಾ ಮಾಡಿಸಿ ಕೊಂಡಿದ್ದ. ಮತ್ತೊಂದು ಪ್ರಕರಣದಲ್ಲಿ (ಡಿಸೆಂಬರ್ 7ರಂದು) ಮೈಸೂರಿನ ಶಾಂತಲಾ ಶಾಲೆಗೆ ಕರೆ ಮಾಡಿ ಕಸ್ಟಮ್ಸ್ ಕಚೇರಿಯಲ್ಲಿ ಜಪ್ತಿ ಮಾಡಲಾಗಿರುವ ಗೃಹೋಪಯೋಗಿ ವಸ್ತುಗಳನ್ನು ನಿಮಗೆ ಕಡಿಮೆ ಬೆಲೆಗೆ ಕೊಡಿಸುತ್ತೇನೆಂದು ಹೇಳಿ 2,77,800 ರೂ. ಹಣ ಪಡೆದು ಸುದೀಪ್ ವಂಚಿಸಿದ್ದ.

ಅದೇ ರೀತಿ ಪ್ರತಿ, ಸದ್ವಿದ್ಯಾ ಶಾಲೆಗಳ ಸ್ಕಿರ ದೂರವಾಣಿಗೂ ಕರೆ ಮಾಡಿ, ತಾನು ಹಳೇ ವಿದ್ಯಾರ್ಥಿ ಎಂದು ಹೇಳಿಕೊಂಡು ಶಿಕ್ಷಕರ ಮೊಬೈಲ್ ನಂಬರ್ ಪಡೆದು ಕೊಂಡು 46,000 ರೂ., 45,000 ರೂ. ಹಾಗೂ 58,000 ರೂ. ಗಳನ್ನು ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿಸಿಕೊಂಡಿದ್ದ, ಅಲ್ಲದೆ ಬ್ಯಾಂಕಿನಿಂದ ಸಾಲ ಕೊಡಿಸುವುದಾಗಿಯೂ ನಂಬಿಸಿ, ಆಟೋ ಡ್ರೈವರ್ ಒಬ್ಬರಿಂದ 95,000 ರೂ. ಹಣವನ್ನು ಬೇರೆಯವರ ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಂಡು ವಂಚಿಸಿದ್ದ. ಈ ಸಂಬಂಧ ಮೋಸ ಹೋದವರು ನೀಡಿದ ದೂರಿನನ್ವಯ ಐಟಿ ಕಾಯ್ದೆ ಕಲಂ 66(ಸಿ), 66(ಡಿ) ಹಾಗೂ ಐಪಿಸಿ ಸೆಕ್ಷನ್ 420, 419 ರೀತ್ಯಾ ಪ್ರಕರಣಗಳನ್ನು ದಾಖಲಿಸಿ ಕೊಂಡಿದ್ದ ಸಿಇಎನ್ ಕ್ರೈಂ ಠಾಣೆ ಇನ್ಸ್‌ಪೆಕ್ಟರ್ ಜಯಕುಮಾರ್ ತನಿಖೆ ನಡೆಸುತ್ತಿದ್ದರು. ಎಲ್ಲಾ 6 ಪ್ರಕರಣಗಳಲ್ಲಿ ಒಟ್ಟು 7,48,800 ರೂ. ವಂಚಿಸಿ, ತಲೆಮರೆಸಿಕೊಂಡಿದ್ದ ಆರೋಪಿಯನ್ನು ಈಗ ಬಂಧಿಸಿರುವ ಪೊಲೀಸರು, ವಿಚಾರಣೆ ನಡೆಸಿದಾಗ ಆತ ಈ ಹಿಂದೆ ಬೆಂಗಳೂರಿನ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಗೋ ಕೊರಿಯರ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದು, ಪ್ರಸ್ತುತ ಅಮೆಜಾನ್ ಕಂಪನಿಯಲ್ಲಿ ಸ್ಕ್ಯಾನರ್ ಆಗಿ ಕೆಲಸ ಮಾಡುತ್ತಿದ್ದ ಎಂಬುದು ತಿಳಿದುಬಂದಿದೆ. ಗೂಗಲ್‌ನಲ್ಲಿ ಶಾಲೆಗಳ ಸ್ಕಿರ ದೂರವಾಣಿ ನಂಬರ್ ಸಂಗ್ರಹಿಸಿ, ತಾನು 2011–12ನೇ ಸಾಲಿನ ವಿದ್ಯಾರ್ಥಿ ಎಂದು ಪರಿಚಯ ಮಾಡಿಕೊಂಡು ಆ ಸಾಲಿನಿಂದ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮೊಬೈಲ್ ನಂಬರ್ ಪಡೆದು ವಂಚಿಸುತ್ತಿದ್ದ ಎಂಬುದು ವಿಚಾರಣೆಯಿಂದ ತಿಳಿದು ಬಂದಿದ್ದು, ಆತನ ವಿರುದ್ಧ ಬೆಂಗಳೂರಿನ ವರ್ತೂರು ರೋಡ್, ವಿಜಯನಗರ, ಆಡುಗೋಡಿ, ಹೆಚ್‌ಎಎಲ್ ಹಾಗೂ ವಿವಿ ಪುರಂ ಠಾಣೆಗಳಲ್ಲೂ ಇದೇ ಮಾದರಿಯ ಪ್ರಕರಣಗಳು ದಾಖಲಾಗಿವೆ. ಡಿಸಿಪಿ ಪ್ರದೀಪ್ ಗುಂಟಿ ನಿರ್ದೇಶನದಂತೆ, ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಮಾರ್ಗದರ್ಶನದಂತೆ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಸಿಇಎನ್ ಕ್ರೈಂ ಠಾಣೆ ಇನ್ಸ್‌ಪೆಕ್ಟರ್ ಎನ್. ಜಯಕುಮಾರ್, ಸಬ್ ಇನ್ಸ್‌ಪೆಕ್ಟರ್ ಗಳಾದ ಎನ್.ಅನಿಲ್‌ಕುಮಾರ್, ಸುಭಾಷ್‌ಚಂದ್ರ, ಸಿಬ್ಬಂದಿಗಳಾದ ಶ್ರೀನಿವಾಸ, ಮಧು ಪಾಲ್ಗೊಂಡಿದ್ದರು.

ರಾಜ್ಯಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ ಮಸೂದೆ ಮಂಡನೆ

ನವದೆಹಲಿ, ಡಿ.9–ಏಕರೂಪ ನಾಗರಿಕ ಸಂಹಿತೆ ಸಿದ್ಧಪಡಿಸಲು ಸಮಿತಿಗೆ ಅವಕಾಶ ಕಲ್ಪಿಸುವ ವಿವಾದಾತ್ಮಕ ಖಾಸಗಿ ಸದಸ್ಯರ ಮಸೂದೆಯನ್ನು ಶುಕ್ರವಾರ ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ವಿರೋಧ ಪಕ್ಷಗಳ ನಡುವೆಯೇ 'ಭಾರತದಲ್ಲಿ ಏಕರೂಪ ನಾಗರಿಕ ಸಂಹಿತೆ ಮಸೂದೆ, 2020' ಅನ್ನು ಮೇಲ್ಮನೆಯಲ್ಲಿ ಮಂಡಿಸಲಾಯಿತು. ಬಿಜೆಪಿ ಸಂಸದ ಕಿರೋಡಿ ಲಾಲ್ ಮೀನಾ ಅವರು ಏಕರೂಪ ನಾಗರಿಕ ಸಂಹಿತೆಯನ್ನು ಸಿದ್ಧಪಡಿಸಲು ಮತ್ತು ಭಾರತದಾದ್ಯಂತ ಅದರ ಅನುಷ್ಠಾನಕ್ಕಾಗಿ ರಾಷ್ಟ್ರೀಯ ತಪಾಸಣೆ ಮತ್ತು ತನಿಖಾ ಸಮಿತಿ ರಚನೆಗೆ ಅವಕಾಶ ಕಲ್ಪಿಸುವ ವಿಧೇಯಕವನ್ನು ಮಂಡಿಸಿದರು. ಈ ಮಸೂದೆ ಮಂಡನೆ ವಿರೋಧಿಸಿ ಕಾಂಗ್ರೆಸ್, ಸಿಪಿಐ, ಸಿಪಿಐ(ಎಂ), ತೃಣಮೂಲ ಕಾಂಗ್ರೆಸ್ ಸದಸ್ಯರು ಪ್ರತಿಭಟಿಸಿದರು. ಇದು ದೇಶದಲ್ಲಿ ಪ್ರಚಲಿತದಲ್ಲಿರುವ ಸಾಮಾಜಿಕ ರಚನೆ ಮತ್ತು ವಿವಿಧತೆಯಲ್ಲಿ ಏಕತೆಯನ್ನು ನಾಶಗೊಳಿಸುತ್ತದೆ ಎಂದು ಹೇಳಿದರು. ಈ ಹಿಂದೆ, ಮಸೂದೆಯನ್ನು ಪರಿಚಯಿಸಲು ಪಟ್ಟಿ ಮಾಡಲಾಗಿದ್ದರೂ, ಅದನ್ನು ಮೇಲ್ಮನೆಯಲ್ಲಿ ಮಂಡಿಸಿರಲಿಲ್ಲ.

ಸೂಕ್ಷ್ಮ ವಿಷಯವಾಗಿರುವ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಜಾರಿ ಕುರಿತು ಈಗಾಗಲೇ ಹಲವು ರಾಜ್ಯಗಳಲ್ಲಿ ಚರ್ಚೆಗಳು ನಡೆದಿವೆ. ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಈ ಕುರಿತು ಚರ್ಚೆಗಳಾಗಿವೆ. ಮಧ್ಯಪ್ರದೇಶ ಏಕರೂಪ ನಾಗರಿಕ ಸಂಹಿತೆ ಮಸೂದೆ ರಚನೆಗಾಗಿ ಕಳೆದ ಡಿ.2ರಂದು ಸಮಿತಿಯೊಂದನ್ನು ರಚಿಸಿದೆ.



ಅಭಿನಂದನೆಗಳು

ಇವರು ಡಾ|| ಸುರೇಶ್ ಬಿ. ಇವರ ಮಾರ್ಗದರ್ಶನದಲ್ಲಿ ಮಂಡಿಸಿದ ಐರೋಪಿನ್ ಆಫ್ ಥರ್ಮೋಪ್ಲಾಸ್ಟಿಕ್ ಹೈಬ್ರಿಡ್ ಕಾಂಪೋಸಿಟ್ ಮಹಾಪ್ರಬಂಧಕ್ಕೆ ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

ಶ್ರೀ ಕೃಷ್ಣ ಪ್ರಾಂಶುಪಾಲರು, ವಿದ್ಯಾವರ್ಧಕ ಪಾಲಿಟೆಕ್ನಿಕ್, ಮೈಸೂರು

ಶುಭಕೋರುವವರು: ಸುರೇಶ್ ಎನ್., ರಾಜೇಗೌಡ.ಹೆಚ್.ಜಿ, ಆನಂದ.ಎನ್.ಎಸ್

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ

Office & EE-08226-226054 | E-mail: eerdwsd.chn@gmail.com

ಟೆಂಡರ್ ಪ್ರಕಟಣೆ

ಸಂಖ್ಯೆ: 14/2022–23, ದಿನಾಂಕ: 07.12.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ರವರಿಂದ Supply of instruments for microbiology water testing Laboratory of Rural Drinking water & Sanitation Department in chamarajnagar District ನಿರ್ವಹಿಸಲು ಅರ್ಹ ISO ಪ್ರಮಾಣೀಕೃತ ತಯಾರಕರು/ಸರಬರಾಜುದಾರರು (ISO 13485) certification under 9001 for quality standards ಹೊಂದಿರುವ) ಭಾಗವಹಿಸಬಹುದಾಗಿರುತ್ತದೆ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಟೆಂಡರ್‌ಗೆ ಇಡಲಾದ ಮೊತ್ತವು ರೂ.16.61 ಲಕ್ಷ ಇರುತ್ತದೆ. ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟಾಲ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ ಮತ್ತು ಸಮಯ–07.12.2022 ಬೆಳಿಗ್ಗೆ 11.00 ಗಂಟೆ ನಂತರ, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಗುತ್ತಿಗೆದಾರರು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ–17.12.2022 @ 17:00 hrs, ಟೆಂಡರ್ ಪಾರದರ್ಶಕ ನಿಯಮಾವಳಿ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ–19.12.2022 @ 11:00 Hrs, ಟೆಂಡರ್ ಪಾರದರ್ಶಕ ನಿಯಮಾವಳಿ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ–ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ.

ವಾ.ಸಾ.ಸಂ.ಇ:ಚಾ.ನಗರ:456:2022–23

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಬಯಸುವುದೇನೆಂದರೆ, ನನ್ನ ಕಕ್ಷಿದಾರರು ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ನಂ.121/2 ರಲ್ಲಿನ 0 ಎಕರೆ 10.08 ಗುಂಟೆ ಜಮೀನನ್ನು ... ಖರೀದಿಸಲು ... ಈ ಸಂಬಂಧ ಯಾರಿಗಾದರೂ ತಕರಾರು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 7 ದಿನಗಳ ಒಳಗಾಗಿ ತಿಳಿಸತಕ್ಕದ್ದು.

ಷೆಡ್ಯೂಲ್ ಸ್ವತ್ತುಗಳ ವಿವರ

ಐಟಂ ನಂ.1 : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದಲ್ಲಿರುವ ಸರ್ವೆ ನಂ.121/2 ರಲ್ಲಿನ 0 ಎಕರೆ 10.08 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.121/3 ರಲ್ಲಿನ ಸ್ವತ್ತು, ಪಶ್ಚಿಮಕ್ಕೆ: ಸರ್ವೆ ನಂ.121/7 ರಲ್ಲಿನ ಸ್ವತ್ತು, ಉತ್ತರಕ್ಕೆ: ಸರ್ವೆ ನಂ.122 ಮತ್ತು ಸರ್ವೆ ನಂ.121/3ರಲ್ಲಿನ ಸ್ವತ್ತು, ದಕ್ಷಿಣಕ್ಕೆ: ಸರ್ವೆ ನಂ. 120 ರಲ್ಲಿನ ಸ್ವತ್ತು.

ಐಟಂ ನಂ.2 : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದಲ್ಲಿರುವ ಸರ್ವೆ ನಂ.122/1 ರಲ್ಲಿನ 0 ಎಕರೆ 32 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಮಾದಲಿಗ್ಗ ಗ್ರಾಮದ ಸರ್ವೆ ನಂ.122/2ರ ಸ್ವತ್ತು, ಪಶ್ಚಿಮಕ್ಕೆ: ನಾಲಾ, ಉತ್ತರಕ್ಕೆ: ಬೆಳವಾಡಿ ಗ್ರಾಮದ ಸರ್ವೆ ನಂ.212ರ ಸ್ವತ್ತು, ದಕ್ಷಿಣಕ್ಕೆ: ಮಾದಲಿಗ್ಗ ಗ್ರಾಮದ ಸರ್ವೆ ನಂ.121ರ ಸ್ವತ್ತು.

ಕೆ.ಎಸ್ ಮಹದೇವ ಪ್ರಸಾದ್ ವಕೀಲರು, ನಂ. 1028, ಸಿ.ಹೆಚ್.20/ಡಿ, ರೂಮ್ ನಂ.2 ಮತ್ತು 3, 1ನೇ ಮಹಡಿ, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು–570005, ಮೊ: 9164277766

ಕರ್ನಾಟಕ ಸರ್ಕಾರ

ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಮೈಸೂರು ತಾಲ್ಲೂಕು

ಸಂ: ಹುಸುಪ:01/2022–23 ದಿನಾಂಕ : 07.12.2022

ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಮುಖಾಂತರ ವಿಲೇವಾರಿ ಮಾಡುವ ಬಗ್ಗೆ ಪ್ರಕಟಣೆ

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಈ ಕೆಳಕಂಡ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು 2022–23ನೇ ಸಾಲಿಗೆ ಫಸಲಿ ವರ್ಷದಿಂದ 2026–27ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ ಅಂದರೆ (ದಿ:01.07.2022 ರಿಂದ 30.06.2027ರವರೆಗೆ) ಗರಿಷ್ಠ 05 ವರ್ಷಗಳ ಅವಧಿಗೆ ಸರ್ಕಾರದ ನಿಯಮಗಳ ಮೇರೆಗೆ ಮೊದಲ ಆದ್ಯತೆಯಂತೆ ಅರ್ಹ ಮೀನುಗಾರರ ಸಹಕಾರ ಸಂಘಕ್ಕೆ ಗುತ್ತಿಗೆ ನೀಡಲಾಗುವುದು ತದನಂತರದ ಆದ್ಯತೆ ಮೇರೆಗೆ ಅರ್ಹ ಮೀನು ಉತ್ಪಾದಕರ ಸಂಸ್ಥೆಗೆ ಗುತ್ತಿಗೆ ನೀಡಲಾಗುವುದು.


ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಸರ್ಕಾರಿ ಜಲ ಸಂಪನ್ಮೂಲಗಳ (ಕೆರೆ/ನದಿ/ಜಲಾಶಯ)ವಿವರ

ಕ್ರ ಸಂ	ಜಲ ಸಂಪನ್ಮೂಲದ ಹೆಸರು	ಗ್ರಾಮ/ಹೋಬಳಿ	ಜಲವಿಸ್ತೀರ್ಣ ಅಚ್ಚುಕಟ್ಟು(ಹೆ)	ಗುತ್ತಿಗೆ ಮೊತ್ತ (ರೂ)	ಭದ್ರತಾ ಠೇವಣಿ (ರೂ)
01	ಜಯಪುರ ಹಾರೋಹಳ್ಳಿ (ಹಾರೋಹಳ್ಳಿ ಹೊಸಕೆರೆ)	ಜಯಪುರ ಹಾರೋಹಳ್ಳಿ	20/54	3000	750

ಮೇಲ್ಕಂಡ ಜಲಸಂಪನ್ಮೂಲದ ಮೀನುಪಾಶುವಾರು ಹಕ್ಕನ್ನು ಪಡೆಯಲಿಚ್ಛಿಸುವ ಅರ್ಹ ಮೀನುಗಾರರ ಸಹಕಾರ ಸಂಘ ಹಾಗೂ ಮೀನು ಉತ್ಪಾದಕರ ಸಂಸ್ಥೆಗೆ ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ದಿ: 29.12.2022 ರೊಳಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಗುತ್ತಿಗೆ ಪಡೆಯಲು ಸಲ್ಲಿಸಬೇಕಾದ ಅರ್ಜಿ, ಷರತ್ತು/ನಿಬಂಧನೆಗಳನ್ನು ಮತ್ತು ಗುತ್ತಿಗೆದಾರರು ಬರೆದುಕೊಡಬೇಕಾದ ಕರಾರಿನ ಮುಚ್ಚಳಿಕೆ ಪತ್ರದ ಪ್ರತಿಗಳನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು.

DIPR/DDMYS/MCA/750/2022-23 ಸಹಿ/–ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮೈಸೂರು ತಾಲ್ಲೂಕು

ಕಲೆ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ಸಚಿವ ಕೆ.ಗೋಪಾಲಯ್ಯ



ಮಂಡ್ಯ, ಡಿ.9– ಕಲೆ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ಕರ್ನಾಟಕ ಜಾನಪದ ಪರಿಷತ್ ಹಾಗೂ ಜಿಲ್ಲಾಡಳಿತ ದಿಂದ ನಗರದ ಅಂಬೇಡ್ಕರ್ ಭವನದಲ್ಲಿ 2 ದಿನಗಳ ಕಾಲ ಆಯೋಜಿಸಿರುವ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಜಾನಪದ ಕಲೆಗೆ ಜೀವತುಂಬಿ ಕಲೆ ಉಳಿಸಲು ಹಿರಿಯ ಐಎಎಸ್ ಅಧಿಕಾರಿ ಡಾ.ಹೆಚ್.ಎಲ್.ನಾಗೇಗೌಡರು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಜಾನಪದ ಲೋಕವನ್ನು ಎತ್ತರಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ವನ್ನು ಇಂದು ಈ ಕಾರ್ಯಕ್ರಮ ಮಾಡುತ್ತಿದೆ ಎಂದರು.

'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಮಾತನ್ನು ಕನ್ನಡದ ಕಣ್ವ ಬಿಎಂಶ್ರೀ ಹೇಳಿದ್ದಾರೆ. ಈ ಮಾತು ಜಾನಪದದ ಶ್ರೀಮಂತಿಕೆ ಹಾಗೂ ಪರಂಪರೆ ಸಾರುತ್ತದೆ ಜನಪದ ಸಾಹಿತ್ಯ, ಕಾವ್ಯ, ಕಲೆಗಳ ತವರೂರು ಕರ್ನಾಟಕ ಎಂದರು.

ಮಲೆ ಮಹದೇಶ್ವರ, ಮಂಟೇಸ್ವಾಮಿ, ಸವದತ್ತಿ ಎಲ್ಲಮ್ಮ ಮೈಲಾರಲಿಂಗ, ಚುಂಚನಗಿರಿ ಭೈರವ, ಬಿಳಿಗಿರಿರಂಗನ ಬಗ್ಗೆ ಅಂತರ್ ಸತ್ವ ಜಾನಪದ ಪರಂಪರೆಯಲ್ಲಿ ಅಮರವಾಗಿ ಉಳಿದಿದೆ ಎಂದರು.

ಡಾ.ಎಚ್.ಎಲ್.ನಾಗೇಗೌಡರು ಉಳಿಸಿ ಬೆಳೆಸಿದ ಜಾನಪದ ನಾಡಿನಲ್ಲಿ ಉಳಿಯಬೇಕು. ಜಾನಪದ ಸಂಸ್ಕೃತಿಯನ್ನು ರಾಜ್ಯದ ವಿವಿಧ ಜಿಲ್ಲೆಗಳಿಗೆ ಪಸರಿಸಬೇಕು. ಇದಕ್ಕೆ ಬೇಕಾದ ಸಹಕಾರವನ್ನು ಸರ್ಕಾರದಿಂದ ನೀಡುತ್ತೇವೆ ಎಂದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ ಮಾತನಾಡಿ, ಜಾನಪದ ಕಲೆ ಉಳಿಸಲು ಇಂದಿನ ದಿನಗಳಲ್ಲಿ ಗಂಭೀರ ಚಿಂತನೆ ನಡೆಯಬೇಕಿದೆ ಎಂದರು.

ಪೂಜಾ ಕುಣಿತ, ಡೊಳ್ಳುಕುಣಿತ ಇನ್ನಿತರ ಕಲೆಗಳನ್ನು ಶಾಲೆಗಳಲ್ಲಿ ಅಭ್ಯಾಸ ಮಾಡಿಸಿ ಆಧುನಿಕ ಕಾಲದಲ್ಲಿ ಜಾನಪದ ಕಲೆಗಳು ಉಳಿಯುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು. ಜನಪದ ಕಲೆಗಳನ್ನು ಕಲಿಯುವುದರ ಜೊತೆಗೆ ಬೆಳೆಸಬೇಕು. ಮುಂದಿನ ಪೀಳಿಗೆಗೂ ಸಹ ಜನಪದದ ಬಗ್ಗೆ ಅರಿವು ಮೂಡಿಸಬೇಕು ಎಂದರು.

ವೇದಿಕೆಯಲ್ಲಿ ಆದಿಚುಂಚನಗಿರಿ ಸಂಸ್ಥಾನದ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥಸ್ವಾಮೀಜಿ, ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ, ಎಸ್ಪಿ ಯತೀಶ್, ಸಿಇಒ ಶಾಂತಾಹುಲ್ಮನಿ ಹಾಗೂ ಇತರರು ಉಪಸ್ಥಿತರಿದ್ದರು.

ದೇವಾಲಯ ಪುನರುಜ್ಜೀವನ ಕಾಮಗಾರಿಗೆ 2 ಲಕ್ಷ ವಿತರಣೆ



ಕೆ.ಆರ್.ಪೇಟೆ, ಡಿ.9– ತಾಲೂಕಿನ ಚಿಲ್ಲದಹಳ್ಳಿ ಗ್ರಾಮದೇವತೆ ಶ್ರೀಮಾಯಮ್ಮ ದೇವಾಲಯ ಪುನರುಜ್ಜೀವನ ಕಾಮಗಾರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ 2 ಲಕ್ಷ ರೂ.ಗಳ ಡಿಡಿ ವಿತರಿಸಲಾಯಿತು.

ದೇವಾಲಯ ಸಮಿತಿ ಅಧ್ಯಕ್ಷ ಪಟೇಲ್ ನಾಗೇಗೌಡ, ಕಾರ್ಯದರ್ಶಿ ಜಯ ರಾಮೇಗೌಡ, ಉಪಾಧ್ಯಕ್ಷ ವೆಂಕಟೇಶ್, ಖಜಾಂಚಿ ಮಹೇಂದ್ರ ಅವರಿಗೆ ಡಿಡಿ ವಿತರಿಸಿ ಮಾತನಾಡಿದ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ತಾಲೂಕು ಯೋಜನಾಧಿಕಾರಿ ಮಮತಾಶೆಟ್ಟಿ, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ರಾಜ್ಯದ ಹಳ್ಳಿಗಳ ಅಭಿವೃದ್ಧಿಗೆ ಹತ್ತು ಹಲವು ಸೇವಾ ಕಾರ್ಯಕ್ರಮ ರೂಪಿಸಿದ್ದಾರೆ. ಡೈರಿ ಕಟ್ಟಡಕ್ಕೆ ಅನುದಾನ, ಶಿಥಿಲಗೊಂಡಿರುವ ದೇವಾಲಯಗಳ ಜೀರ್ಣೋದ್ಧಾರಕ್ಕೆ ಅನುದಾನ ಸೇರಿದಂತೆ ಇನ್ನಿತರ ಸೇವಾ ಕಾರ್ಯ ಕೈಗೊಂಡಿದ್ದಾರೆ. ನಿರ್ಗತಿಕರಿಗೆ, ವಿಕಲಚೇತನರಿಗೆ ಮಾಸಾಶನ ನೀಡುವ ಮೂಲಕ ಆಸರೆಯಾಗಿದ್ದಾರೆ. ಮದ್ಯವರ್ಜನ ಶಿಬಿರದ ಮೂಲಕ ಸ್ವಾಸ್ಥ್ಯ ಶಿಬಿರ ನಿರ್ಮಾಣಕ್ಕೆ ಸಹಕಾರಿಯಾಗಿದ್ದಾರೆ. ಕೆರೆ ಅಭಿವೃದ್ಧಿ ಮೂಲಕ ಅಂತರ್ಜಲ ವೃದ್ಧಿಗೆ ಕ್ರಮ ಕೈಗೊಂಡಿದ್ದಾರೆ. ಹೀಗೆ ಅನೇಕ ಸಮಾಜಮುಖಿ ಕಾರ್ಯ ಹಮ್ಮಿಕೊಂಡಿದ್ದಾರೆ ಎಂದರು.

ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್ ಮಾತನಾಡಿ, ಕಳೆದ 20 ದಿನಗಳ ಹಿಂದೆ ಧರ್ಮಸ್ಥಳಕ್ಕೆ ಹೋಗಿ ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ದೇವಾಲಯ ಪುನರುಜ್ಜೀವನಕ್ಕೆ ಸಹಾಯಧನ ನೀಡುವಂತೆ ಮನವಿ ಮಾಡಿದ್ದೆವು. ಈ ಹಿನ್ನೆಲೆಯಲ್ಲಿ ದೇವಾಲಯ ಸಮಿತಿಗೆ 2 ಲಕ್ಷ ರೂ. ಸಹಾಯಧನ ಬಿಡುಗಡೆ ಮಾಡಿದ್ದಾರೆ. ಹಾಗಾಗಿ ಡಾ.ವೀರೇಂದ್ರ ಹೆಗ್ಗಡೆ ಅವರಿಗೆ ಗ್ರಾಮಸ್ಥರ ಪರವಾಗಿ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಇದೇ ವೇಳೆ ತಾಲೂಕು ಯೋಜನಾಧಿಕಾರಿ ಮಮತಾಶೆಟ್ಟಿ ಅವರನ್ನು ದೇವಾಲಯ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪಟೇಲ್ ನಾಗೇಗೌಡ ಹಾಗೂ ಗ್ರಾಪಂ ಸದಸ್ಯ ಶ್ರೀನಿವಾಸ್ ಸನ್ಮಾನಿಸಿದರು.

ಈ ವೇಳೆ ಅರ್ಚಕರಾದ ಕೃಷ್ಣೇಗೌಡ, ಮಂಜೇಗೌಡ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಮೇಲ್ವಿಚಾರಕಿ ಅನ್ನಪೂರ್ಣ, ಸೇವಾ ಪ್ರತಿನಿಧಿ ಸುಮ, ಡೈರಿ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷೆ ಸುನಂದ, ಸ್ವಸಹಾಯ ಸಂಘದ ಸದಸ್ಯರು, ಗ್ರಾಮದ ಮುಖಂಡರು ಹಾಜರಿದ್ದರು.

ಕಬ್ಬಿಗೆ ಬೆಂಬಲ ಬೆಲೆ ಘೋಷಿಸದಿದ್ದರೆ ರೈತರ ಹೋರಾಟದ ಹಾದಿ ಬದಲಾಗಲಿದೆ



ಮಂಡ್ಯ, ಡಿ.9– ಕಬ್ಬಿಗೆ ಸರ್ಕಾರ ವೈಜ್ಞಾನಿಕ ಬೆಲೆ ನಿಗದಿ ಮಾಡದಿದ್ದರೆ ರೈತರ ಹೋರಾಟದ ಹಾದಿ ಬದಲಾಗಲಿದೆ ಎಂದು ಆದಿಚುಂಚನಗಿರಿ ಮಠಾಧೀಶ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಎಚ್ಚರಿಕೆ ನೀಡಿದರು. ನಗರದ ಕರ್ನಾಟಕ ಸಂಘದ ಆವರಣದಲ್ಲಿ ನಡೆದ 25ನೇ ವರ್ಷದ ದೇವಮ್ಮ ಇಂಡುವಾಳು ಎಚ್.ಹೊನ್ನಯ್ಯ, ಇಂಡುವಾಳು ಎಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ ಮತ್ತು ಎಚ್.ಶಾರದಮ್ಮ ಮತ್ತು ಕೆಂಪಯ್ಯ ವಿದ್ಯಾರ್ಥಿ ಪುರಸ್ಕಾರ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ಕಬ್ಬು ಕೃಷಿಗೆ ವ್ಯಯ ಮಾಡುವ ಖರ್ಚು ಹಾಗೂ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ನೀಡುವ ಬೆಲೆಗೂ ಸಾಕಷ್ಟು ಅಂತರವಿದೆ. ಹೀಗಾಗಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಸಿಎಂ ಬಸವರಾಜ ಬೊಮ್ಮಾಯಿ ಅವರ ಬಳಿ ಈ ವಿಚಾರ ಪ್ರಸ್ತಾಪಿಸಿ ಬೆಲೆಗಳ ಅಂತರ ಸರಿದೂಗಿಸುವ ಕೆಲಸ ನಿರ್ವಹಿಸಬೇಕು ಎಂದರು.


ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಬೆಂಗಳೂರಿನಲ್ಲಿ ಕಸ ಸ್ವಚ್ಛಗೊಳಿಸಲು ಸಾವಿರಾರು ಕೋಟಿ ಖರ್ಚು ಮಾಡಲಾಗುತ್ತಿದೆ. ಆದರೆ, ಮೈಸೂರಿನ ಮುಡಾ ಮಾಜಿ ಅಧ್ಯಕ್ಷ ಮಾದೇಗೌಡರು ಮೈಸೂರಿನ ಒಂದು ವಾರ್ಡ್‌ನಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಕಸ ಸ್ವಚ್ಛಗೊಳಿಸಿ ನೈರ್ಮಲ್ಯ ಕಾಪಾಡುತ್ತಿದ್ದಾರೆ. ಇವರನ್ನು ನೋಡಿ ನಮ್ಮ ನಗರಪಾಲಿಕೆ ಆಯುಕ್ತರು ಹಾಗೂ ಅಧಿಕಾರಿಗಳನ್ನು ಕರೆಸಿ ತಿಳಿಸಿದ್ದೇನೆ ಎಂದರು. ಇದೇ ವೇಳೆ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅವರಿಗೆ ರಾಜ್ಯಮಟ್ಟದ ಇಂಡುವಾಳು ಎಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ ಹಾಗೂ ಶ್ರೀರಂಗಪಟ್ಟಣ ತಾಲೂಕು ಟಿ.ಎಂ.ಹೊಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಟಿ.ಜೆ.ತಾರಾ ಅವರಿಗೆ ದೇವಮ್ಮ ಇಂಡುವಾಳು ಎಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ವೇದಿಕೆಯಲ್ಲಿ ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಶ್ರೀಪುರುಷೋತ್ತಮಾನಂದನಾಥ ಸ್ವಾಮೀಜಿ, ಶಾಸಕರಾದ ಎಂ.ಶ್ರೀನಿವಾಸ್, ಮಧು ಜಿ.ಮಾದೇಗೌಡ, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿ.ಪಿ.ಉಮೇಶ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ಇತರರಿದ್ದರು.

ಪ್ರತಿ ಬಾರಿ ಕ್ಷೇತ್ರ ಅಡಮಾನ ಮಾಡುವುದನ್ನು ಬಿಟ್ಟು ಅಭ್ಯರ್ಥಿ ಕಣಕ್ಕಿಳಿಸಿ

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್‌ಗೆ ಶಾಸಕ ಸಿಎಸ್ ಪುಟ್ಟರಾಜು ತಿರುಗೇಟು



ಮಕ್ಕಳೊಂದಿಗೆ ಕುಳಿತು ಊಟ ಮಾಡಿದ ಸಿಎಸ್‌ಪಿ



ಶಾಸಕ ಸಿ.ಎಸ್.ಪುಟ್ಟರಾಜು ಅರಳಕುಪ್ಪೆ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಕಾಂಪೌಂಡ್ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಿ ಬಳಿಕ ಸರತಿ ಸಾಲಿನಲ್ಲಿ ಮಕ್ಕಳೊಂದಿಗೆ ಕುಳಿತು ಬಿಸಿಯೂಟ ಸವಿದರು. ಶಿಕ್ಷಕರು, ಮುಖಂಡರು ಶಾಸಕರಿಗೆ ಬೇರೆ ಊಟದ ವ್ಯವಸ್ಥೆ ಮಾಡಿದ್ದರೂ ಅದನ್ನು ತಿರಸ್ಕರಿಸಿದ ಶಾಸಕರು ಮಕ್ಕಳಿಗೆ ತಯಾರಿಸಿದ ಊಟವನ್ನೇ ಮಾಡುವ ಮೂಲಕ ಸರಳತೆ ಮೆರೆದರು.

ಪಾಂಡವಪುರ, ಡಿ.9– ಕಾಂಗ್ರೆಸ್‌ನವರು ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಪಕ್ಷವನ್ನು ಬೇರೆಯವರಿಗೆ ಅಡಮಾನ ಇಡುವುದನ್ನು ಬಿಟ್ಟು, ಪಕ್ಷ ಸಂಘಟಿಸಿ ಅಭ್ಯರ್ಥಿ ಕಣಕ್ಕಿಳಿಸಿ ಶಾಸಕನನ್ನಾಗಿ ಮಾಡಿ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಅವರಿಗೆ ತಿರುಗೇಟು ನೀಡಿದರು.

ತಾಲೂಕಿನ ಅರಳಕುಪ್ಪೆ ಗ್ರಾಮದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಹೆಚ್ಚುವರಿ ಕೊಠಡಿಗಳನ್ನು ಉದ್ಘಾಟಿಸಿ, ವಿವಿಧ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಗಂಗಾಧರ್ ಶಾಸಕ ಸಿ.ಎಸ್.ಪುಟ್ಟರಾಜು ಕಪಟ ನಾಟಕಗಾರ ಎಂಬ ಆರೋಪಕ್ಕೆ ತಿರುಗೇಟು ನೀಡಿದ ಶಾಸಕರು, 'ಹೌದಪ್ಪ ನಾನು ಕಪಟ ನಾಟಕಗಾರನಾಗಿರುವುದಕ್ಕೆ ಮೇಲುಕೋಟೆ ಕ್ಷೇತ್ರದ ಜನತೆ ನನ್ನನ್ನು 3 ಬಾರಿ ಶಾಸಕ, ಒಮ್ಮೆ ಸಂಸದ, ಮೂರು ಬಾರಿ ಜಿಪಂ ಸದಸ್ಯನಾಗಿ ಆಯ್ಕೆ ಮಾಡಿದ್ದಾರೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಗಂಗಾಧರ್ ನನ್ನ ಮೇಲೆ ಹಲವು ಆರೋಪಗಳನ್ನು ಮಾಡಿದ್ದಾರೆ. ಟೆಂಡರ್ ಕಾಮಗಾರಿಗಳನ್ನು ಪ್ಯಾಕೇಜ್ ಮಾಡಿ ನಾನೇ ಪಡೆಯುತ್ತೇನೆ ಎಂದು ಹೇಳಿದ್ದಾರೆ. ಈಗ 25ರಿಂದ 30 ಕೋಟಿ ಕಾಮಗಾರಿಗಳ ಟೆಂಡರ್ ನಡೆಯುತ್ತದೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಅವರು ಟೆಂಡರ್‌ನಲ್ಲಿ ಭಾಗವಹಿಸಲು ನಾನೇ ಅವಕಾಶ ಮಾಡಿಕೊಡುತ್ತೇನೆ. ಅವರು ಯಾವ ಅನುದಾನ ಕೇಳುತ್ತಾರೋ, ಅದರಲ್ಲಿ ಟೆಂಡರ್ ಹಾಕಲು ಅವಕಾಶ ಕಲ್ಪಿಸುತ್ತೇನೆ. ನಿಗದಿತ ಸಮಯಕ್ಕೆ ಕೆಲಸ ಮುಗಿಸಿಕೊಡಲಿ. ಇ ಪ್ರೊಕ್ಯೂರ್‌ಮೆಂಟ್ ಟೆಂಡರ್ ಮಾಡಿಸಿ ಸಾಕಷ್ಟು ನಿಬಂಧನೆಗಳನ್ನು ಹಾಕಿ, ಅವರೇ ಕೆಲಸ ಹಿಡಿಯುತ್ತಾರೆ ಎನ್ನುವ ಆಪಾದನೆ ಸುಳ್ಳು. ಕಾನೂನು ಚೌಕಟ್ಟು ಮೀರಿ ಏನೂ ಮಾಡಲು ಸಾಧ್ಯವಿಲ್ಲ. ಈ ಬಗ್ಗೆ ಜಿಲ್ಲೆಯಲ್ಲಿ ಮಂತ್ರಿ ಆಗಿ ಕೆಲಸ ಮಾಡಿರುವ, ಗುತ್ತಿಗೆ ಕೆಲಸದಲ್ಲಿ ಬಹಳ ಪ್ರವೀಣರಾದ ಚಲುವರಾಯಸ್ವಾಮಿ ಅವರನ್ನು ಕೇಳಿ ತಿಳಿದುಕೊಳ್ಳಲಿ ಎಂದು ಆಕ್ರೋಶ ಹೊರ ಹಾಕಿದರು.

ಶಾಸಕರು ದಬ್ಬಾಳಿಕೆ ನಡೆಸುತ್ತಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಹೌದಪ್ಪ ನಾನು ದಬ್ಬಾಳಿಕೆ ನಡೆಸಿ, ಹೆದರಿಸಿದ್ದಕ್ಕೆ ಪುನೀತೋತ್ಸವಕ್ಕೆ ನಾವು ಬೇಡ ಅಂದರೂ ಸಾಗರೋಪಾದಿ ಜನರು ಬಂದಿದ್ದು ಎಂದು ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದರು.

ಗ್ರಾಪಂ ಅಧ್ಯಕ್ಷೆ ರತ್ನಮ್ಮ, ಉಪಾಧ್ಯಕ್ಷ ರವಿ, ಬಿಇಒ ಲೋಕೇಶ್, ಡಾ.ಸಿದ್ದೇಗೌಡ, ಎಇಇ ಆದರ್ಶ, ಎಇಗಳಾದ ಕುಮಾರ್, ಬಾಲರಾಜ್, ಮಹದೇವಸ್ವಾಮಿ, ಟಿಎಚ್‌ಒ ಡಾ.ಅರವಿಂದ್, ಡಾ.ಮಣಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಮಹದೇವು, ವಿಶ್ವನಾಥ್, ಮುಖಂಡ ಪ್ರಶಾಂತ್ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

ವರಿಷ್ಠರು ನಿರ್ಧರಿಸಿದರೆ ವರುಣಾದಲ್ಲೇ ಸ್ಪರ್ಧಿಸುತ್ತೇನೆ

ತಿ.ನರಸೀಪುರ ಕಸಬಾ ಹೋಬಳಿ ದಲಿತ ಮುಖಂಡರ ಒತ್ತಾಯ ಪತ್ರವನ್ನು ಎಐಸಿಸಿ ಅಧ್ಯಕ್ಷರಿಗೆ ರವಾನಿಸಿರುವುದಾಗಿ ದಸಂಸ ಸಂಚಾಲಕ ಆಲಗೂಡು ಶಿವಕುಮಾರ್ ಘೋಷಿಸಿದಾಗ ನೆರೆದಿದ್ದ ಕಾರ್ಯಕರ್ತರು ಹರ್ಷೋದ್ಗಾರ ಮಾಡಿದರು. ಈ ವೇಳೆ ಸ್ವಲ್ಪ ಒತ್ತಡಕ್ಕೆ ಮಣಿದವರಂತೆ ಕಂಡುಬಂದ ಸಿದ್ದರಾಮಯ್ಯ, ಹೌದು, ಮತದಾರರೇ ಹೈಕಮಾಂಡ್. ಪ್ರಜಾಪ್ರಭುತ್ವದಲ್ಲಿ ಜನರೇ ಮಾಲೀಕರು. ಹೀಗಾಗಿ ನಿಮ್ಮ ಒತ್ತಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಹೈಕಮಾಂಡ್‌ಗೆ ತಿಳಿಸುತ್ತೇನೆ ಎಂದು ಹೇಳುವ ಮೂಲಕ ಕಾರ್ಯಕರ್ತರನ್ನು ಸಮಾಧಾನಪಡಿಸಿ ಭಾಷಣ ಮುಂದುವರೆಸಿದರು.

ಇಂಡುವಾಳು ಗ್ರಾಮದ ಅಂಬೇಡ್ಕರ್ ಭವನಕ್ಕೆ ನಾನೇ ಜಾಗ ಕೊಡಿಸಿದ್ದೆ. ನಿರ್ಮಾಣ ವಾಗಿರುವ ಭವನವನ್ನು ಉದ್ಘಾಟಿಸುತ್ತಿರುವುದು ಸಂತೋಷವಾಗುತ್ತಿದೆ ಎಂದರಲ್ಲದೇ, ರಾಜ್ಯದಲ್ಲಿ ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಾನತೆಯ ಕನಸನ್ನು ಸಾಕಾರಗೊಳಿಸಲು ಎಸ್‌ಸಿ/ ಎಸ್‌ಟಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ವಿಶೇಷ ಘಟಕ ಯೋಜನೆ ಮೂಲಕ ಅನುದಾನ ಮೀಸಲಿಟ್ಟಿದ್ದೆವು. ಕುತ್ತಿಗೆಯಲ್ಲೂ ಮೀಸಲಾತಿ ಕಲ್ಪಿಸಿದ್ದೆವು ಎಂಬುದು ಸೇರಿದಂತೆ ತಾವು ಮುಖ್ಯಮಂತ್ರಿ ಆಗಿದ್ದಾಗ ದಲಿತರಿಗಾಗಿ ಕೈಗೊಂಡಿದ್ದ ಯೋಜನೆಗಳ ಬಗ್ಗೆ ವಿವರಿಸಿದ್ದಲ್ಲದೇ ದಲಿತರು ಮಾತ್ರವಲ್ಲದೆ ಎಲ್ಲಾ ಶೂದ್ರ ಸಮುದಾಯಗಳು ಶಿಕ್ಷಣ ಪಡೆಯುವ ಮೂಲಕ ಅಭಿವೃದ್ಧಿ ಹೊಂದಬೇಕು ಎಂದು ತಿಳಿಸಿದರು.

ಸೇತುವೆ ಉದ್ಘಾಟನೆ: ಸಿದ್ದರಾಮಯ್ಯ ಇಂದು ವರುಣಾ ಕ್ಷೇತ್ರದ ವ್ಯಾಪ್ತಿಗೊಳಪಟ್ಟ ನಂಜನಗೂಡು ತಾಲೂಕಿನ ಮರಳೂರು ಗೊದ್ದನಪುರ ಗ್ರಾಮದಲ್ಲಿ ಕಪಿಲಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯನ್ನು ಉದ್ಘಾಟಿಸಿದರು. ಈ ಸೇತುವೆ ನಿರ್ಮಾಣಕ್ಕೆ ತಾವು ಮುಖ್ಯಮಂತ್ರಿ ಆಗಿದ್ದಾಗ ಮಂಜೂರಾತಿ ನೀಡಿ, ಭೂಮಿ ಪೂಜೆ ಮಾಡಿದ್ದನ್ನು ಹಾಗೂ ಹಣ ಬಿಡುಗಡೆ ಮಾಡಿದ್ದನ್ನು ಉಲ್ಲೇಖಿಸಿದರು. ಈ ಕಾರ್ಯಕ್ರಮವನ್ನು ಸಚಿವರನ್ನಿಟ್ಟುಕೊಂಡು ಮಾಡಬೇಕು ಎಂದ ಅವರು, ತಾವೇ ಸ್ವತಃ ದೂರವಾಣಿ ಕರೆ ಮಾಡಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರನ್ನು ಆಹ್ವಾನಿಸಿದ್ದಾಗಿಯೂ, ಅವರು ಕೂಡ ಬರುವುದಾಗಿ ತಿಳಿಸಿದ್ದರು. ಅದ್ಯಾಕೋ ಬರಲಿಲ್ಲ. ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್ ಅವರನ್ನು ಈ ಹಿಂದೆ ಈ ಕಾರ್ಯಕ್ರಮಕ್ಕೆ ದಿನಾಂಕ ನಿಗದಿಪಡಿಸಿದ್ದಾಗ ಕರೆದಿದ್ದೆ. ಆಗ ಕಾರ್ಯಕ್ರಮ ಮಾಡಲಿಲ್ಲ. ಈಗ ನನಗೆ ಹುಷಾರಿಲ್ಲದೇ ಇದ್ದುದ್ದರಿಂದ ಕರೆಯಲು ಮರೆತುಬಿಟ್ಟೆ ಎಂದು ತಿಳಿಸಿದರು. ನಂತರ ತಿ.ನರಸೀಪುರ ತಾಲೂಕು ಇಂಡುವಾಳು ಗ್ರಾಮದಲ್ಲಿ ಅಂಬೇಡ್ಕರ್ ಭವನ ಉದ್ಘಾಟಿಸಿ ನಂತರ ತಮ್ಮ ಸ್ವಗ್ರಾಮವಾದ ಸಿದ್ದರಾಮನಹುಂಡಿಯಲ್ಲಿ ಹಾಗೂ ಶೀಥಲೀಕರಣ ಕೇಂದ್ರವನ್ನು ಉದ್ಘಾಟಿಸಿದರು.

ಇಂದು ಸಿದ್ದರಾಮಯ್ಯ ಭಾಗವಹಿಸಿದ್ದ ಎಲ್ಲಾ ಕಾರ್ಯಕ್ರಮಗಳಲ್ಲೂ "ಮುಂದಿನ ಸಿಎಂ ಸಿದರಾಮಯ್ಯ" ಘೋಷಣೆ ಮೊಳಗಿತು. ವರುಣಾದಲ್ಲೇ ಸ್ಪರ್ಧಿಸಬೇಕು ಎಂಬ ಒತ್ತಾಯ ಕೇಳಿಬಂತು. ಅಲ್ಲದೇ, ಮೂರೂ ಕಾರ್ಯಕ್ರಗಳಲ್ಲಿ ಸಿದ್ದರಾಮಯ್ಯ ಭಾಗವಹಿಸಿದಾಗ ಅವರಿಗೆ ಬೃಹತ್ ಸೇಬಿನ ಹಾರವನ್ನು ಜೆಸಿಬಿ ಮೂಲಕ ಹಾಕಲಾಯಿತು. ಜೊತೆಗೆ ರೋಡ್ ಶೋ ನಡೆಸಿ ಪಟಾಕಿ ಸಿಡಿಸಿ ಕಾರ್ಯಕರ್ತರು ಸಂಭ್ರಮಿಸಿದರು. ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಕ್ಷೇತ್ರದ ಶಾಸಕರಾಗಿರುವ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ. ತಿಮ್ಮಯ್ಯ, ಮುಖಂಡರಾದ ಸುನಿಲ್ ಬೋಸ್, ಬಸವರಾಜು ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು. ಒಟ್ಟಾರೆ ಇಂದು ವರುಣಾ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಹವಾ ಎದ್ದು ಕಾಣುತ್ತಿತ್ತು.

ಕಸ ಸುರಿಯುವವರಿಗೆ 'ದಂಡ' ಪ್ರಯೋಗ

ಬೇರ್ಪಡಿಸದಿದ್ದಲ್ಲಿ ನಿವಾಸಿಗಳಿಗೆ ಮೊದಲನೇ ಬಾರಿ 200 ರೂ., ಪುನರಾವರ್ತನೆಗೆ 500 ರೂ., ವಾಣಿಜ್ಯ ಉದ್ದಿಮೆದಾರರಿಗೆ ಮೊದಲ ಬಾರಿ 500 ರೂ. ಹಾಗೂ ಪುನರಾವರ್ತನೆಗೆ 1,000 ರೂ. ದಂಡ ವಿಧಿಸಲಾಗುವುದು.

ಕಲುಷಿತ ನೀರನ್ನು ರಸ್ತೆಗಳಲ್ಲಿ ಹರಿಯಬಿಟ್ಟರೆ ಮೊದಲ ಬಾರಿ 500 ರೂ. ಹಾಗೂ ಪುನರಾವರ್ತನೆಗೆ 1,000 ರೂ., ಪ್ರಾಣಿ ತ್ಯಾಜ್ಯವನ್ನು ನಿಗದಿತ ಸ್ಥಳಗಳಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಮೊದಲ ಬಾರಿಗೆ 500 ರೂ., ಪುನರಾವರ್ತನೆಗೆ 1,000 ರೂ., ಕಟ್ಟಡ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಸುರಿದರೆ, ಚರಂಡಿಗಳಲ್ಲಿ ತ್ಯಾಜ್ಯ ಬಿಸಾಡಿದರೆ ಮೊದಲ ಬಾರಿ 500 ರೂ., ಪುನರಾವರ್ತನೆಗೆ 1,000 ರೂ. ದಂಡ ವಿಧಿಸಲಾಗುವುದು.

ತ್ಯಾಜ್ಯ ಸುಟ್ಟರೆ, ಪ್ಲಾಸ್ಟಿಕ್ ಮತ್ತು ಇ–ತ್ಯಾಜ್ಯಕ್ಕೆ ಬೆಂಕಿ ಹಾಕಿದರೆ ಮೊದಲ ಬಾರಿಗೆ 200 ರಿಂದ 1,000 ರೂ. ಹಾಗೂ ಪುನರಾವರ್ತನೆಗೆ 500 ರಿಂದ 5,000 ರೂ.ವರೆಗೆ, ಹಾಸ್ಟೆಲ್, ಹೋಟೆಲ್ ರೆಸ್ಟೋರೆಂಟ್, ವಿದ್ಯಾ ಸಂಸ್ಥೆ, ಕಲ್ಯಾಣ ಮಂಟಪ, ಮಾಲ್‌ಗಳು, ವಾಣಿಜ್ಯ ಕಟ್ಟಡ, ಸರ್ಕಾರಿ ಕಚೇರಿ, ವಸ್ತುಪ್ರದರ್ಶನ, ಕಾರ್ಯಕ್ರಮ ನಡೆಸುವವರು ಸರಿಯಾಗಿ ತ್ಯಾಜ್ಯ ನಿರ್ವಹಿಸದಿದ್ದರೆ ಮೊದಲ ಬಾರಿ 20,000 ರೂ. ಹಾಗೂ ಪುನರಾವರ್ತನೆಯಾದರೆ 50,000 ರೂ. ದಂಡ ತೆರಬೇಕಾಗುತ್ತದೆ. ಪ್ಲಾಸ್ಟಿಕ್ ಬಳಸುವ ಸಾರ್ವಜನಿಕರು, ಬೀದಿ ಬದಿ ವ್ಯಾಪಾರಿಗಳು, ವರ್ತಕರು, ಮಾರಾಟ ಮತ್ತು ವಿತರಣೆ ಮಾಡುವವರು, ದಾಸ್ತಾನು, ಸಾಗಣೆ, ತಯಾರಕರಿಗೆ ಮೊದಲ ಬಾರಿಗೆ 200 ರಿಂದ 1,00,000 ರೂ., ಪುನರಾವರ್ತನೆಗೆ 500 ರಿಂದ 2,00,000 ರೂ. ದಂಡ ವಿಧಿಸಲಾಗುವುದು ಎಂದಿರುವ ಮೇಯರ್ ಶಿವಕುಮಾರ್, ಪಾಲಿಕೆ ವ್ಯಾಪ್ತಿಯಲ್ಲಿ ಅನುಮತಿ ಪಡೆಯದೆ ಎಲ್ಲೆಂದರಲ್ಲಿ ಜಾಹೀರಾತು ಫಲಕ ಅಳವಡಿಸುವವರಿಗೆ ಕರ್ನಾಟಕ ಓಪನ್ ಪ್ಲೇಸಸ್ ಪ್ರಿವೆನ್ಷನ್ ಆ್ಯಕ್ಟ್ 1981ರಂತೆ 10,000 ರೂ. ದಂಡ ವಿಧಿಸಲು ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ನುಡಿದರು. ಸಾರ್ವಜನಿಕ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಕಸ ತಂದು ಸುರಿಯುವವರನ್ನು ಕ್ಯಾಮರಾ ಫುಟೇಜ್‌ಗಳಿಂದ ಪತ್ತೆ ಮಾಡಿ ದಂಡ ವಸೂಲಿ ಮಾಡಲು ಕ್ರಮ ವಹಿಸಲಾಗುತ್ತದೆ ಎಂದ ಅವರು, ಸ್ವಚ್ಛ ಭಾರತ ಯೋಜನೆಯಡಿ ಸರ್ವೇಕ್ಷಣೆಯಲ್ಲಿ ಮೈಸೂರು ಪ್ರಥಮ ಸ್ವಚ್ಛ ನಗರಿ ಪುರಸ್ಕಾರ ಪಡೆಯಲು ಸಾರ್ವಜನಿಕರು ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

ಇಂದು ವರಿಷ್ಠರಿಂದ ರಾಜ್ಯ ಮುಖಂಡರೊಂದಿಗೆ ಚರ್ಚೆ

ತಿಂಗಳಲ್ಲಿ ಚುನಾವಣೆ ಜರುಗಲಿದ್ದು, ಐದು ತಿಂಗಳ ಮುನ್ನವೇ ಪಕ್ಷವನ್ನು ಸಂಘಟಿಸುವ ಮತ್ತು ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಕಾರ್ಯಕ್ಕೆ ವರಿಷ್ಠರು ಮುಂದಾಗಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳ ಆಯ್ಕೆಯು ವರಿಷ್ಠರದ್ದೇ ಅಂತಿಮ. ಪ್ರತಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ನಾಯಕರು ಮತ್ತು ಸಂಘ ಪರಿವಾರದ ಮುಖಂಡರೊಟ್ಟಿಗೆ ಸಮಾಲೋಚನೆ ನಡೆಸಿದರೂ, ಅಂತಿಮವಾಗಿ ಸಮೀಕ್ಷಾ ವರದಿಯನ್ನಿಟ್ಟುಕೊಂಡೇ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ನಾಳಿನ ಸಭೆಯಲ್ಲಿ ಕಾಂಗ್ರೆಸ್–ಜೆಡಿಎಸ್ ಅನ್ನು ಕರ್ನಾಟಕದಲ್ಲಿ ಕಟ್ಟಿ ಹಾಕಿ ಪಕ್ಷವನ್ನು ಮುನ್ನಡೆಸುವ ಬಗ್ಗೆ ಚರ್ಚೆ ನಡೆಯಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಬಿಜೆಪಿ ತೊರೆಯಲು ಜನಾರ್ದನ ರೆಡ್ಡಿ ಗ್ಯಾಂಗ್ ನಿರ್ಧಾರ

- ಪಕ್ಷದ ಟಿಕೆಟ್ ದೊರೆಯುವ ಅನುಮಾನದ ಹಿನ್ನೆಲೆಯಲ್ಲಿ ಈ ನಿಲುವು
- ವೇದಿಕೆಯೊಂದರಡಿ ಬೆಂಬಲಿಗರೊಂದಿಗೆ ಕಣಕ್ಕಿಳಿಯಲು ತೀರ್ಮಾನ

ಬೆಂಗಳೂರು, ಡಿ.9–ಗಣಿ ಧಣಿ ಮಾಜಿ ಸಚಿವ ಜನಾರ್ದನರೆಡ್ಡಿ ಅವರ ಬೆಂಬಲಿಗರು ಬಿಜೆಪಿ ತೊರೆಯಲು ಮುಂದಾಗಿದ್ದಾರೆ. ಪಕ್ಷದಲ್ಲಿ ತಮ್ಮನ್ನು ಕಡೆಗಣಿಸಲಾಗುತ್ತಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮಗೆ ಟಿಕೆಟ್ ನೀಡುವ ಭರವಸೆ ಇಲ್ಲದ ಕಾರಣಗಳಿಂದ ಇಂತಹ ನಿರ್ಧಾರಕ್ಕೆ ಬಂದಿದ್ದಾರೆ.

ಪಕ್ಷ ತೊರೆದರು ಹೊಸ ಪಕ್ಷ ಕಟ್ಟುವ ಉದ್ದೇಶ ಅವರಿಗಿಲ್ಲ. ಆದರೆ, ಒಂದು ವೇದಿಕೆಯಡಿ ತಮ್ಮ ಬೆಂಬಲಿಗರೊಂದಿಗೆ ಕಣಕ್ಕಿಳಿಯಲು ತೀರ್ಮಾನಿಸಿದ್ದಾರೆ. ಜನಾರ್ದನ ರೆಡ್ಡಿ ಅವರ ಈ ತೀರ್ಮಾನಕ್ಕೆ ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪರೋಕ್ಷವಾಗಿ ಬೆಂಬಲ ನೀಡಿದಂತಿದೆ. ಸಚಿವ ಶ್ರೀರಾಮುಲು ಜತೆಗೂಡಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದಾಗ ಪಕ್ಷದಲ್ಲಿ ತಮಗೆ ಸ್ಥಾನಮಾನ ಕೊಡಿಸುವಂತೆ ಅವರನ್ನು ಕೇಳಿದ್ದರು. ತಮ್ಮ ಪುತ್ರನಿಗೇ ಸರ್ಕಾರ ಮತ್ತು ಪಕ್ಷದಲ್ಲಿ ಒಂದು ಸ್ಥಾನ ಕೊಡಿಸಲು ಸಾಧ್ಯವಾಗಲಿಲ್ಲ. ನನಗೆ ಈ ಮೊದಲಿದ್ದ ಅಧಿಕಾರವಾಗಲೀ, ನನ್ನ ಮಾತಿಗೆ ವರಿಷ್ಠರಿಂದಲೂ ಸ್ಪಂದನೆ ಇಲ್ಲ. ನಿಮ್ಮ ಮುಂದಿನ ರಾಜಕೀಯ ಭವಿಷ್ಯ ನೀವು ನೋಡಿಕೊಳ್ಳಿ. ನಾನು ಈ ವಿಚಾರದಲ್ಲಿ ನಿಸ್ಸಹಾಯಕ ಎಂದು ಬೆನ್ನುತಟ್ಟಿ ಕಳುಹಿಸಿದ್ದಾರೆ.

ಯಡಿಯೂರಪ್ಪ ಭೇಟಿಯ ನಂತರ ತಮ್ಮ ಬೆಂಬಲಿಗರ ಸಭೆ ನಡೆಸಿದ ರೆಡ್ಡಿ, ಪಕ್ಷದಲ್ಲಿ ಟಿಕೆಟ್ ನೀಡುವ ಯಾವುದೇ ಕುರುಹುಗಳು ದೊರೆತಿಲ್ಲ. ಚುನಾವಣೆಯಲ್ಲಿ ನಮ್ಮ ಶಕ್ತಿ ತೋರಿಸೋಣ ಎಂದಿದ್ದಾರೆ. ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಬಳ್ಳಾರಿಯ ಯಾವುದೇ ಭಾಗದಲ್ಲಿ ವಾಸ್ತವ್ಯ ಹೂಡುವಂತಿಲ್ಲ. ಹೀಗಾಗಿ ಅವರು ನೆರೆಯ ಕೊಪ್ಪಳದ ಗಂಗಾವತಿ ವಿಧಾನಸಭಾ ಕ್ಷೇತ್ರವನ್ನು ಕಾರ್ಯಕ್ಷೇತ್ರವಾಗಿ ಮಾಡಿಕೊಂಡಿದ್ದಾರೆ. ಸದ್ಯಕ್ಕೆ, ಅಲ್ಲೇ ನೆಲೆಸಿರುವ ಅವರು, ಅದೇ ಕ್ಷೇತ್ರದಲ್ಲಿ ಕಣಕ್ಕಿಳಿಯಲು ತೀರ್ಮಾನಿಸಿ, ಸಂಘಟನೆಗೆ ಮುಂದಾಗಿದ್ದಾರೆ. ಗಂಗಾವತಿ ಕ್ಷೇತ್ರ ಯಾವುದೇ ಒಂದು ಜಾತಿಯ ಮತಗಳಿಗೆ ಸೀಮಿತವಾಗಿಲ್ಲ. ರಾಜಕೀಯ ಲಾಭಕ್ಕಾಗಿ ಈ ಕ್ಷೇತ್ರದಿಂದ ರೆಡ್ಡಿ ಮುಂದಾಗಿದ್ದಾರೆ. ಬಿಜೆಪಿ ಟಿಕೆಟ್ ನೀಡದಿದ್ದರೆ, ಒಂದೇ ವೇದಿಕೆಯಲ್ಲಿ ಕಣಕ್ಕಿಳಿಯಲು ರೆಡ್ಡಿ ಸೇರಿದಂತೆ ಸುಮಾರು 26 ಮಂದಿ ತೀರ್ಮಾನ ಮಾಡಿದ್ದಾರೆ. ಜನಾರ್ದನರೆಡ್ಡಿ ಅವರ ಈ ನಿಲುವಿಗೆ ಸಚಿವ ಶ್ರೀರಾಮುಲು ಮುಂದೆ ಯಾವ ರಾಜಕೀಯ ನಿರ್ಧಾರ ಕೈಗೊಳ್ಳುತ್ತಾರೋ ಕಾದು ನೋಡಬೇಕು. ಆದರೆ, ಶ್ರೀರಾಮುಲು ಸುದ್ದಿಗಾರರೊಂದಿಗೆ ಮಾತನಾಡಿ, ಜನಾರ್ದನರೆಡ್ಡಿ ಹೊಸ ಪಕ್ಷ ಸ್ಥಾಪಿಸಲಾರರು ಎಂದು ಹೇಳಿದ್ದಾರೆ. ಒಂದು ವೇಳೆ ಪಕ್ಷದಿಂದ ಹೊರ ಉಳಿದರೆ, ವೈಯಕ್ತಿಕ ಸ್ನೇಹ ಮುಂದುವರೆಯುತ್ತದೆ. ಆದರೆ, ರಾಜಕೀಯ ಬೇರೆಯಾಗಿರುತ್ತದೆ ಎಂದಿದ್ದಾರೆ.

ಯು.ಟಿ.ಖಾದರ್ ಕಾರು ಬ್ರೇಕ್ ಫೇಲ್

ಚಾಲಕನ ಸಮಯಪ್ರಜ್ಞೆಯಿಂದ ತಪ್ಪಿದ ಅನಾಹುತ..!



ಮಂಗಳೂರು(ಡಿ.9)–ವಿಪಕ್ಷ ಉಪ ನಾಯಕ ಯು.ಟಿ.ಖಾದರ್ ಪ್ರಯಾಣಿಸುತ್ತಿದ್ದ ಕಾರು ಬ್ರೇಕ್ ಫೇಲ್ ಆದ ಘಟನೆ ಮಂಗಳೂರು ಹೊರವಲಯದ ಪಡೀಲ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂದು(ಶುಕ್ರವಾರ) ನಡೆದಿದ್ದು, ಬ್ರೇಕ್ ಫೇಲ್ ಆದರೂ ಚಾಲಕನ ಸಮಯಪ್ರಜ್ಞೆಯಿಂದ ಭಾರೀ ಅನಾಹುತವೊಂದು ತಪ್ಪಿದೆ.

ಮಂಗಳೂರಿನಿಂದ ಬಿ.ಸಿ.ರೋಡ್ ಕಡೆಗೆ ಯು.ಟಿ.ಖಾದರ್ ತಮ್ಮ ಫಾರ್ಚೂನರ್ ಕಾರಿನಲ್ಲಿ ಸಂಚರಿಸುತ್ತಿದ್ದರು. ಈ ವೇಳೆ ಪಡೀಲ್ ಬಳಿ ಬ್ರೇಕ್ ಫ್ಲೂಡ್ ಸೋರಿಕೆಯಾಗಿ ಏಕಾಏಕಿ ಫಾರ್ಚೂನರ್ ಕಾರು ಬ್ರೇಕ್ ಫೇಲ್ ಆಗಿದೆ ಎನ್ನಲಾಗಿದೆ. ಆದರೆ ಬ್ರೇಕ್ ಫೇಲ್ ಆದರೂ ಚಾಲಕನ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದೆ.

ಕಾರು ಚಲಾಯಿಸುತ್ತಿದ್ದ ಲಿಬ್ಜಿತ್ ತಕ್ಷಣ ಹ್ಯಾಂಡ್ ಬ್ರೇಕ್ ಮತ್ತು ಗೇರ್ ಬ್ಯಾಲೆನ್ಸ್ ಮೂಲಕ ಕಾರು ನಿಲ್ಲಿಸಿದ್ದಾರೆ. ಬಳಿಕ ಬೇರೆ ಕಾರಿನ ಮೂಲಕ ಖಾದರ್ ಬಿ.ಸಿ.ರೋಡ್‌ಗೆ ತೆರಳಿದ್ದಾರೆ. ಕೆಲ ದಿನಗಳ ಹಿಂದಷ್ಟೇ ಕಾರು ಸರ್ವೀಸ್ ಮಾಡಿಸಿದ್ದು, ಸದ್ಯ ಏಕಾಏಕಿ ಈ ಸಮಸ್ಯೆ ಕಾಣಿಸಿಕೊಂಡಿರುವುದರ ಬಗ್ಗೆ ಕಂಪೆನಿಗೆ ದೂರು ನೀಡಲು ನಿರ್ಧರಿಸಿದ್ದಾರೆ. ಖಾದರ್ ಪೊಲೀಸ್ ಎಸ್ಕಾರ್ಟ್ ಜೊತೆ ಸಾಗುತ್ತಿದ್ದು, ಅಕ್ಕಪಕ್ಕವೂ ಬೇರೆ ಯಾವುದೇ ವಾಹನ ಸಂಚಾರ ಇರದ ಕಾರಣ ಚಾಲಕ ಕಾರನ್ನು ನಿಯಂತ್ರಣಕ್ಕೆ ತಂದಿದ್ದಾರೆ.

ಕುಂಬಾರಕೊಪ್ಪಲಲ್ಲಿ ಡಿ.ಮಾದೇಗೌಡರಿಗೆ ಅಭಿನಂದನೆ



ಮೈಸೂರು, ಡಿ.9–ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅವರನ್ನು ಮೈಸೂರಿನ ಕುಂಬಾರಕೊಪ್ಪಲು ಮಹದೇಶ್ವರ ಸಭಾ ಭವನದಲ್ಲಿ ಅದ್ದೂರಿಯಾಗಿ ಅಭಿನಂದಿಸಲಾಯಿತು.

ಕುಂಬಾರಕೊಪ್ಪಲು ಹಳೇ ವಿದ್ಯಾರ್ಥಿಗಳ ಸಂಘ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು, ಎಸ್‌ಡಿಎಂಸಿ ಸದಸ್ಯರು, ಪುಟ್ಟಸ್ವಾಮಿ ಪ್ರೌಢಶಾಲೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು, ಕುಂಬಾರಕೊಪ್ಪಲು ಸರ್ಕಾರಿ ಪ್ರೌಢಶಾಲೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಮತ್ತು ಕುಂಬಾರಕೊಪ್ಪಲು ನಿವಾಸಿಗಳು ಈ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿತ್ತು. ಕಾರ್ಯಕ್ರಮದಲ್ಲಿ ಸಾಹಿತಿ ಸಿ.ಪಿ.ಕೃಷ್ಣ ಕುಮಾರ್(ಸಿಪಿಕೆ), ವಕೀಲ ಸಿ.ವಿ.ಕೇಶವಮೂರ್ತಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಕೆ.ಪಿ.ಲಿಂಗರಾಜು, ನಿವೃತ್ತ ಮುಖ್ಯ ಶಿಕ್ಷಕ ನಾಗಣ್ಣ, ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ನವೀನ್, ಕಾರ್ಯದರ್ಶಿ ಸತೀಶ್, ಖಜಾಂಚಿ ಯೋಗಾನಂದ, ಮುಖ್ಯ ಶಿಕ್ಷಕ ಲೋಹಿತೇಶ್, ಶಿಕ್ಷಕ ಪುಟ್ಟಸ್ವಾಮಿ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ಪ್ರಕಾಶ್ ಹಾಗೂ ಕುಂಬಾರಕೊಪ್ಪಲು ನಿವಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಕಲಿ ಮಾರ್ಕ್ಸ್‌ಕಾರ್ಡ್ ನೀಡಿ ನಾಲ್ವರು ಉದ್ಯೋಗ ಪಡೆದ ಶಿಕ್ಷಕರ ವಿರುದ್ಧ 28 ವರ್ಷದ ನಂತರ ಕೇಸ್

ಮೈಸೂರು, ಡಿ.9–ನಕಲಿ ಮಾರ್ಕ್ಸ್ ಕಾರ್ಡ್ ನೀಡಿ ಹುದ್ದೆ ಗಿಟ್ಟಿಸಿಕೊಂಡಿದ್ದ ನಾಲ್ವರು ಶಿಕ್ಷಕರ ವಿರುದ್ಧ 28 ವರ್ಷದ ನಂತರ ಪ್ರಕರಣ ದಾಖಲಾಗಿದೆ. ಹಾಸನದ ಕ್ಯಾತ್ರಿ ಕ್ರಾಸ್ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಶಿವಪ್ಪ(56) ಹಾಸನ ಜಿಲ್ಲೆ ಗವೇನಹಳ್ಳಿ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಯೋಗಣ್ಣ(58), ಹಾಸನ ಆರ್‌ಸಿ ರಸ್ತೆಯಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜಿನ ಶಿಕ್ಷಕಿ ಮೋಹಿನಿ(56) ಮತ್ತು ಬಿ.ಕಾವೇರಿ (55) ಆರೋಪಕ್ಕೆ ಗುರಿಯಾಗಿರುವವರು. ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇದ್ದ ಸಹಶಿಕ್ಷಕರ ಹುದ್ದೆಗೆ 1994ರ ಫೆ.5ರಂದು ನೇಮಕಾತಿ ಪ್ರಕ್ರಿಯೆ ನಡೆದಿದ್ದು, ಆ ಸಂದರ್ಭದಲ್ಲಿ ಈ ನಾಲ್ವರೂ ಶಿಕ್ಷಕರು ಸಲ್ಲಿಸಿದ್ದ ಶೈಕ್ಷಣಿಕ ದಾಖಲೆಗಳನ್ನು ಆಧರಿಸಿ ಅವರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಆದರೆ ಈ ಆರೋಪಿಗಳು ಪದವಿಯಲ್ಲಿ ಪಡೆದಿದ್ದ ನೈಜ ಅಂಕಗಳಿಗಿಂತ ಹೆಚ್ಚು ಅಂಕಗಳನ್ನು ನಮೂದಿಸಿ ಆಯ್ಕೆಯಾಗಿರುವುದು ಕಂಡು ಬಂದಿದೆ. ಹೀಗಾಗಿ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೆಎಸ್‌ಇಇಬಿಡಿ ಡಿವಿಷನಲ್ ಸೆಕ್ರೆಟರಿ ಭಾರತಿಯವರು ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ದತ್ತ ಜಯಂತಿ ಕೊನೆಯ ದಿನವಾದ ಶುಕ್ರವಾರ ಆಶ್ರಮದ ಸಪ್ತಋಷಿ ಸರೋವರದಲ್ಲಿ ದತ್ತ ಸ್ವಾಮಿಗೆ ತೆಪ್ಪೋತ್ಸವ ನೆರವೇರಿತು.

ಇಂದು ಮೈಸೂರಲ್ಲಿ ರಾಷ್ಟ್ರೀಯ ಓಡಿಸ್ಸಿ ಉತ್ಸವ

ಮೈಸೂರು,ಡಿ.9–ನಗರದ ರುದ್ರ ನೃತ್ಯಯೋಗ ಶಾಲಾ ವತಿಯಿಂದ, ಓಡಿಸ್ಸಿ ಇಂಟರ್‌ನ್ಯಾಷನಲ್ ಫೋರಂ, ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್ಫೇರ್ ಟ್ರಸ್ಟ್‌ಗಳ ಸಹಭಾಗಿತ್ವದಲ್ಲಿ ಇದೇ ಮೊದಲ ಬಾರಿಗೆ ರಾಷ್ಟ್ರೀಯ ಓಡಿಸ್ಸಿ ಉತ್ಸವವನ್ನು ಆಯೋಜಿಸಲಾಗಿದೆ. ರಮಾಗೋವಿಂದ ರಂಗಮಂದಿರದಲ್ಲಿ ಡಿ.10ರಂದು ಸಂಜೆ 5.30ರಿಂದ ನಡೆಯುವ ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಯಿಂದ ಹೆಸರಾಂತ ಓಡಿಸ್ಸಿ ನೃತ್ಯ ಕಲಾವಿದರು ಪ್ರದರ್ಶನ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಅಂತರರಾಷ್ಟ್ರೀಯ ಓಡಿಸ್ಸಿ ನೃತ್ಯ ಮಹೋತ್ಸವದ ಸಂಸ್ಥಾಪಕ ಶಾಮ್ ಹರಿ ಚಕ್ರ, ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್ಫೇರ್ ಟ್ರಸ್ಟ್‌ನ ಅಧ್ಯಕ್ಷ ಘನಶ್ಯಾಮ ಪ್ರಧಾನ್, ಮೈಸೂರಿನ ಭೂಷಣ್ ಅಕಾಡೆಮಿ ಆಫ್ ಆರ್ಟ್ಸ್‌ನ ಬದರಿ ದಿವ್ಯ ಭೂಷಣ್, ಶ್ರೀ ಕೃಷ್ಣ ಗಾನ ಸಭಾದ ಅಧ್ಯಕ್ಷರಾದ ಶ್ರೀಧರರಾಜ ಅರಸ್, ನೃತ್ಯಗಿರಿ ಸ್ಕೂಲ್ ಆಫ್ ಡಾನ್ಸ್ ಅಂಡ್ ರಿಸರ್ಚ್ ಸೆಂಟರ್‌ನ ಕೃಪಾ ಫಡ್ಕೆ ಪಾಲ್ಗೊಳ್ಳಲಿದ್ದಾರೆ.

ಓಡಿಸ್ಸಿ ನೃತ್ಯ ಉತ್ಸವದಲ್ಲಿ ಬೆಂಗಳೂರಿನ ಚೈತ್ರಾಗೌಡ, ಸೋಹಿನಿ ಬೋಸ್ ಬ್ಯಾನರ್ಜಿ, ಅನುಶ್ರೀ ಪದ್ಮನಾಭ, ಬೀದರ್‌ನ ಜ್ಯೋತಿ ಸಮಂಥರಿ ಗೋಶಾಲ್, ಸುದರ್ಶನ ಸಾಹೋ, ಮೈಸೂರಿನ ರುದ್ರ ನೃತ್ಯಯೋಗ ಶಾಲೆಯ ನೃತ್ಯಗುರು ಸಿಂಧು ಕಿರಣ್, ವಿದ್ಯಾರ್ಥಿಗಳಾದ ಸಾಮ ವೇದ್ ಮೂಲ, ಪೃಥೆ ಹವಾಲ್ದಾರ್, ಸತ್ಯಶ್ರೀ ಬೆಹ್ರಾ, ಸಂಜಲಿ ಸೆಂಟರ್ ಫಾರ್ ಓಡಿಸ್ಸಿ ಡ್ಯಾನ್ಸರ್‌ನ ಶರ್ಮಿಳಾ ಮುಖರ್ಜಿ, ಸುರ್ಜಿತ್ ಸೋಮ್, ಶ್ರೀಜಿತ್ ಸನ್ಯಾಲ್, ಬಿ.ಟಿ.ರವಿಶಂಕರ್, ಶ್ವೇತಾ ಶ್ರೀಧರನ್, ನಂದಿತಾ ಭಟ್ಟಾಚಾರ್ಯ, ಶ್ರೇಯಾಂಶಿ ದಾಸ್, ಜಾಹ್ನವಿ, ಪ್ರೀತಿ ಬ್ಯಾನರ್ಜಿ, ಬೆಂಗಳೂರಿನ ಆದ್ಯಶಾ ಸ್ಕೂಲ್ ಆಫ್ ಓಡಿಸ್ಸಿ ಡಾನ್ಸ್‌ನ ಸರಿತಾ ಮಿಶ್ರ, ಅನಹಿತಾ, ಸಹನಾ, ಸಾಯ್ ಸೃಷ್ಟಿ, ಮಾನಸಿ, ಈಶ ಮೊದಲಾದವರು ನೃತ್ಯ ಪ್ರದರ್ಶನ ನೀಡಲಿದ್ದಾರೆ. ಉಚಿತ ಪ್ರವೇಶವಿರುವ ಕಾರ್ಯಕ್ರಮದಲ್ಲಿ ನೃತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಉತ್ಸವದ ಸಂಚಾಲಕಿ, ನೃತ್ಯಗುರು ಸಿಂಧು ಕಿರಣ್ ಕೋರಿದ್ದಾರೆ.


ಪ್ರಧಾನಿ ಮೋದಿಜಿ ಸ್ಮರಣಿಕೆ...



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸಾರ್ವಜನಿಕ ಸಮಾರಂಭದಲ್ಲಿ ತೊಡಿಸಲಾಗಿದ್ದ ಪಗ್ರಿ(ಪೇಟ)ಯನ್ನು ಮೈಸೂರಿನ ನರೇಂದ್ರ ಮೋದಿ ಅವರ ಅಭಿಮಾನಿ, ಅಂಕಣಕಾರ ನಂ.ಶ್ರೀಕಂಠಕುಮಾರ್ ಅವರು ಕೇಂದ್ರ ಸರ್ಕಾರ ನಡೆಸಿದ ಸ್ಮರಣಿಕೆಗಳ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ, ಗಿಟ್ಟಿಸಿಕೊಂಡಿದ್ದಾರೆ. ಸ್ಮರಣಿಕೆಗಳ ಹರಾಜು ಪ್ರಕ್ರಿಯೆಯಲ್ಲಿ ಸಂಗ್ರಹಿಸಿದ ಹಣವನ್ನು ನಮಾಮಿ ಗಂಗಾ ಯೋಜನೆಗೆ ವಿನಿಯೋಗಿಸಲಾಗುವುದು ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಎ.ಹೆಚ್.ವಿಶ್ವನಾಥ್ ಮುಡಾ ನಾಮ ನಿರ್ದೇಶಿತ ಸದಸ್ಯ

ಮೈಸೂರು, ಡಿ.9(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ



ನಾಮ ನಿರ್ದೇಶಿತ ಸದಸ್ಯರನ್ನಾಗಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್‌ರನ್ನು ನೇಮಿಸಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಸತೀಶ್ ಕಬಾಡಿ ಅವರು ಡಿಸೆಂಬರ್ 8ರಂದು ಆದೇಶಿಸಿದ್ದಾರೆ. ಬಿಜೆಪಿಯಲ್ಲಿರುವ ವಿಶ್ವನಾಥ್ ಅವರು ಸರ್ಕಾರದ ಧೋರಣೆಗಳನ್ನು ಖಂಡಿಸುತ್ತಿದ್ದು, ಇದೀಗ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡುತ್ತಿದ್ದರೂ, ಅದೇ ಬಿಜೆಪಿ ಸರ್ಕಾರ ಇವರನ್ನು ಮುಡಾ ಸದಸ್ಯರನ್ನಾಗಿ ನೇಮಿಸಿರುವುದು ಅಚ್ಚರಿ ಮೂಡಿಸಿದೆ.

ಮಾಂಡೌಸ್ ಚಂಡಮಾರುತ: ಡಿ.13ರವರೆಗೆ ರಾಜ್ಯದ ವಿವಿಧೆಡೆ ಮಳೆ

ಬೆಂಗಳೂರು: ನೈಋತ್ಯ ಬಂಗಾಳ ಕೊಲ್ಲಿಯಲ್ಲಿ 'ಮಾಂಡೌಸ್' ಚಂಡಮಾರುತದಿಂದ ಉತ್ತರ ಕರಾವಳಿ ತಮಿಳುನಾಡು, ಪುದುಚೇರಿಯಲ್ಲಿ ಹಗುರದಿಂದ ಕೂಡಿದ ಸಾಧಾರಣ ಮಳೆಯಾಗಲಿದ್ದು, ಪಕ್ಕದ ದಕ್ಷಿಣ ಕರಾವಳಿ ಆಂಧ್ರಪ್ರದೇಶ ಮತ್ತು ಉತ್ತರ ಒಳನಾಡಿನ ತಮಿಳುನಾಡು ಮತ್ತು ರಾಯಲಸೀಮಾದಲ್ಲಿ ಅತಿ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ.



ಭಾರತೀಯ ಹವಾಮಾನ ಇಲಾಖೆ ಪ್ರಕಾರ ಬೆಂಗಳೂರಿನಲ್ಲಿ ಇಂದಿನಿಂದ ಡಿ.13ರವರೆಗೆ ಹಗುರದಿಂದ ಕೂಡಿದ ಸಾಧಾರಣ ಮಳೆಯಾಗಲಿದೆ. ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಕೊಡಗು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಡಿ.13ರವರೆಗೆ ಹಳದಿ ಅಲರ್ಟ್ ಘೋಷಿಸಿದೆ. ಕಳೆದ 6 ಗಂಟೆಗಳಲ್ಲಿ 11 ಕಿಮೀ ವೇಗದಲ್ಲಿ ಪಶ್ಚಿಮ ವಾಯುವ್ಯಕ್ಕೆ ಚಲಿಸಿ ನೈಋತ್ಯ ಬಂಗಾಳಕೊಲ್ಲಿಯ ಮೇಲೆ ತೀವ್ರಾಯಿತು. ಉತ್ತರ ತಮಿಳುನಾಡು, ಪುದುಚೇರಿ ಮತ್ತು ಪಕ್ಕದ ದಕ್ಷಿಣ ಆಂಧ್ರಪ್ರದೇಶದ ಪುದುಚೇರಿ, ಶ್ರೀಹರಿಕೋಟಾ ನಡುವೆ ಇಂದು 85 ಕಿಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಬಹುರೂಪಿಯಲ್ಲಿ ವಿಕಲಚೇತನರಿಗೆ ಉಚಿತ, ಹಿರಿಯರಿಗೆ ರಿಯಾಯ್ತಿ

ಮೈಸೂರು, ಡಿ.9(ಎಸ್‌ಪಿಎನ್)– ಈ ಬಾರಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ



ಕರಕುಶಲ ವಸ್ತುಪ್ರದರ್ಶನ ಆವರಣದಲ್ಲಿರುವ ಆರಾಧ್ಯ ಆಗ್ರೋ ಫುಡ್ ಅಂಡ್ ಬೆವರೆಜೆಸ್ ಮಳಿಗೆಯಲ್ಲಿ ವಿಕಲಚೇತನರಿಗೆ ಉಚಿತ ಬೆಲ್ಲ ಮತ್ತು ಸೈಂಧವ ಲವಣ ಹಾಗೂ ಬೆಟ್ಟ ನೆಲ್ಲಿಕಾಯಿಯಿಂದ ತಯಾರಿಸಿದ ಪಾನೀಯವನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ಅಲ್ಲದೆ, ವಾಂಗಿ ಬಾತ್, ಶೇಂಗಾ ಚಟ್ನಿಪುಡಿ, ಕರಿಬೇವು ಸೊಪ್ಪಿನ ಪುಡಿ, ಬಿಸಿ ಬೆಳೆಬಾತ್ ಪುಡಿಗೆ ಕೆಜಿ ಶೇ.10 ರಿಯಾಯ್ತಿಯನ್ನು ನೀಡಲಾಗುತ್ತಿದೆ. ಅಲ್ಲದೆ, ಬೆಟ್ಟದ ನಲ್ಲಿಕಾಯಿ, ಅಲುವೀರಾ, ಸೊಗದ ಬೇರು, ನೊನಿ ಗೋಲ್ಡ್, ಬ್ರಾಮಿ, ಅಶ್ವಗಂಧ ಸೇರಿದಂತೆ 14 ಬಗೆಯ ಜ್ಯೂಸ್ ಪ್ಯಾಕೆಟ್ ಖರೀದಿಸುವ ಗ್ರಾಹಕರಿಗೆ ನಿಗಧಿತ ಬೆಲೆಯಲ್ಲಿ ಶೇ.10 ರಷ್ಟು ರಿಯಾಯತಿ ನೀಡುವುದಾಗಿ ಮಳಿಗೆ ಮಾಲೀಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾವು 2014ರಿಂದಲೂ ಮೈಸೂರು ತ್ಯಾಗರಾಜ ರಸ್ತೆಯಲ್ಲಿರುವ ಅಂಗಡಿಯಲ್ಲಿ ಈ ವ್ಯಾಪಾರ ಮಾಡುತ್ತಿದ್ದೇವೆ. ನಿಗಧಿತ ಬೆಲೆಗಿಂತ ಎಂದೂ ಕಡಿಮೆ ಬೆಲೆಗೆ ಮಾರಾಟ ಮಾಡಿಲ್ಲ. ಏಕೆಂದರೆ, ನಮ್ಮಲ್ಲಿ ಸಿಗುವ ಪದಾರ್ಥಗಳಿಗೆ ಗ್ರಾಹಕರಿಂದ ಸಾಕಷ್ಟು ಬೇಡಿಕೆಯಿದೆ. ರಂಗಾಯಣದಲ್ಲಿ ರಾಷ್ಟ್ರೀಯ ಬಹುರೂಪಿ ರಂಗೋತ್ಸವಕ್ಕೆ ಬೇರೆ ಬೇರೆ ಊರುಗಳಿಗೆ ರಂಗಾಸ್ತಕರು ಬರುತ್ತಾರೆ. ಹಾಗಾಗಿ ಹಿರಿಯರು ಮತ್ತು ವಿಕಲಚೇತನರಿಗೆ ಮಾತ್ರ ಈ ರಿಯಾಯಿತಿ ನೀಡಲು ನಿರ್ಧರಿಸಿದ್ದೇವೆ ಎಂದರು.

ಮೈಸೂರು ಶಕ್ತಿಧಾಮದ ವಿಧ್ಯಾರ್ಥಿನಿಯರು, ಶಿಕ್ಷಕಿಯರೊಂದಿಗೆ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಕರಕುಶಲ ಮೇಳ, ಲಲಿತಾ ಕಲಾ ಮೇಳ, ಆಹಾರ ಮೇಳ ಸೇರಿದಂತೆ ರಂಗಾಯಣ ಆವರಣದಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿ, ಬಹುರೂಪಿ ರಂಗೋತ್ಸವ ಸಂಭ್ರಮದಲ್ಲಿ ಭಾಗಿಯಾಗಿದ್ದರು.

ಬಹುರೂಪಿ ರಂಗೋತ್ಸವದ ಕರಕುಶಲ ಮೇಳದ ಅಯೋಧ್ಯಾ ಪಬ್ಲಿಕೇಶನ್ ಮಳಿಗೆಗೆ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಭೇಟಿ ನೀಡಿದ್ದಾಗ 'ಟಿಪ್ಪು ನಿಜ ಕನಸುಗಳು' ಪುಸ್ತಕ ಕೊಳ್ಳುತ್ತಿದ್ದ ಗ್ರಾಹಕರೊಬ್ಬರಿಗೆ ತಾವೇ ಖುದ್ದು ಪುಸ್ತಕ ನೀಡಿ, ಆ ಗ್ರಾಹಕರೊಂದಿಗೆ ಕುಶಲೋಪರಿ ಮಾತುಕತೆ ನಡೆಸಿದರು.

ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿ ಭಾರತೀಯತೆ ವೈಭವ

ರಾಜ್ಯದ ಪ್ರತಿ ಜಿಲ್ಲೆಯಲ್ಲೂ ರಂಗಾಯಣ ಸ್ಥಾಪನೆ ಆಗಬೇಕು; ಸರ್ಕಾರ ಎಲ್ಲೆಡೆ ಭೂಮಿ ನೀಡಬೇಕು

- ●ಕನ್ನಡ ಚಿತ್ರರಂಗದ ಹಿರಿಯ ನಟ ದೊಡ್ಡಣ್ಣ ಆಗ್ರಹ
- ●ಬಹುರೂಪಿ ಚಲನಚಿತ್ರೋತ್ಸವಕ್ಕೆ ಚಾಲನೆ



ಮೈಸೂರು, ಡಿ.9(ಎಂಟಿವೈ)–ಕಲೆ, ರಂಗಭೂಮಿ ಹಾಗೂ ಸಾಹಿತ್ಯ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುತ್ತಿರುವ ರಂಗಾಯಣದಂತಹ ಕೇಂದ್ರಗಳು ಪ್ರತಿ ಜಿಲ್ಲೆಯಲ್ಲೂ ಇರಬೇಕು ಎಂದು ಹಿರಿಯ ಚಿತ್ರನಟ ದೊಡ್ಡಣ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಂಗಾಯಣದಲ್ಲಿ 'ಭಾರತೀಯತೆ' ಶೀರ್ಷಿಕೆಯೊಂದಿಗೆ ಆರಂಭಗೊಂಡಿರುವ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ 2ನೇ ದಿನವಾದ ಶುಕ್ರವಾರ ಭೂಮಿಗೀತಾದಲ್ಲಿ ಏರ್ಪಡಿಸಿದ್ದ ಬಹುರೂಪಿ ಚಲನಚಿತ್ರೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಕಲೆ, ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸುವ ಕೆಲಸವನ್ನು ಬಹುರೂಪಿ ನಾಟಕೋತ್ಸವ ಮಾಡುತ್ತಿದೆ. ರಂಗಾಯಣವು ಕೇವಲ ಮೈಸೂರು, ಧಾರವಾಡದಲ್ಲಿದ್ದರೆ ಸಾಲದು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ರಂಗಾಯಣ ಆರಂಭಿಸಬೇಕು. ಆಗ ನಮ್ಮಲ್ಲಿನ ಸಂಪದ್ಭರಿತ ಸಂಸ್ಕೃತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬಹುದು. ಸರ್ಕಾರ ಯಾರ್‍ಯಾರಿಗೋ ಭೂಮಿ ಮಂಜೂರು ಮಾಡುತ್ತದೆ. ಪ್ರತಿ ಜಿಲ್ಲೆಯಲ್ಲೂ ರಂಗಾಯಣಕ್ಕೆ ಭೂಮಿ ನೀಡಿ, ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ರಂಗಭೂಮಿ ಪರಂಪರೆಯನ್ನು ಶ್ರೀಮಂತಗೊಳಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ನಮ್ಮ ಮಣ್ಣಿಗೆ ತ್ಯಾಗದ ಗುಣವಿದೆ: ರಂಗಭೂಮಿಯಲ್ಲಿ ಸಾಧನೆ ಮಾಡಿದ ನಟನಿಗೆ ಸಾವಿಲ್ಲ. ರಂಗಭೂಮಿಯಲ್ಲಿ ದುಡಿದವರು ಎಲ್ಲಿ ಬೇಕಾದರೂ ಜೀವನ ಸಾಗಿಸಬಲ್ಲರು. ದೃಶ್ಯ ಮಾಧ್ಯಮದಲ್ಲಿ ಎಲ್ಲ ಮಹನೀಯರ ಜೊತೆ ಸೇರಿ ಕಲೆಯ ಕೃಷಿ ಮಾಡುವ ಯೋಗ ನನಗೆ ಸಿಕ್ಕಿದೆ. ಈ ಬಾರಿಯ ಬಹುರೂಪಿ ಆಶಯದಂತೆ ಭಾಷೆ, ಸಂಸ್ಕೃತಿ ಬೇರೆಯಾದರೂ ನಾವೆಲ್ಲರೂ ಶುದ್ಧ ಭಾರತೀಯರು. ಈ ಮಣ್ಣಿಗೆ ತ್ಯಾಗದ ಗುಣವಿದ್ದು, ಇಲ್ಲಿ ಹುಟ್ಟಿದ ರಾಕ್ಷಸರಿಗೂ ನಿಯತ್ತಿತ್ತು ಎಂದು ತಾವು ಅಭಿನಯಿಸಿದ ಕೆಲ ನಾಟಕಗಳ ಡೈಲಾಗ್ ಹೇಳಿ ನೆರೆದಿದ್ದವರನ್ನು ರಂಜಿಸಿದರು.

ಕನ್ನಡ ಸಮೃದ್ಧ ಭಾಷೆ. ನಮ್ಮ ಭಾಷೆಯಲ್ಲಿ ಗಡುಸಿದೆ. ಬೇರೆ ಯಾವ ಭಾಷೆಯಲ್ಲೂ ಕನ್ನಡದಷ್ಟು ಸಮೃದ್ಧತೆ ಇಲ್ಲ. ಕನ್ನಡ ಮಾತನಾಡುತ್ತಿದ್ದರೆ ಸರಸ್ವತಿ ನಾಲಗೆಯಲ್ಲಿ ನಲಿದಾಡುತ್ತಾಳೆ. ನಾನು ಕನ್ನಡ ನಟನಾಗಿದ್ದಕ್ಕೆ ಹೆಮ್ಮೆಯಿದೆ. ಮುಂದಿನ ಜನ್ಮ ಏನಾದರೂ ಇದ್ದರೆ ಕನ್ನಡ ನಟನಾಗಿಯೇ ಹುಟ್ಟುವ ಆಶಯವಿದೆ ಎಂದ ಅವರು, ಪೋಷಕರು ಮಕ್ಕಳಿಗೆ ಕನ್ನಡ ಸಾಹಿತ್ಯದ ಅರಿವು ಮೂಡಿಸಬೇಕು. ಇಲ್ಲವಾದರೆ ಯಾಂತ್ರಿಕ ಜೀವನದೆಡೆಗೆ ಪ್ರಭಾವಿತರಾಗುವ ಅಪಾಯವಿದೆ ಎಂದು ಸಲಹೆ ನೀಡಿದರು.

ಚಿತ್ರೋತ್ಸವದಿಂದ ಜ್ಞಾನಾರ್ಜನೆ: ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್ ಮಾತನಾಡಿ, ರಂಗಾಯಣ ಬಹಳಷ್ಟು ಅತ್ಯುತ್ತಮ ನಟರನ್ನು ಕೊಟ್ಟಿದೆ. ಅವರೊಟ್ಟಿಗೆ ನಾನು ಕೆಲಸ ಮಾಡಿದ್ದೇನೆ. ಹಿಂದೆ ನಾಟಕಗಳನ್ನೇ ಕ್ಯಾಮರಾದಲ್ಲಿ ಸೆರೆಹಿಡಿದು ಸಿನಿಮಾ ಮಾಡುತ್ತಿದ್ದರು. ಕಾಲ ಬದಲಾಗಿ ಡಿಜಿಟಲೀಕರಣದಿಂದಾಗಿ ಸಿನಿಮಾ ಇಂದು ಇಷ್ಟು ಎತ್ತರಕ್ಕೆ ಬೆಳೆದಿದೆ. ಚಲನಚಿತ್ರೋತ್ಸವದಿಂದ ಜ್ಞಾನಾರ್ಜನೆಯಾಗಲಿದ್ದು, ವಿಶ್ವದ ಬೇರೆ ಬೇರೆ ಭಾಗಗಳ ಕಲೆ, ಸಂಸ್ಕೃತಿ ಅರಿಯಬಹುದು. ನನ್ನ ಬಳಿ ಜಗತ್ತಿನ ಬೇರೆ ಬೇರೆ ಭಾಷೆಯ 20 ಸಾವಿರ ಫಿಲ್ಮ್‌ಗಳ ಡಿವಿಡಿಗಳಿದ್ದು, ಮುಂದಿನ ಬಹುರೂಪಿ ಚಲನಚಿತ್ರೋತ್ಸವಕ್ಕೆ ಬಳಸಿಕೊಳ್ಳಬಹುದು ಎಂದರು.

ಮೈಸೂರಲ್ಲಿ ಕಿರುಚಿತ್ರ ಚಲನಚಿತ್ರೋತ್ಸವ: ಚಲನಚಿತ್ರೋತ್ಸವಗಳು ಕೇವಲ ಬೆಂಗಳೂರಿಗೆ ಸೀಮಿತವಾಗಿ ನಡೆಯುತ್ತವೆ. ಇದನ್ನು ಮೈಸೂರಿನಂತಹ ಬೇರೆ ಬೇರೆ ಜಿಲ್ಲೆಗಳಿಗೂ ವಿಸ್ತರಿಸಬೇಕಾದ ಅಗತ್ಯತೆ ಇದೆ. ಮೈಸೂರು ಚಲನಚಿತ್ರೋತ್ಸವಕ್ಕೆ ಸೂಕ್ತವಾದ ಜಾಗ. ಬೆಂಗಳೂರಿನಲ್ಲಿ ನಡೆಯುವ ಚಲನಚಿತ್ರೋತ್ಸವದಲ್ಲಿ ಕಿರುಚಿತ್ರಗಳಿಗೆ ಅವಕಾಶವಿರುವುದಿಲ್ಲ. ಹೀಗಾಗಿ ಮೈಸೂರಿನಲ್ಲಿ ಕಿರುಚಿತ್ರಗಳ ಚಲನಚಿತ್ರೋತ್ಸವ ಆಯೋಜನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇನೆ. ರಂಗಾಯಣದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಚಲನಚಿತ್ರಕ್ಕೆ ಸಂಬಂಧಿಸಿದ ಕಾರ್ಯಾಗಾರ ನಡೆಸುವ ಚಿಂತನೆಯಿದೆ ಎಂದರು.



ಮೊದಲ ದಿನ 2 ಚಿತ್ರ ಪ್ರದರ್ಶನ: ಚಲಚಿತ್ರೋತ್ಸವದ ಮೊದಲ ಎರಡು ಚಲನಚಿತ್ರಗಳು ರಂಗಾಯಣದ ಆವರಣದ ಪುನೀತ್‌ರಾಜ್‌ಕುಮಾರ್ ಚಿತ್ರಮಂದಿರದಲ್ಲಿ ಪ್ರಸಾರಗೊಂಡವು. ಮಧ್ಯಾಹ್ನ 12ರಿಂದ 1.30ರವರೆಗೆ ಉಮೇಶ್ ಅಗರ್‌ವಾಲ್ ನಿರ್ದೇಶನದ 'ಜೈ ಹೋ–ಎ ಫಿಲ್ಮ್ ಆಫ್ ಎ.ಆರ್.ರೆಹಮಾನ್' ಚಿತ್ರ ಪ್ರದರ್ಶನಗೊಂಡಿತು. ಮಧ್ಯಾಹ್ನ 2ರಿಂದ 4.30ರವರೆಗೆ ನೇಪಾಳಿ ಭಾಷೆಯ, ಟ್ಸೆರಿಂಗ್ ರೈತರ್ ಶೆರ್ಪಾ ನಿರ್ದೇಶನದ ಕರ್ಮ ಚಿತ್ರ ಪ್ರದರ್ಶನಗೊಂಡಿತು. ಎರಡೂ ಚಿತ್ರಗಳಿಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಕಾರ್ಯಕ್ರಮದಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಬಹುರೂಪಿ ಸಂಚಾಲಕ ಜಗದೀಶ್ ಮನವಾರ್ತೆ, ಚಲನಚಿತ್ರೋತ್ಸವದ ಸಂಚಾಲಕರಾದ ಮನು, ಶಶಿಕಲಾ ಉಪಸ್ಥಿತರಿದ್ದರು.

ಬಹುರೂಪಿ ಕರಕುಶಲ ಮಳಿಗೆ, ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ



ಮೈಸೂರು,ಡಿ.9(ಎಸ್‌ಬಿಡಿ)–ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಪುಸ್ತಕ ಪ್ರದರ್ಶನ, ಕರಕುಶಲ, ಆಹಾರ ಮಳಿಗೆ ಹಾಗೂ ಭಾರತೀಯತೆ ಚಿತ್ರಕಲಾ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ದೊರಕಿತು.

ರಂಗಾಯಣದ ಆವರಣದಲ್ಲಿರುವ ಕರಕುಶಲ ಮಳಿಗೆಗಳನ್ನು ಮೈಸೂರು ಬಣ್ಣ ಹಾಗೂ ಅರಗು ಕಾರ್ಖಾನೆ(ಮೈಲ್ಯಾಕ್) ಅಧ್ಯಕ್ಷ ರಘು ಕೌಟಿಲ್ಯ ಹಾಗೂ ಕಲಾಮಂದಿರ ಆವರಣದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಆಯೋಜಿಸಿರುವ ಚಿತ್ರಕಲಾ ಪ್ರದರ್ಶನವನ್ನು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಉದ್ಘಾಟಿಸಿ, ವೀಕ್ಷಿಸಿದರು.

ಬಳಿಕ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಭಾರತದ ಕಲೆ, ಸಂಸ್ಕೃತಿ, ಪರಂಪರೆ, ದೇಶೀಯತೆಯನ್ನು ಪಸರಿಸುವ ರಂಗಾಯಣಕ್ಕೆ ಇಷ್ಟು ಜಾಗ ಸಾಕಾಗುವುದಿಲ್ಲ. ಇನ್ನೂ 5–10 ಎಕರೆ ಸ್ಥಳಾವಕಾಶ ಕಲ್ಪಿಸಬೇಕು ಇಲ್ಲವೇ ವಿಶಾಲವಾದ ಜಾಗಕ್ಕೆ ಸ್ಥಳಾಂತರಿಸಬೇಕೆಂದು ಬಹುರೂಪಿ ಉದ್ಘಾಟನೆಗೆ ಆಗಮಿಸುತ್ತಿರುವ ಮುಖ್ಯಮಂತ್ರಿಗಳಲ್ಲಿ ನಾನು ಒಬ್ಬ ರಂಗಪ್ರೇಮಿಯಾಗಿ ನಿವೇದಿಸಿಕೊಳ್ಳುತ್ತೇನೆ ಎಂದು ತಿಳಿಸಿದರು.

ಬಹುರೂಪಿ ಉತ್ಸವ ಜನಪ್ರೀತಿ ಗಳಿಸಿದೆ. ಅದರಲ್ಲೂ ಈ ಬಾರಿ ಬಹುಜನರನ್ನು ತಲುಪುವ ಮೂಲಕ ಸಂಸ್ಕೃತಿಯ ವೈಭವವನ್ನು ಪಸರಿಸಿದೆ. ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪನವರು ಅಧಿಕಾರಿಗಳ ಸಹಕಾರದೊಂದಿಗೆ ಮನೆ ಮನೆ ಸಂಪರ್ಕಿಸಿ ಜನರ ಮನಮುಟ್ಟುವ ರೀತಿಯಲ್ಲಿ ಹಲವು ಪ್ರಯತ್ನ ಮಾಡಿದ್ದಾರೆ. ಈ ಮೂಲಕ ಸಂಸ್ಕೃತಿ ಪ್ರೇಮಿಗಳ ಸಂತೋಷ ಹೆಚ್ಚಿಸಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಎಂದರು.

ಮೈಸೂರಿನ ಸಾಂಸ್ಕೃತಿಕ ವೈಭವ ವಿಸ್ತರಣೆಗೆ ಬಹುರೂಪಿ ಉತ್ಸವ ಪ್ರೇರಣೆಯಾಗಬೇಕು. ಜೊತೆಗೆ ರಂಗಾಯಣ ಬಹುರೂಪಿ ಉತ್ಸವಕ್ಕೆ ಸೀಮಿತವಾಗದೆ ನಿತ್ಯ ಪ್ರವಾಸಿಗರನ್ನು ಸೆಳೆದು ಅವರಿಗೆ ಸಂಸ್ಕೃತಿ ಉಣ ಬಡಿಸುವ ತಾಣವಾಗಬೇಕು. ಮಾಲ್‌ಗಳು ಸೇರಿದಂತೆ ಎಲ್ಲೆಡೆ ವಿದೇಶಿ ಪ್ರೇರಿತ ಆಹಾರ ಉತ್ಪನ್ನಗಳು ಆಕ್ರಮಿಸಿಕೊಂಡಿರುವ ಸಂದರ್ಭದಲ್ಲಿ ಪ್ರತಿ ವಾರ ದೇಶೀಯ ಆಹಾರ ಉತ್ಪನ್ನಗಳ ಮೇಳ ಆಯೋಜಿಸಬೇಕು. ಈ ಮೂಲಕ ಬೇಡಿಕೆಯಿದ್ದರೂ ವೇದಿಕೆ ಇಲ್ಲವೆಂಬ ಕೊರತೆಯನ್ನು ನೀಗಬೇಕು. ಹೀಗೆ ಮಾತೃಸ್ಥಾನದಲ್ಲಿ ನಿಂತು ದೇಶೀಯತೆಯನ್ನು ಕಾಪಾಡುವ ಜವಾಬ್ದಾರಿಯನ್ನು ರಂಗಾಯಣ ನಿರ್ವಹಿಸಬೇಕು ಎಂದು ಆಶಿಸಿದರು. ಈ ವೇಳೆ ಭಾರತೀಯತೆ ಚಿತ್ರಕಲಾ ಮೇಳದಲ್ಲಿ ಭಾಗವಹಿಸಿದ್ದ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ(ಕಾವಾ) 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಶಂಸನಾ ಪತ್ರ ವಿತರಿಸಲಾಯಿತು. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಉಪನಿರ್ದೇಶಕಿ ನಿರ್ಮಲಾ ಮಠಪತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಬಹುರೂಪಿ ಸಂಚಾಲಕ ಜಗದೀಶ್ ಮನವಾರ್ತೆ, ಕಾವಾ ಪ್ರಭಾರ ಡೀನ್ ದೇವರಾಜ್, ಕರಕುಶಲ ವಸ್ತುಪ್ರದರ್ಶನ ಸಂಚಾಲಕ ಕೃಷ್ಣಕುಮಾರ್ ನಾರ್ಣಕಜೆ ಉಪಸ್ಥಿತರಿದ್ದರು.

ಮಳೆಯಿಂದ ಹೈರಾಣಾದ ವ್ಯಾಪಾರಿಗಳು; ರಂಗಪ್ರೇಮಿಗಳ ಸಂಭ್ರಮಕ್ಕೂ ತಣ್ಣೀರು



ಮಾಂಡೌಸ್ ಗೈಕ್ಲೋನ್ ಚಂಡಮಾರುತದ ಪರಿಣಾಮ ರಂಗಾಯಣದ ಬಹುರೂಪಿಗೂ ತಟ್ಟಿತು. ಕರಕುಶಲ ಮಳಿಗೆ ಹಾಗೂ ಚಿತ್ರಕಲಾ ಪ್ರದರ್ಶನ ಉದ್ಘಾಟನೆ ಬಳಿಕ ಸಭಾ ಕಾರ್ಯಕ್ರಮ ನಡೆಯುತ್ತಿದ್ದಾಗಲೇ ಮಳೆ ಶುರುವಾಯಿತು. ಕೆಲಹೊತ್ತಿನಲ್ಲೇ ಮಳೆ ಹೆಚ್ಚಾಗಿದ್ದರಿಂದ ಬಿ.ವಿ.ಕಾರಂತರ ರಂಗಚಾವಡಿ ಮುಂಭಾಗದ ಪೆಂಡಾಲ್‌ನಿಂದ ಹನಿ ಬೀಳಲಾರಂಭಿಸಿತು. ಆದರೂ ರಂಗಾಸಕ್ತರು ಜನಪದೋತ್ಸವದ ಸೊಬಗು ಸವಿದರು. ಕೆಲ ಸಮಯ ಕಳೆಯುತ್ತಿದ್ದಂತೆ ಮಳೆ ಜೋರಾಗಿದ್ದರಿಂದ ಮಳಿಗೆಗಳು ಸೋರಲಾರಂಭಿಸಿದವು. ಬೆಳಗ್ಗೆಯಿಂದ ಜೋಡಿಸಿದ್ದ ವಸ್ತುಗಳನ್ನು ತಕ್ಷಣಕ್ಕೆ ಒಂದೆಡೆ ಇಡಲಾಗದೆ ಹಲವು ವಸ್ತುಗಳು ತೊಯ್ದುವು. ಹಲವು ಪುಸ್ತಕಗಳ ಮೇಲೆ ನೀರು ಸುರಿದು, ಅವುಗಳನ್ನು ಬಟ್ಟೆಯಲ್ಲಿ ಒರೆಸುತ್ತಿದ್ದ ದೃಶ್ಯ ಕಂಡು ಬಂದಿತು. ವಸ್ತುಗಳ ಮೇಲೆ ಟಾರ್ಪಲ್ ಮುಚ್ಚಿ ರಕ್ಷಿಸಿಕೊಂಡರು. ಈ ನಡುವೆ ಸ್ವಲ್ಪ ಮಟ್ಟಿಗೆ ಮಿರ್ಚಿ–ಮಂಡಕ್ಕಿ, ಬಜ್ಜಿ ಇನ್ನಿತರ ತಿಂಡಿತಿನಿಸುಗಳ ಮಾರಾಟವಾಯಿತು. ರಂಗಾಸಕ್ತರೂ ತೊಟ್ಟಿಕ್ಕುವ ಪೆಂಡಾಲ್ ಕೆಳಗೆ ನಿಂತು ತೋಯ್ದರು. ಕೆಲ ಪುಸ್ತಕ ಮಳಿಗೆಯವರು ತಾವು ನೀಡಿದ್ದ ಡಿಡಿಯನ್ನು ವಾಪಸ್ ಪಡೆದು ಮಳಿಗೆಯನ್ನೇ ಖಾಲಿ ಮಾಡಿದರೆಂದು ವ್ಯಾಪಾರಿಗಳು ತಿಳಿಸಿದರು. ಮಳಿಗೆಗಳಿಗೆ ಶೀಟ್ ಅಳವಡಿಸುತ್ತೇವೆ ಎಂದಿದ್ದರು. ಆದರೆ ಸಾಮಾನ್ಯ ಪೆಂಡಾಲ್ ಹಾಕಿದ್ದಾರೆ ಎಂದು ವ್ಯಾಪಾರಿಗಳು ಬೇಸರ ವ್ಯಕ್ತಪಡಿಸಿದರು. ಮಳಿಗೆಗಳು ಸೋರದಂತೆ ವ್ಯವಸ್ಥೆ ಮಾಡುವುದಾಗಿ ರಂಗಾಯಣವರು ಸಮಾಧಾನಪಡಿಸಿರುವುದಾಗಿ ತಿಳಿಸಿದರು.

ರುಚಿಕರ ತಿನಿಸು, ವರ್ಣಮಯ ಧಿರಿಸು

ರಂಗಾಯಣದ ಆವರಣದಲ್ಲಿ ಬಹುರೂಪಿ ಪುಸ್ತಕ ಮೇಳ, ಆಹಾರ ಹಾಗೂ ಕರಕುಶಲ ಮೇಳ ಮೈದಳೆದಿದೆ. ಖಾದಿ ವಸ್ತ್ರಗಳು, ವಿಶೇಷ ಚಿತ್ತಾಕರ್ಷಣೆಯುಳ್ಳ ಜೂಡಿದಾರ್, ಮಹಿಳೆಯರ ಮನಸೆಳೆಯುವ ಬಣ್ಣ ಬಣ್ಣದ ಸೀರೆಗಳು, ಕಾಟನ್ ಕುರ್ತಾ, ದುಪ್ಪಟ, ಬ್ಲೌಸ್ ಮೆಟಿರಿಯಲ್ಸ್, ಕಾಟನ್ ಮತ್ತು ಸಿಲ್ಕ್ ಸೀರೆ, ಹೆಗ್ಗೋಡಿನ ಕರಕುಶಲ ಸಿದ್ಧ ಉಡುಪುಗಳು ಸೇರಿದಂತೆ ಪುರುಷರು, ಮಹಿಳೆಯರು ಹಾಗೂ ಮಕ್ಕಳ ಧಿರಿಸುಗಳು ಇಲ್ಲಿ ರಿಯಾಯ್ತಿ ದರದಲ್ಲಿ ದೊರಕಲಿವೆ. ಹಾಸು ಆಟಗಳು, ಪಝಲ್ಸ್, ದೇಶೀಯ ಆಟಿಕೆಗಳು, ಬ್ಯಾಗ್‌ಗಳು, ಟವೆಲ್, ಕಲಾ ಚಿತ್ರಗಳು, ಆಕರ್ಷಕ ಅಲಂಕಾರಿಕ ವಸ್ತುಗಳು, ಅಡುಗೆ ತಯಾರಿ ಉಪಕರಣಗಳು, ನರ್ಸರಿ ಸಸ್ಯಗಳು, ಪಾಟ್‌ಗಳು, ಮಣ್ಣಿನಿಂದ ತಯಾರಿಸಿದ ದೀಪ, ಹೀಗೆ ವಿಭಿನ್ನ ವಸ್ತುಗಳನ್ನು ಮಾರಾಟಕ್ಕಿಡಲಾಗಿದೆ. ಅಲ್ಲದೆ ಸಿರಿಧಾನ್ಯಗಳಿಂದ ತಯಾರಿಸಿದ ತಿನಿಸು, ಗೋಕಾಕ ಕರದಂಟು, ಲಡಗಿ ಲಾಡು, ಧಾರವಾಡ ಪೇಡ, ಬೆಳಗಾವಿ ಕುಂದಾ, ಸವಣೂರು ಖಾರಾ, ಎತ್ತಿನ ಗಾಣದಿಂದ ಹೊರತೆಗೆದ ಪರಿಶುದ್ಧ ಅಡುಗೆ ಎಣ್ಣೆ ಇತರೆ ನೈಸರ್ಗಿಕ ಪದಾರ್ಥ, ಬೆಲ್ಲ ಮತ್ತು ಸೈಂಧವ ದ್ರಾವಣವುಳ್ಳ ನೆಲ್ಲಿಕಾಯಿ ಜ್ಯೂಸ್, ಬಗೆಬಗೆಯ ಉಪ್ಪಿನಕಾಯಿ, ಮಸಾಲ ಪುಡಿಗಳು ಸೇರಿದಂತೆ ಪ್ರಾದೇಶಿಕ ಪ್ರಸಿದ್ಧ ತಿಂಡಿತಿನಿಸುಗಳನ್ನು ಸವಿಯಬಹುದು. ಮಕ್ಕಳಿಗೆ ಬೇಕಾದ ಪುಸ್ತಕಗಳು ಸೇರಿ ವಿವಿಧ ಪ್ರಕಾಶನದ ಪುಸ್ತಕಗಳನ್ನೂ ಇಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕಿಡಲಾಗಿದೆ. ಇದಲ್ಲದೆ ಪ್ರತ್ಯೇಕ ಸ್ಥಳದಲ್ಲಿ ಆಹಾರ ಮಳಿಗೆಗಳಿದ್ದು ರಾಜ್ಯದ ವಿವಿಧೆಡೆಯ ಪ್ರಸಿದ್ಧ ಸಿಹಿ ಹಾಗೂ ಖಾರವಾದ ಆಹಾರ ಖಾದ್ಯಗಳ ರುಚಿ ನೋಡಬಹುದಾಗಿದೆ.

ಚಿತ್ರಕಲೆಯಲ್ಲಿ ಮೇಳೈಸಿದ ಭಾರತೀಯತೆ



ಬಹುರೂಪಿ ಚಿತ್ರಕಲಾ ಮೇಳದಲ್ಲಿ ಭಾಗವಹಿಸಿದ್ದ ಮೈಸೂರಿನ ಕಾವಾ ಕಾಲೇಜು ವಿದ್ಯಾರ್ಥಿಗಳ ಪರಿಕಲ್ಪನೆಯಲ್ಲಿ ಮೂಡಿರುವ ಕಲಾಚಿತ್ರಗಳನ್ನು ಕಲಾಮಂದಿರ ಆವರಣದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಪ್ರದರ್ಶನಕ್ಕಿಡಲಾಗಿದೆ. ದೋಣಿಯಾಕಾರದ ಕಣ್ಣಿನ ಚಿತ್ರ, ಅಕ್ಷಿಪಟದಲ್ಲಿ ಅಡಕವಾದ ವಿಶ್ವ, ವೈವಿಧ್ಯಮಯ ನೋಟ ಹೀಗೆ ಕಲಾವಿದನ ಪರಿಕಲ್ಪನೆಯ ಚಿತ್ರ ಮನ ಸೆಳೆಯುತ್ತದೆ. ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ಶ್ರೇಷ್ಠ ರಾಷ್ಟ್ರ ಇಲ್ಲಿ ಎಲ್ಲಾ ಧರ್ಮೀಯರೂ ಭಾರತೀಯರೇ ಎಂಬ ಸಂದೇಶ ಸಾರುವ ಚಿತ್ರ, ದೇಶದ ಲಾಂಛನ, ದೇವಾಲಯ, ಚರ್ಚ್ ಹಾಗೂ ಮಸೀದಿಯನ್ನು ಅಂಗೈಯಲ್ಲಿ ಹಿಡಿದಿರುವ ವೃಕ್ಷ ಮಾದರಿ ಭಾರತ ಮಾತೆ, ಮುಡಿಯಲ್ಲಿ ನವಿಲ ನರ್ತನ, ಹೀಗೆ ವಿದ್ಯಾರ್ಥಿ ಕಲಾವಿದರ ಅಂತರಂಗದ ಭಾವನೆಗಳು ಚಿತ್ರವಾಗಿ ಹೊರಹೊಮ್ಮಿವೆ. ಇಲ್ಲಿರುವ ವೈವಿಧ್ಯಮಯ ಹಾಗೂ ಅತ್ಯಾಕರ್ಷಕವಾದ 20 ಕಲಾಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೆಲಕಾಲ ಬೇರೊಂದು ಲೋಕದಲ್ಲಿ ವಿಹರಿಸಿದ ಅನುಭವ ಖಚಿತ.





ರಂಗೋತ್ಸವದಲ್ಲಿ ಮೇಳೈಸಿದ ಜಾನಪದ ಝೇಂಕಾರ; ಟಿಪ್ಪು ನಾಟಕ ಹೌಸ್‌ಫುಲ್







ಮಳೆ ಕಾರಣದಿಂದ ವನರಂಗದ ಬದಲಾಗಿ ಬಿ.ವಿ.ಕಾರಂತರ ರಂಗಚಾವಡಿಯಲ್ಲಿ ಜನಪದೋತ್ಸವದ ಎರಡನೇ ದಿನದ ಕಾರ್ಯಕ್ರಮ ನಡೆಯಿತು. ಚಾಮರಾಜನಗರದ ಶಿವಮಲ್ಲೇಗೌಡ ಮತ್ತು ತಂಡದ ಕಲಾವಿದರು 'ಗೊರವರ ನೃತ್ಯ'ವನ್ನು ಅತ್ಯಾಕರ್ಷಕವಾಗಿ ಪ್ರಸ್ತುತಪಡಿಸಿದರು. ಸಾಂಪ್ರದಾಯಿಕ ಉಡುಗೆಯಲ್ಲಿ ಕೊಳಲು ಮತ್ತು ಡಮರುಗ ಸದ್ದಿಗೆ ಹೆಜ್ಜೆ ಹಾಕಿದರು. ಬಳಿಕ ಮೈಸೂರಿನ ಡಾ.ಮನೋನ್ಮಣಿ ಮತ್ತು ತಂಡದವರು 'ಸಾಂಪ್ರದಾಯದ ಹಾಡು'ಗಳ ಮೂಲಕ ನೆರೆದಿದ್ದವರ ಮನಸೂರೆಗೊಂಡರು. ವಿಘ್ನವಿನಾಶಕನನ್ನು ಸ್ತುತಿಸಿದ ಬಳಿಕ ದಶಕಗಳ ಹಿಂದೆ ಮದುವೆ ಮನೆಯಲ್ಲಿ ಹಾಡುತ್ತಿದ್ದ ಶಾಸ್ತ್ರದ ಹಾಡುಗಳನ್ನು ಪ್ರಸ್ತುತಪಡಿಸಿದರು. ಎಂದೂ ಕೇಳಿರದವರು ಮನೋನ್ಮಣಿ ಅವರ ಗಾಯನವನ್ನು ಮಳೆಯಲ್ಲೂ ತದೇಕಚಿತ್ತದಿಂದ ಆಸ್ವಾದಿಸಿದರು.

ನಂತರ ರಂಗಾಯಣದ ಭೂಮಿಗೀತ ರಂಗವೇದಿಕೆಯಲ್ಲಿ ಅಡ್ಡಂಡ ಸಿ.ಕಾರ್ಯಪ್ಪನವರ ನಿರ್ದೇಶನದ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಗೊಂಡಿತು. ಈ ಮೂಲಕ ರಂಗೋತ್ಸವದಲ್ಲಿ ಪ್ರದರ್ಶನವಾದ ಮೊದಲ ನಾಟಕವೆನಿಸಿತು. ಈ ನಾಟಕದ ಎಲ್ಲಾ ಟಿಕೆಟ್‌ಗಳೂ ಮಾರಾಟವಾಗಿದ್ದರಿಂದ ಹಲವರು ನಿರಾಸೆಯಿಂದ ವಾಪಸ್ಸಾದರು.

ಸಿಎನ್‌ಸಿಯಿಂದ ಸಂಭ್ರಮದ ಪುತ್ತರಿ ನಮ್ಮೆ

ಕೊಡವರಿಗೆ ಭೌಗೋಳಿಕ-ರಾಜಕೀಯ ಸ್ವಾಯತ್ತತೆ ನೀಡಲು ಆಗ್ರಹ



ಮಡಿಕೇರಿ, ಡಿ.9– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ 29ನೇ ವರ್ಷದ ಪುತ್ತರಿ ನಮ್ಮೆಯನ್ನು ದಕ್ಷಿಣ ಕೊಡಗಿನ ಬಿರುನಾಣಿಯ ತೆರಾಲು ಗ್ರಾಮದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಬೊಟ್ಟಂಗಡ ಗಿರೀಶ್ ಹಾಗೂ ಸವಿತಾ ಗಿರೀಶ್ ದಂಪತಿ ಭತ್ತದ ಗದ್ದೆಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಕದಿರು ಕೊಯ್ದು ಮನೆಗೆ ತರಲಾಯಿತು.

ಗುರು, ಹಿರಿಯರು ಹಾಗೂ ಪ್ರಕೃತಿಗೆ ಪ್ರಾರ್ಥನೆ ಸಲ್ಲಿಸಿದ ನಾಚಪ್ಪ ಅತ್ಯಂತ ಸೂಕ್ಷ್ಮ ಜನಾಂಗವಾಗಿರುವ ಕೊಡವರ ಸಾಂಪ್ರದಾಯಿಕ ಹಬ್ಬ, ಆಚಾರ, ವಿಚಾರಗಳನ್ನು ಇಡೀ ವಿಶ್ವಕ್ಕೆ ತಿಳಿಸಬೇಕೆನ್ನುವ ಉದ್ದೇಶದಿಂದ ಸಿಎನ್‌ಸಿ ಸಂಘಟನೆ ಕಳೆದ ಮೂರು ದಶಕಗಳಿಂದ ಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸಿಕೊಂಡು ಬರುತ್ತಿದೆ ಎಂದರು.

ಬುಡಕಟ್ಟು ಜನಾಂಗ ಕೊಡವರ ಹಬ್ಬಗಳು ಸೂರ್ಯ, ಚಂದ್ರನ ಮೂಲಕ ವಿಕಸನಗೊಂಡಿವೆ. ಇಲ್ಲಿ ಮೂಢ ನಂಬಿಕೆಗಳಿಗೆ ಅವಕಾಶವಿಲ್ಲ, ನಮ್ಮ ಪೂರ್ವಜರು ಅಲಿಖಿತ ಮೌಖಿಕ ಕೊಡವ ಜಾನಪದ–ಕಾನೂನು ವ್ಯವಸ್ಥೆಗಳು ಮತ್ತು ಆಚರಣೆಗಳನ್ನು ಬಹಳ ಹಿಂದೆಯೇ ರೂಪಿಸಿದ್ದರು. ಅದನ್ನು ಇಲ್ಲಿಯವರೆಗೆ ಅನುಸರಿಸಿಕೊಂಡು ಬರಲಾಗಿದೆ. ಅದರಂತೆ ನಮ್ಮ ಹಿರಿಯರು ಹುಣ್ಣಿಮೆಯ ಚಕ್ರದಂತೆ ಹಬ್ಬಗಳನ್ನು ನಿರ್ಧರಿಸುತ್ತಿದ್ದಾರೆ. ಕೊಡವರಿಗೆ ಯಾವುದೇ ಧಾರ್ಮಿಕ ಕ್ರಿಯೆಯ ಏಜೆಂಟರುಗಳ ಅಗತ್ಯವಿಲ್ಲ. ನೇರವಾಗಿ ಪ್ರಕೃತಿಯ ಚಕ್ರದ ಮೂಲಕ ಕೊಡವರೇ ಕೊಡವರ ಜನಪದ ಆಚರಣೆಗಳನ್ನು ನಿರ್ಧರಿಸುತ್ತಾರೆ ಎಂದು ಹೇಳಿದರು.

ನಮ್ಮ ನೆಲ, ಭಾಷೆ, ಜಾನಪದ, ಸಾಂಸ್ಕೃತಿಕ, ಐತಿಹಾಸಿಕ ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಂವಿಧಾನ ದಡಿಯಲ್ಲಿ ಸೂಕ್ಷ್ಮ ಕೊಡವ ಬುಡಕಟ್ಟು ಜನಾಂಗಕ್ಕೆ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ನೀಡಬೇಕು ಎಂದು ಅವರು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಬೊಟ್ಟಂಗಡ ಗಿರೀಶ್, ಸವಿತಾ ಗಿರೀಶ್, ಬೊಟ್ಟಂಗಡ ಸುಮನ್ ಸೀತಮ್ಮ, ಬೊಟ್ಟಂಗಡ ವಿಲೀನಾ, ಬೊಟ್ಟಂಗಡ ಮಾನಸ, ಬೊಟ್ಟಂಗಡ ಪುಷ್ಪ, ಕುಮಾರಿ ಬೊಟ್ಟಂಗಡ ವಂಶಿಕ, ಬೊಟ್ಟಂಗಡ ವಂಶಿಕ, ಬೊಜ್ಜಂಗಡ ಚಂಪಾ, ಅರೆಯಡ ಸವಿ, ಬೊಟ್ಟಂಗಡ ದೀಪಿಕಾ, ಕುಮಾರಿ ಬೊಜ್ಜಂಗಡ ಆಂಚಲ್, ಬಲ್ಯಮೀದೇರಿರ ಆಶಾ, ಕಲಿಯಂಡ ಪ್ರಕಾಶ್, ಬೊಟ್ಟಂಗಡ ಪೆಮ್ಮಯ್ಯ, ಬೊಟ್ಟಂಗಡ ಎಂ.ರಾಜು, ಅರೆಯಡ ಗಿರೀಶ್ ಕೊಡವ, ಕಂಡೇರ ಸುರೇಶ್, ಕಿರಿಯಮಾಡ ಶೆರಿನ್, ಅರೆಯಡ ಸಾವನ್ ಕೊಡವ, ಕಿರಿಯಮಾಡ ಶಾನ್ ಕೊಡವ, ಬೊಟ್ಟಂಗಡ ಜಯುತ್ ಬೋಪಣ್ಣ, ಬೊಟ್ಟಂಗಡ ತಿಮ್ಮಣ್ಣ, ಬೊಟ್ಟಂಗಡ ರವಿ ಕರಿಯಪ್ಪ, ಬೊಟ್ಟಂಗಡ ರವಿ ಕರಿಯಪ್ಪ, ಬೊಟ್ಟಂಗಡ ತಿಮ್ಮಣ್ಣ, ಬೊಟ್ಟಂಗಡ ರವಿ ಕರಿಯಪ್ಪ, ಸೋಮಣ್ಣ, ಬಲ್ಯಮೀದೇರಿರ ಸುರೇಶ್ ಪೆಮ್ಮಯ್ಯ, ಬೊಟ್ಟಂಗಡ ಅಣ್ಣಯ್ಯ, ಬೊಜ್ಜಂಗಡ ನಂದ, ಬೊಟ್ಟಂಗಡ ಮೋಟಯ್ಯ, ಬೊಟ್ಟಂಗಡ ಪೂವಣ್ಣ, ಬೊಟ್ಟಂಗಡ ಪ್ರಣಮ್, ತನ್ವಿಶ್ ದೇವಯ್ಯ, ಬೊಟ್ಟಂಗಡ ಹರೀಶ್, ಬೊಳ್ಳೇರ ಟಿ.ಮುತ್ತಣ್ಣ ಮತ್ತಿತರರು ಪುತ್ತರಿ ನಮ್ಮೆಯಲ್ಲಿ ಪಾಲ್ಗೊಂಡಿದ್ದರು.

ಜ.20ರಿಂದ ಅಮ್ಮತ್ತಿಯಲ್ಲಿ ಅಖಿಲ ಭಾರತ ಹೊನಲು ಬೆಳಕಿನ ಫುಟ್ಬಾಲ್ ಪಂದ್ಯಾವಳಿ

ರಾಜಸ್ಥಾನ, ಗೋವಾ, ಕೇರಳ, ತಮಿಳುನಾಡು, ಬೆಂಗಳೂರು, ಆರ್ಮಿ, ಕೊಡಗು ಸೇರಿ 16 ತಂಡಗಳು ಭಾಗಿ



ಮಡಿಕೇರಿ, ಡಿ.9– ಮಿಲನ್ಸ್ ಕ್ಲಬ್, ಕರ್ನಾಟಕ ರಾಜ್ಯ ಫುಟ್ಬಾಲ್ ಸಂಸ್ಥೆ ಮತ್ತು ಕೊಡಗು ಜಿಲ್ಲಾ ಫುಟ್ಬಾಲ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಜ.20ರಿಂದ 29ರವರೆಗೆ ಇದೇ ಪ್ರಥಮ ಬಾರಿಗೆ ಅಮ್ಮತ್ತಿ ಪ್ರೌಢ ಶಾಲಾ ಮೈದಾನದಲ್ಲಿ 'ಅಖಿಲ ಭಾರತ ಹೊನಲು ಬೆಳಕಿನ ಫುಟ್ಬಾಲ್ ಪಂದ್ಯಾವಳಿ' ಆಯೋಜಿಸಲಾಗಿದೆ.

ಅಮ್ಮತ್ತಿ ಮಿಲನ್ಸ್ ಕ್ಲಬ್ ಮತ್ತು ಕೊಡಗು ಜಿಲ್ಲಾ ಫುಟ್ಬಾಲ್ ಸಂಸ್ಥೆ ಜಂಟಿಯಾಗಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಪ್ರಮುಖರು ಮಾತನಾಡಿ, ರಾಜಸ್ಥಾನ, ಗೋವಾ, ಕೇರಳ, ತಮಿಳುನಾಡು, ಬೆಂಗಳೂರು, ಆರ್ಮಿ ತಂಡ ಸೇರಿದಂತೆ ನೋಂದಾಯಿತ 16 ತಂಡಗಳು ಹಾಗೂ ಕೊಡಗಿನ ಪ್ರತಿಭಾವಂತ ಆಟಗಾರರನ್ನು ಒಳಗೊಂಡ ಕೊಡಗು ತಂಡ ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ಪಂದ್ಯಾವಳಿ ವಿಜೇತ ತಂಡಕ್ಕೆ 1.50 ಲಕ್ಷ ನಗದು ಹಾಗೂ ದ್ವಿತೀಯ ಸ್ಥಾನ ಪಡೆಯುವ ತಂಡಕ್ಕೆ 1 ಲಕ್ಷ ರೂ. ನಗದು ಬಹುಮಾನವನ್ನು ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪಂದ್ಯಾವಳಿಯ ಉದ್ಘಾಟನಾ ಸಮಾರಂಭದಲ್ಲಿ ಭಾರತ ಕಂಡ ಅಪರೂಪದ ಫುಟ್ಬಾಲ್ ಆಟಗಾರ ಕೇರಳದ ಐ.ಎಂ. ವಿಜಯನ್, ಕರ್ನಾಟಕ ರಾಜ್ಯ ಫುಟ್ಬಾಲ್ ಸಂಸ್ಥೆಯ ಅಧ್ಯಕ್ಷ ಹ್ಯಾರಿಸ್, ಚೆಮ್ಮನ್ನೂರು ಜ್ಯುವೆಲ್ಲರ್ಸ್‌ನ ಬಾಬಿ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ನಾಕ್‌ಔಟ್ ಮಾದರಿಯಲ್ಲಿ ಪಂದ್ಯಾವಳಿ ನಡೆಯಲಿದ್ದು, ಪ್ರತಿನಿತ್ಯ ರಾತ್ರಿ 7.30ರಿಂದ 10.30 ಗಂಟೆಯವರೆಗೆ ಒಂದು ಪಂದ್ಯ ನಡೆಯಲಿದೆ. ಅಂತರಾಷ್ಟ್ರೀಯ ಫುಟ್ಬಾಲ್ ನಿಯಮಗಳ ಅನ್ವಯ ಪಂದ್ಯಗಳು ನಡೆಯಲಿರುವುದಾಗಿ ಸ್ಪಷ್ಟಪಡಿಸಿದರು. ಪಂದ್ಯಾವಳಿ 20 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ನಡೆಯಲಿದೆ. ಪಂದ್ಯಾವಳಿ ವೀಕ್ಷಣೆಗೆ ಗ್ಯಾಲರಿ ವ್ಯವಸ್ಥೆಯನ್ನು ಮಾಡಲಾಗುತ್ತದೆಂದು ಮಾಹಿತಿ ನೀಡಿದರು.

ಫುಟ್ಬಾಲ್ ಮೈದಾನಕ್ಕೆ ಪ್ರಯತ್ನ: ಕೊಡಗು ಜಿಲ್ಲಾ ಫುಟ್ಬಾಲ್ ಸಂಸ್ಥೆಯ ಕಾರ್ಯದರ್ಶಿ ಪಿ.ಎ. ನಾಗೇಶ್ ಮಾತನಾಡಿ, ಜಿಲ್ಲೆಯಲ್ಲಿ ಕೃತಕ ಹಾಸಿನ ಫುಟ್ಬಾಲ್ ಮೈದಾನ ನಿರ್ಮಾಣಕ್ಕೆ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಅಖಿಲ ಭಾರತ ಫುಟ್ಬಾಲ್ ಸಂಸ್ಥೆಯ ಪ್ರಮುಖರು ಹಾಗೂ ರಾಜ್ಯ ಸಂಸ್ಥೆಯ ಅಧ್ಯಕ್ಷ ಹ್ಯಾರಿಸ್ ಅವರು, ಕೊಡಗಿನಲ್ಲಿ ಅಗತ್ಯ ಜಾಗ ಇದ್ದಲ್ಲಿ ಕೃತಕ ಹಾಸಿನ ಫುಟ್ಬಾಲ್ ಮೈದಾನ ನಿರ್ಮಿಸಿ ಕೊಡುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಫುಟ್ಬಾಲ್ ಸಂಸ್ಥೆಯ ಅಧ್ಯಕ್ಷರಾದ ಪಾಣತ್ತಲೆ ಜಗದೀಶ್ ಮೊಣ್ಣಪ್ಪ, ಮಿಲನ್ಸ್ ಕ್ಲಬ್ ಅಧ್ಯಕ್ಷ ಲಿಜೇಶ್ ಎಂ.ಎಂ, ಕಾರ್ಯದರ್ಶಿ ವಿನು ಎಂ.ಎಂ, ಪಂದ್ಯಾವಳಿ ಉಸ್ತುವಾರಿ ಕೆ.ಎಂ. ಆಸಿಫ್ ಉಪಸ್ಥಿತರಿದ್ದರು.

ಸರ್ಕಾರಿ ಗೌರವಗಳೊಂದಿಗೆ ಯೋಧನ ಅಂತ್ಯಕ್ರಿಯೆ

ಗ್ರಾಮಸ್ಥರು, ಜನಪ್ರತಿನಿಧಿಗಳು, ಶಾಲಾ ವಿದ್ಯಾರ್ಥಿಗಳಿಂದ ಅಂತಿಮ ನಮನ

ಮಡಿಕೇರಿ, ಡಿ.9– ಅನಾರೋಗ್ಯದಿಂದ ಸಾವನ್ನಪ್ಪಿದ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ ಯೋಧ ಕೆ.ಕೆ.ಶಿಜು(48) ಅವರ ಅಂತ್ಯಕ್ರಿಯೆ ಸ್ವಗ್ರಾಮ ಕಡಗದಾಳು ಗ್ರಾಮದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.



ಜಾರ್ಖಂಡ್‌ನ ರಾಂಚಿಯಿಂದ ಯೋಧ ಕೆ.ಕೆ.ಶಿಜು ಅವರ ಪಾರ್ಥೀವ ಶರೀರವನ್ನು ವಿಶೇಷ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ತರಲಾಯಿತು. ಬಳಿಕ ಆ್ಯಂಬುಲೆನ್ಸ್ ಮೂಲಕ ಶುಕ್ರವಾರ ಹುಟ್ಟೂರು ಕಡಗದಾಳುವಿಗೆ ತರಲಾಯಿತು. ಸಾರ್ವಜನಿಕರಿಗೆ ಕೆ.ಕೆ.ಶಿಜು ಅವರ ಮೃತದೇಹದ ಅಂತಿಮ ದರ್ಶನ ಪಡೆಯಲು ಅವಕಾಶ ಮಾಡಿಕೊಡಲಾಗಿತ್ತು. ಶಿಜು ಅವರ ಕುಟುಂಬದ ಸದಸ್ಯರು, ಕಡಗದಾಳು ಗ್ರಾಮಸ್ಥರು, ಕಡಗದಾಳು ಸರಕಾರಿ ಶಾಲೆಯ ವಿದ್ಯಾರ್ಥಿಗಳು, ಗ್ರಾ.ಪಂ. ಜನಪ್ರತಿನಿಧಿಗಳು ಅಂತಿಮ ನಮನ ಸಲ್ಲಿಸಿದರು.

ಈ ವೇಳೆ ಕೊಡಗು ಜಿಲ್ಲಾಡಳಿತದ ಪರವಾಗಿ ಉಪವಿಭಾಗಾಧಿಕಾರಿ ಯತೀಶ್ ಉಲ್ಲಾಳ, ತಾಲೂಕು ಆಡಳಿತದ ಪರವಾಗಿ ಮಡಿಕೇರಿ ತಹಶೀಲ್ದಾರ್ ಮಹೇಶ್ ಅವರುಗಳು ಪುಷ್ಪ ನಮನ ಸಲ್ಲಿಸಿದರು. ಜಿಲ್ಲಾ ಪೊಲೀಸ್ ಸಶಸ್ತ್ರ ಪೊಲೀಸ್ ತುಕಡಿ ಗಾಳಿಯಲ್ಲಿ 3 ಸುತ್ತು ಗುಂಡು ಹಾರಿಸುವ ಮೂಲಕ ಸಕಲ ಸರಕಾರಿ ಗೌರವ ಸಲ್ಲಿಸಿತು.



ಕೇಂದ್ರೀಯ ಭದ್ರತಾ ಪಡೆಯ ಅಧಿಕಾರಿಗಳು ಯೋಧ ಕೆ.ಕೆ.ಶಿಜು ಅವರ ಮೃತದೇಹದ ಮೇಲೆ ಹೊದಿಸಲಾಗಿದ್ದ ತ್ರಿವರ್ಣ ಧ್ವಜವನ್ನು ತೆಗೆದು ಮೃತರ ತಾಯಿ ರಾಜಮ್ಮ ಅವರಿಗೆ ಹಸ್ತಾಂತರಿಸಿದರು. ತದನಂತರ ಅವರ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನಗಳನ್ನು ನಡೆಸಲಾಯಿತು. ಬಳಿಕ ತೆರೆದ ವಾಹನದಲ್ಲಿ ಮೃತದೇಹವನ್ನು ತುರುಕರಹಟ್ಟಿವರೆಗೆ ಮೆರವಣಿಗೆಯಲ್ಲಿ ಕೊಂಡೊಯ್ದು ಕಡಗದಾಳುವಿನ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಆ ಮೂಲಕ 23 ವರ್ಷಗಳ ಕಾಲ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸಿ ಉಸಿರು ನಿಲ್ಲಿಸಿದ ಯೋಧ ಕೆ.ಕೆ.ಶಿಜು ತಮ್ಮ ಹುಟ್ಟೂರಿನ ಮಣ್ಣಿನಲ್ಲಿ ಲೀನವಾದರು.

ವಿರಾಜಪೇಟೆಯಲ್ಲಿ ಒಳಾಂಗಣ ಕ್ರೀಡಾಂಗಣ ಉದ್ಘಾಟನೆ

ವಿರಾಜಪೇಟೆ, ಡಿ. 9– ಕೊಡಗು ಜಿಲ್ಲೆ ಕ್ರೀಡೆಯ ತವರೂರು. ಹಾಕಿಯ ಜೊತೆಗೆ ಇತರ ಕ್ರೀಡೆಯಲ್ಲಿಯೂ ಕ್ರೀಡಾ ಪ್ರತಿಭೆಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಹೊರಹೊಮ್ಮುವ ಕ್ರೀಡಾ ಪ್ರತಿಭೆಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ ಎಂದು ಶಾಸಕ ಬೋಪಯ್ಯ ತಿಳಿಸಿದ್ದಾರೆ.

ವಿರಾಜಪೇಟೆ ಜೂನಿಯರ್ ಕಾಲೇಜು ಬಳಿ ನೂತನವಾಗಿ ನಿರ್ಮಿಸಿರುವ 6 ಕೋಟಿ ರೂ. ವೆಚ್ಚದ ಒಳಾಂಗಣ ಕ್ರೀಡಾಂಗಣವನ್ನು ಉದ್ಘಾಟಿಸಿ ಮಾತನಾಡಿದ ಅವರು 2012ರಲ್ಲಿ ನಮ್ಮ ಸರಕಾರ ಇದ್ದಾಗ ಈ ಕ್ರೀಡಾಂಗಣವನ್ನು ನಿರ್ಮಿಸಲು ನಾಲ್ಕು ಕೋಟಿ ಅನುದಾನ ನೀಡಿತ್ತು. ಇದೇ ರೀತಿ ಪೊನ್ನಂಪೇಟೆ ಟರ್ಫ್ ಮೈದಾನಕ್ಕೂ ಬಜೆಟ್‌ನಲ್ಲಿ ಅನುದಾನ ನೀಡಲಾಗಿತ್ತು. ಕಾರಣಾಂತರದಿಂದ ಆ ಕ್ರೀಡಾಂಗಣದ ಕೆಲಸವು ತಡವಾಗಿದೆ. ಆದರೆ ಇಲ್ಲಿನ ಒಳಾಂಗಣ ಕ್ರೀಡಾಂಗಣ ಬಹುತೇಕ ಪೂರ್ಣವಾಗಿದೆ ಎಂದರು.

ಜಿಲ್ಲಾಧಿಕಾರಿ ನೇತೃತ್ವದಲ್ಲಿ ಶೀಘ್ರವಾಗಿ ಸಮಿತಿ ರಚಿಸಿ ನಿರ್ವಹಣೆಗಾಗಿ ಕ್ರಮ ವಹಿಸಲಾಗುವುದು. ಈ ಸಮಿತಿಯಲ್ಲಿ ಓರ್ವ ಕ್ರೀಡಾ ಪ್ರತಿನಿಧಿ ಇರಬೇಕು ಎಂದ ಬೋಪಯ್ಯ ಅವರು ಪೊನ್ನಂಪೇಟೆ ಟರ್ಫ್ ಹಾಕಿ ಮೈದಾನಕ್ಕೆ ಪಾಡಂಡ ಕುಟುಂಬದ ಹೆಸರಿಡುವಂತೆ ಅನುಮೋದನೆ ದೊರೆತಿದೆ ಎಂದರು.



ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಕಿ ಸಂಸ್ಥೆಯ ಅಧ್ಯಕ್ಷ ಡಾ. ಮುಕ್ಕಾಟೀರ ಕಾರ್ಯಪ್ಪ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಈ ಕ್ರೀಡಾಂಗಣವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕು. ಕ್ರೀಡಾ ಪ್ರತಿಭೆಗಳು ಸಣ್ಣ–ಪುಟ್ಟ ಸ್ಥಳದಿಂದ ಆಟವಾಡಲು ಪ್ರಾರಂಭಿಸುತ್ತಾರೆ. ಕೊಡಗಿನಲ್ಲಿ ಅನೇಕ ಕ್ರೀಡಾ ಪ್ರತಿಭೆಗಳು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿಯು ಹೆಸರು ಗಳಿಸಿದ್ದಾರೆ. ಇಲ್ಲಿ ಕ್ರೀಡಾಂಗಣ ನಿರ್ಮಿಸಿರುವುದು ಉತ್ತಮ ಕಾರ್ಯವಾಗಿದೆ ಎಂದರು.

ನಾವು ಕೂಡ ಪ್ರತಿ ವರ್ಷ ಬೇಸಿಗೆ ಕಾಲದಲ್ಲಿ ಹಾಕಿ ತರಬೇತಿ ಕಾರ್ಯಕ್ರಮ ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದೇವೆ. ಈ ಮೂಲಕ ಮತ್ತಷ್ಟು ಪ್ರತಿಭೆಗಳು ಹೊರ ಬರುವಂತಾಗಲಿ. ಯಾವುದೇ ಕಾರಣಕ್ಕೂ ಇಲ್ಲಿ ರಾಜಕೀಯ ಬೇಡ. ಶಾಲಾ ಮಕ್ಕಳಿಗೆ ಉತ್ತಮ ಅವಕಾಶ ನೀಡಿ ಕ್ರೀಡಾ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಲಿ ಎಂದರು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ತಾತಂಡ ಜ್ಯೋತಿ ಸಭೆಯಲ್ಲಿ ಮಾತನಾಡಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ವಿಸ್ಮಯ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿದರು. ವೇದಿಕೆಯಲ್ಲಿ ಜಿ.ಪಂ, ಮಾಜಿ ಸದಸ್ಯ ಶಶಿ ಸುಬ್ರಮಣಿ, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷೆ ಯಶೋಧ, ಸ್ಥಳೀಯ ವಾರ್ಡ್ ಸದಸ್ಯೆ ಆಶಾ ಸುಬ್ಬಯ್ಯ ಮತ್ತಿತರರು ಉಪಸ್ಥಿತರಿದ್ದರು.

ವೇಣುಗೋಪಾಲ ಸ್ವಾಮಿ ದೀಪೋತ್ಸವಕ್ಕೆ ಯದುವೀರ ಚಾಲನೆ

ಚಾಮರಾಜನಗರ, ಡಿ.9– ತಾಲೂಕಿನ ಐತಿಹಾಸಿಕ, ಪುರಾಣ ಪ್ರಸಿದ್ಧ ಗ್ರಾಮವಾದ ಹರದನಹಳ್ಳಿ ವೇಣುಗೋಪಾಲ ಸ್ವಾಮಿ ದೇವಸ್ಥಾನದ ವಿಷ್ಣು ದೀಪೋತ್ಸವ ಬಹಳ ವಿಜೃಂಭಣೆಯಿಂದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಿತು.

ಮೈಸೂರು ಸಂಸ್ಥಾನದ ಮಹಾರಾಜ ಶ್ರೀ ಯದುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಅವರು ದೀಪೋತ್ಸವವನ್ನು ಉದ್ಘಾಟಿಸಿ ಶುಭ ಕೋರಿದರು. ಗ್ರಾಮಕ್ಕೆ ಆಗಮಿಸಿದ ಮೈಸೂರು ಮಹಾರಾಜ ಯದುವೀರ ಒಡೆಯರ್ ಅವರನ್ನು ಕೋಟೆ ಹೆಬ್ಬಾಗಿಲಿನಿಂದ ಡೊಳ್ಳು ಕುಣಿತ, ವೀರಗಾಸೆ, ವೀರಭದ್ರ ಕುಣಿತ, ಹುಲಿ ಕುಣಿತ, ಭಜನೆ ಮುಂತಾದ ಸಾಂಸ್ಕೃತಿಕ ತಂಡಗಳೊಂದಿಗೆ ಸಹಸ್ರಾರು ಜನ ಭಕ್ತಿಪೂರ್ವಕವಾಗಿ ಪೂರ್ಣಕುಂಭ ಸ್ವಾಗತ ನೀಡಿದರು. ಊರಿನ ವೇಣುಗೋಪಾಲ ಸ್ವಾಮಿ ದೇವಸ್ಥಾನದವರೆಗೂ ಪಾದಯಾತ್ರೆ ನಡೆಸಿ ಆಗಮಿಸಿದರು.



ವೇಣುಗೋಪಾಲ ಸ್ವಾಮಿ ದರ್ಶನ ಹಾಗೂ ಉತ್ಸವ ಮೂರ್ತಿಯ ಮೆರವಣಿಗೆಯಲ್ಲಿ ಪಾಲ್ಗೊಂಡು ದೀಪೋತ್ಸವ ಉದ್ಘಾಟಿಸಿ ಗ್ರಾಮದ ಜನತೆ ದೇವಾಲಯವನ್ನು ಪುನರುಜ್ಜೀವನಗೊಳಿಸಿ ಅಚ್ಚುಕಟ್ಟಾಗಿ ರೂಪಿಸಿದ್ದಾರೆ. ಸರ್ವರಿಗೂ ಭಗವಂತ ಒಳಿತು ಮಾಡಲಿ ಎಂದರು.


ಮೈಸೂರು ಅರಮನೆ ಮಂಡಳಿಯ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯಂ ಮಾತನಾಡಿ ಹರದನಹಳ್ಳಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಪುಣ್ಯಭೂಮಿ. ಇಲ್ಲಿನ ವೇಣುಗೋಪಾಲ ಸ್ವಾಮಿ ದೇವಸ್ಥಾನವನ್ನು ಯುವಕರು ಮತ್ತು ಗ್ರಾಮಸ್ಥರು ಸ್ವಇಚ್ಛೆಯಿಂದ ಹಲವು ಧಾರ್ಮಿಕ ಕಾರ್ಯಕ್ರಮಗಳನ್ನು ರೂಪಿಸಿ ಇತಿಹಾಸ, ಪರಂಪರೆ, ದೇವಾಲಯಗಳ ಸಂರಕ್ಷಣೆ ಮಾಡಿರುವ ಕಾರ್ಯ ಅಭಿನಂದನೆಯ. ಭಗವಂತನ ಕಾರ್ಯದಲ್ಲಿ ಶ್ರದ್ಧೆ, ಭಕ್ತಿ ಸೇವೆ,ಸತ್ಕಾರ್ಯ ಗುಣಗಳ ಮೂಲಕ ಮಾನವ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳೋಣ ಎಂದು ತಿಳಿಸಿದರು.

ದೀಪೋತ್ಸವ ಕಾರ್ಯಕ್ರಮದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಬಿಕೆ ದಾನೇಶ್ವರಿ, ಜಿಲ್ಲಾ ನ್ಯಾಯಾಧೀಶರಾದ ಭಾರತಿ, ಶ್ರೀಧರ್, ಚಂಪಕ, ಹೊನ್ನುಸ್ವಾಮಿ ಎ ಎಸ್ ಪಿ ಸುಂದರರಾಜ್ ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆ ಕೊಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್, ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತ ಸುರೇಶ್ ಎನ್ ಋಗ್ವೇದಿ, ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ರಾಮಚಂದ್ರ, ಕಾಡ ಅಧ್ಯಕ್ಷ ನಿಜಗುಣ ರಾಜು, ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷ ನಾಗಶ್ರೀ ಪ್ರತಾಪ್, ಸ್ಥಳ ಪುರೋಹಿತರಾದ ಶೇಷಾದ್ರಿ ಕಡಂಬಿ, ಶ್ರೀ ವೇಣುಗೋಪಾಲ ಸ್ವಾಮಿ ಭಕ್ತರಾದ ಮಧು ಮೋಹನ್, ಶಂಕರ, ವೆಂಕಟೇಶ್, ನಾಗಶಯನ ಸುಬ್ರಹ್ಮಣ್ಯ, ಸರ್ವ ಧರ್ಮದ ಜನಾಂಗದ ಯಜಮಾನರು ಸಾರ್ವಜನಿಕರು, ಮಹಿಳೆಯರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಹರದನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಸರ್ವಜನರ ಪರವಾಗಿ ಶ್ರೀ ಶ್ರೀ ಯಧುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಅವರನ್ನು ವೇದ ಘೋಷಗಳೊಂದಿಗೆ ಆಶೀರ್ವಾದಪೂರ್ವಕವಾಗಿ ಗೌರವಿಸಲಾಯಿತು.

ಡಿ. 12ಕ್ಕೆ ಮುಖ್ಯಮಂತ್ರಿಗಳಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ

ಚಾಮರಾಜನಗರ, ಡಿ.9– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಚಾಮರಾಜನಗರ ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಸಮಾರಂಭವನ್ನು ಡಿ.12ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸುವರು. ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ, ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವಥ್ ನಾರಾಯಣ, ಸಾರಿಗೆ ಸಚಿವ ಬಿ. ಶ್ರೀರಾಮುಲು, ಕಂದಾಯ ಸಚಿವ ಆರ್. ಅಶೋಕ, ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ, ಪಶು ಸಂಗೋಪನೆ ಇಲಾಖೆ ಸಚಿವ ಪ್ರಭು ಬಿ ಚೌವ್ಹಾಣ್, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಲೋಕೋಪಯೋಗಿ ಇಲಾಖೆ ಸಚಿವ ಸಿ.ಸಿ. ಪಾಟೀಲ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಡಾ. ಕೆ. ಸುಧಾಕರ್, ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ (ಬೈರತಿ), ಕೃಷಿ ಸಚಿವ ಬಿ.ಸಿ. ಪಾಟೀಲ್, ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಮುನಿರತ್ನ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವ ಆಚಾರ್ ಹಾಲಪ್ಪ ಬಸಪ್ಪ, ಇಂಧನ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ. ಸುನೀಲ್ ಕುಮಾರ್ ಅವರು ಘನ ಉಪಸ್ಥಿತಿ ವಹಿಸುವರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ವಿ. ಶ್ರೀನಿವಾಸಪ್ರಸಾದ್, ಶಾಸಕರಾದ ಸಿ.ಎಸ್. ನಿರಂಜನ್‌ಕುಮಾರ್, ಎನ್. ಮಹೇಶ್, ಆರ್. ನರೇಂದ್ರ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮರಿತಿಬ್ಬೇಗೌಡ, ಮಧು ಜಿ. ಮಾದೇಗೌಡ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ನಗರಸಭೆ ಅಧ್ಯಕ್ಷ ಸಿ.ಎಂ. ಆಶಾ, ಸದಸ್ಯರಾದ ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.9– ಸೋಮವಾರಪೇಟೆ ಫೀಡರ್, ಟೌನ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಡಿ.10ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸೋಮವಾರಪೇಟೆ, ಮೂಡ್ಲುಪುರ, ಮಲ್ಲಯ್ಯನಪುರ, ಮಹಾಜಪುರ, ಉತ್ತುವಳ್ಳಿ ಕೈಗಾರಿಕಾ ಪ್ರದೇಶ, ಗಾಳಿಪುರ, ಮೆಡಿಕಲ್ ಕಾಲೇಜು ಯಡಪುರ, ಉಪ್ಪಾರಬೀದಿ, ರೈಲ್ವೆ ಬಡಾವಣೆ, ಸತ್ತಿರಸ್ತೆ, ಚಾಮರಾಜೇಶ್ವರ ದೇವಸ್ಥಾನ ಸುತ್ತಮುತ್ತ, ಶಂಕರಪುರ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಅಮಚವಾಡಿಯಲ್ಲಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಒತ್ತಾಯಿಸಿ ಪ್ರತಿಭಟನೆ

ಬೇಡಿಕೆ ಈಡೇರದಿದ್ದರೆ ಮತದಾನ ಬಹಿಷ್ಕಾರ



ಚಾಮರಾಜನಗರ, ಡಿ.9– ತಾಲೂಕಿನ ಅಮಚವಾಡಿ ಗ್ರಾಮದ ನಾಯಕರ ರಾಜಬೀದಿ ರಸ್ತೆ ದುರಸ್ತಿ ಹಾಗೂ ಚರಂಡಿ ನಿರ್ಮಾಣ ಮಾಡುವಂತೆ ಒತ್ತಾಯಿಸಿ ಗ್ರಾಪಂ ಅಧ್ಯಕ್ಷ ಮಹೇಂದ್ರ ಅವರ ನೇತೃತ್ವದಲ್ಲಿ ಗ್ರಾಮಸ್ಥರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಗ್ರಾಮದ ನಾಯಕ ಬೀದಿಯಲ್ಲಿ ಹದಗೆಟ್ಟಿರುವ ರಸ್ತೆ ಬಳಿ ಸಮಾವೇಶಗೊಂಡ ಪ್ರತಿಭಟನಾಕಾರರು ಆಗಲಿ ಆಗಲಿ ರಸ್ತೆ, ಚರಂಡಿ ನಿರ್ಮಾಣವಾಗಲಿ ಎಂದು ಘೋಷಣೆ ಕೂಗಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಗ್ರಾ.ಪಂ.ಅಧ್ಯಕ್ಷ ಮಹೇಂದ್ರ ಮಾತನಾಡಿ, ಗ್ರಾಮದ ನಾಯಕರ ರಾಜಬೀದಿಯಲ್ಲಿ ರಸ್ತೆ, ಚರಂಡಿ ಹಾಳಾಗಿದ್ದು, ಗ್ರಾಮಸ್ಥರು ರಸ್ತೆಯಲ್ಲಿ ಓಡಾಡುವುದು ತುಂಬಾ ಕಷ್ಟವಾಗಿದೆ. ಈ ರಸ್ತೆಯು ಗ್ರಾಮದ ಪ್ರಮುಖ ರಸ್ತೆಯಾಗಿದ್ದು, ಈ ರಸ್ತೆಯನ್ನು ದುರಸ್ಥಿಪಡಿಸಿ ಕೊಡುವಂತೆ ಕ್ಷೇತ್ರದ ಶಾಸಕರಾದ ಸಿ.ಪುಟ್ಟರಂಗಶೆಟ್ಟರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಮಾಜಿ ಶಾಸಕ ವಾಟಾಳ್‌ನಾಗರಾಜ್ ಅವರ ಅವಧಿಯಲ್ಲಿ ಈ ರಸ್ತೆಯನ್ನು ಡಾಂಬರು ರಸ್ತೆಯನ್ನಾಗಿ ನಿರ್ಮಾಣ ಮಾಡಲಾಗಿತ್ತು ಈಗ ಡಾಂಬರು ಕಿತ್ತುಹೋಗಿದ್ದು, ಜೆಲ್ಲಿಕಲ್ಲುಗಳು ಮೇಲಕ್ಕೆದ್ದು ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಇಲ್ಲಿ ಕಳೆದ 15 ವರ್ಷಗಳಿಂದ ಯಾವುದೇ ಅಭಿವೃದ್ಧಿಯೂ ಆಗಿಲ್ಲ, ನಮ್ಮ ಬೀದಿಯ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ ಎಂದು ದೂರಿದರು.

ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ : ಕಾಂಗ್ರೆಸ್, ಬಿಜೆಪಿ ಯಾವುದೇ ಪಕ್ಷಗಳು ನಮ್ಮನ್ನು ವೋಟು ಬ್ಯಾಂಕ್ ಆಗಿ ಮಾಡಿಕೊಂಡಿದ್ದಾರೇ ಹೊರತು ನಮ್ಮ ಬೀದಿಯ ರಸ್ತೆ ಚರಂಡಿ ನಿರ್ಮಾಣಕ್ಕೆ ಯಾವುದೇ ಅನುದಾನ ನೀಡಿಲ್ಲ. ತಕ್ಷಣದಲ್ಲೇ ಈ ರಸ್ತೆ ಅಭಿವೃದ್ಧಿ ಪಡಿಸದಿದ್ದರೆ ಮುಂಬರುವ ಚುನಾವಣೆಯಲ್ಲಿ ಮತದಾನ ಬಹಿಷ್ಕಾರ ಮಾಡಲಾಗುವುದು, ಯಾವುದೇ ರಾಜಕೀಯ ಪಕ್ಷಗಳ ಮುಖಂಡರುಗಳನ್ನು ಬೀದಿಯೊಳಗೆ ಬರಲು ಬಿಡುವುದಿಲ್ಲ, ತಕ್ಷಣದಲ್ಲೇ ಜಿಲ್ಲಾಡಳಿತಕ್ಕೆ ಮುತ್ತಿಗೆ ಹಾಕುವುದಾಗಿ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಗ್ರಾ.ಪಂ.ಸದಸ್ಯರಾದ ಬಿ.ಮಾದೇಶ್, ಪುಟ್ಟಸ್ವಾಮಿ, ಮಲ್ಲೇಶ್, ಯಜಮಾನರಾದ ಶೇಷನಾಯಕ, ಕತ್ತಿನಾಯಕ, ವೀರಣ್ಣನಾಯಕ, ರಾಜಣ್ಣನಾಯಕ, ಮುಖಂಡರಾದ ಕೆಂಪನಾಯಕ, ಡಿ.ಸ್ವಾಮಿ, ಶೋಭ, ಭಾಗ್ಯಮ್ಮ, ರಾಜೇಶ್ವರಿ, ಪುಟ್ಟಸಿದ್ದಮ್ಮ, ಚಿಕ್ಕಮ್ಮ, ಮಹದೇವಮ್ಮ ಇತರರು ಭಾಗವಹಿಸಿದ್ದರು.

ಜನಾರ್ಧನಸ್ವಾಮಿ ದೇವಸ್ಥಾನದಲ್ಲಿ ವಿಷ್ಣು ದೀಪೋತ್ಸವ

ಚಾಮರಾಜನಗರ, ಡಿ.9– ನಗರದ ರಾಮಸಮುದ್ರ ಹರಳುಕೋಟೆ ಜನಾರ್ಧನ ಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಸಂಜೆ ವಿಷ್ಣು ದೀಪೋತ್ಸವ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಜನಾರ್ಧನ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ವಿಷ್ಣು ದೀಪೋತ್ಸವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ ನೆರವೇರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು ನಾವು ಹಚ್ಚುವ ದೀಪದ ಬೆಳಕಿನಿಂದ ನಮ್ಮೊಳಗಿರುವ ಅಜ್ಞಾನ, ಅವಿವೇಕ, ದುಷ್ಟ ಗುಣಗಳು ನಾಶವಾಗಿ, ಸದ್ಗುಣಗಳು ಹೆಚ್ಚಾಗಿ ನಮ್ಮಲ್ಲಿ ಸಮೃದ್ಧಿ, ಸಂಪ್ರೀತಿ, ಸಮಾನತೆ ತುಂಬಲಿ. ಸರ್ವರಿಗೂ ಭಗವಂತ ಒಳಿತನ್ನು ಮಾಡಲಿ ಎಂದರು.

ಜನಾರ್ಧನ ಪ್ರತಿಷ್ಠಾನದ ಅರ್ಚಕ ಅನಂತ ಪ್ರಸಾದ್ ಮಾತನಾಡಿ ಕಾರ್ತಿಕ ಮಾಸದ ನಂತರ ಬರುವ ಶಿವ ದೀಪೋತ್ಸವ, ವಿಷ್ಣು ದೀಪೋತ್ಸವಕ್ಕೆ ಪುರಾಣಗಳಲ್ಲಿ ವಿಶಿಷ್ಟವಾದ ಸ್ಥಾನವಿದೆ, ದೇಶಾದ್ಯಂತ ಈ ದೀಪೋತ್ಸವಗಳನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದರು.

ಜನಾರ್ಧನಸ್ವಾಮಿ ಉತ್ಸವ ಮೂರ್ತಿಯನ್ನು ದೇವಸ್ಥಾನದ ಒಳಾವರಣದಿಂದ ದೀಪೋತ್ಸವದ ಸ್ಥಳಕ್ಕೆ ಗೋವಿಂದನ ನಾಮಸ್ಮರಣೆ ಮಾಡುತ್ತ ಒತ್ತು ತರಲಾಯಿತು.

ದೀಪೋತ್ಸವದಲ್ಲಿ ಮಹದೇವಪ್ಪ, ತೂಕ ಮತ್ತು ಅಳತೆ ಇಲಾಖೆಯ ಇನ್ಸ್‌ಪೆಕ್ಟರ್ ನಾಗೇಂದ್ರ ಸೇರಿದಂತೆ ದೇವಸ್ಥಾನದ ಭಕ್ತರು ಭಾಗವಹಿಸಿದ್ದರು.

ಎನ್‌ಇಪಿ ಫಲಿತಾಂಶಕ್ಕೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ, ಡಿ.9– ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಮೊದಲನೇ ಬ್ಯಾಚ್‌ನ ಪದವಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡ ವಿದ್ಯಾರ್ಥಿಗಳು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಈಗಾಗಲೇ ಎನ್‌ಇಪಿ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳು ಮುಂದಿನ ಹಂತಕ್ಕೆ ತಲುಪಿದ್ದಾರೆ. ಆದರೆ, ಮೊದಲ ವರ್ಷದ ಎರಡನೇ ಸೆಮಿಸ್ಟರ್ ಫಲಿತಾಂಶ ಇನ್ನೂ ಪ್ರಕಟಗೊಂಡಿಲ್ಲ. ಕೂಡಲೇ ಮೈಸೂರು ವಿಶ್ವವಿದ್ಯಾನಿಲಯ ಫಲಿತಾಂಶ ಪ್ರಕಟಿಸಬೇಕು ಎಂದು ಆಗ್ರಹಿಸಿದರು.



ವಿದ್ಯಾರ್ಥಿ ವೇತನ ಬಿಡುಗಡೆಯಾಗಿಲ್ಲ. ಇದರಿಂದ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ. ನೂರಾರು ಬಡ ಕುಟುಂಬದ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣದ ಪೂರೈಕೆಗಾಗಿ ವಿದ್ಯಾರ್ಥಿ ವೇತನದ ಮೇಲೆ ಅವಲಂಬಿತರಾಗಿರುತ್ತಾರೆ. ವಿದ್ಯಾರ್ಥಿ ವೇತನ ಸಿಗದಿದ್ದರೆ ಅವರಲ್ಲಿ ಬಹುಪಾಲು ವಿದ್ಯಾರ್ಥಿಗಳು ಶಿಕ್ಷಣವನ್ನು ಪೂರೈಸುವುದೇ ಕಷ್ಟಕರವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೂಡಲೇ ಸರ್ಕಾರ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಬೇಕು. ಅಲ್ಲದೇ ರಾಜ್ಯದಲ್ಲಿ ಪದವಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹಾಸ್ಟೆಲ್ ಸಂಖ್ಯೆಗಳನ್ನು ಹೆಚ್ಚಿಸುವ ಜೊತೆಗೆ ದಾಖಲಾತಿಯನ್ನು ಹೆಚ್ಚಿಸಬೇಕು. ಅಲ್ಲದೇ ಚಾಮರಾಜನಗರದಲ್ಲಿ ಸ್ಥಾಪನೆಯಾಗುತ್ತಿರುವ ನೂತನ ವಿಶ್ವ ವಿದ್ಯಾಲಯದ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ತೆಗೆದುಕೊಳ್ಳಬೇಕು. ಸೆಲ್ಫ್ ಫೈನಾನ್ಸ್ ಕೋರ್ಸ್‌ಗಳನ್ನು ಯಾವುದೇ ಕಾರಣಕ್ಕೂ ಜಾರಿಗೆ ತರಬಾರದು ಎಂದು ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಉಪ ತಹಸಿಲ್ದಾರ್ ರಂಗರಾಜು ಅವರ ಮೂಲಕ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಸಂಚಾಲಕಿ ಆಸಿಯಾ ಬೇಗಂ, ರಚಿತಾ, ಲಕ್ಷ್ಮೀ, ಬಿಂದುಶ್ರೀ, ರಕ್ಷಿತಾ, ಅನಿತಾ, ಸುಚಿತ್ರಾ, ಶಾಲಿನಿ, ಅಪೂರ್ವ, ಚಂದನಾ, ಭಾಗ್ಯಲಕ್ಷ್ಮೀ ಸೇರಿದಂತೆ ಇತರರಿದ್ದರು.

ಮ್ಯಾನ್ಯುವೆಲ್ ಸ್ಕ್ಯಾವೆಂಜರ್‌ಗಳ ಅಂತಿಮ ಪಟ್ಟಿ ಪ್ರಕಟ

ಚಾಮರಾಜನಗರ, ಡಿ.9– ಚಾಮರಾಜನಗರ ಜಿಲ್ಲೆಯ 5 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 138 ಮ್ಯಾನ್ಯುವೆಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿರುವ ಅಂತಿಮ ಪಟ್ಟಿಯನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ಹಾಗೂ ಜಿಲ್ಲೆಯ 5 ನಗರ ಸ್ಥಳೀಯ ಸಂಸ್ಥೆಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನ.10 ರಂದು ನಡೆದ ಜಿಲ್ಲಾ ಮಟ್ಟದ ಮ್ಯಾನ್ಯುವೆಲ್ ಸ್ಕ್ಯಾವೆಂಜರ್ ಸಮೀಕ್ಷಾ ಸಮಿತಿ ಸಭೆಯಲ್ಲಿ ಮಂಡಿಸಿ ಜಿಲ್ಲೆಯ 5 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 138 ಮ್ಯಾನ್ಯುವೆಲ್ ಸ್ಕ್ಯಾವೆಂಜರ್‌ಗಳ ಅನುಮೋದನೆ ಪಡೆಯಲಾಗಿರುವ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟೇಲ್ ಮಾದಶೆಟ್ಟಿ ನಿಧನ

ಯಳಂದೂರು, ಡಿ.9– ಚಾಮರಾಜನಗರ ತಾಲೂಕಿನ ಬಂಡಿಗೆರೆ ಗ್ರಾಮದ ಮಾಜಿ ಪ್ರಧಾನರು, ಪಟೇಲರು ಆದ ಎಸ್.ಮಾದಶೆಟ್ಟಿ (90) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ತೋಟದಲ್ಲಿ ಶುಕ್ರವಾರ ನಡೆಯಿತು. ಮೃತರು ಉಪ್ಪಾರ ಸಮಾಜದ ಹಿರಿಯರು, ಹರದನಹಳ್ಳಿ ಮಂಡಲ ಪಂಚಾಯಿತಿಯಲ್ಲಿ ಪ್ರಧಾನರಾಗಿ, ಚಾಮರಾಜನಗರ ತಾಲೂಕು ಬೋರ್ಡ್‌ನ ಸದಸ್ಯರಾಗಿ, ವೆಂಕಟಯ್ಯನ ಛತ್ರದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಹಲವಾರು ಸಾಮಾಜಿಕ ಕಾರ್ಯಗಳನ್ನು ಮಾಡಿರುತ್ತಾರೆ.



ಮೈಸೂರು ಮಿತ್ರ

ಭತ್ತ, ರಾಗಿ ಕಟಾವು ಯಂತ್ರಗಳ ದರ ನಿಗದಿ



ಮೈಸೂರು,ಡಿ.9(ಆರ್‌ಕೆ)–ರೈತರು ಜಮೀನುಗಳಲ್ಲಿ ಬೆಳೆದಿರುವ ಭತ್ತ ಮತ್ತು ರಾಗಿ ಕಟಾವು ಮಾಡಲು ಯಂತ್ರಗಳ ಬಾಡಿಗೆ ದರವನ್ನು ಜಿಲ್ಲಾಧಿಕಾರಿಗಳು ನಿಗದಿಪಡಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರೈತ ಮುಖಂಡರು, ಕೃಷಿ ಇಲಾಖೆ, ಪ್ರಾದೇಶಿಕ ಸಾರಿಗೆ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ ಡಾ.ಕೆ.ವಿ.ರಾಜೇಂದ್ರ, ಚೈನ್ ಮಾದರಿಯ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ 2,500 ರೂ., ಟೈರ್ ಯಂತ್ರಕ್ಕೆ 2,000 ರೂ. ಹಾಗೂ ಟೈರ್ ಮಾದರಿಯ ಸಾಮಾನ್ಯ ಯಂತ್ರಕ್ಕೆ 1,800 ರೂ. ಬಾಡಿಗೆ ದರವನ್ನು ನಿಗದಿಪಡಿಸಿದರು.

ರಾಗಿ ಕಟಾವು ಯಂತ್ರಕ್ಕೆ ಗಂಟೆಗೆ 2,900 ರೂ.ಗಳನ್ನು ನಿಗದಿಪಡಿಸಲಾಗಿದ್ದು, ಅತಿವೃಷ್ಟಿ ಸಂಕಷ್ಟದ ಪರಿಸ್ಥಿತಿಯಲ್ಲಿ ಕಟಾವು ಯಂತ್ರದ ಮಾಲೀಕರು ಸಹಕರಿಸುವಂತೆ ಕೋರಲಾಗಿದೆ. ನಿಗದಿಗಿಂತ ಹೆಚ್ಚಿನ ಬಾಡಿಗೆಗೆ ಒತ್ತಾಯಿಸಿದಲ್ಲಿ ಕಟಾವು ಯಂತ್ರದ ಮಾಲೀಕರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ವಹಿಸುವಂತೆಯೂ ಅಧಿಕಾರಿಗಳಿಗೆ ಸೂಚಿಸಿದರು. ತಮಿಳುನಾಡಿನಿಂದ ಬರುವ ಕಟಾವು ಯಂತ್ರದ ಮಾಲೀಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಪೊಲೀಸ್ ಮತ್ತು ಆರ್‌ಟಿಓ ಅಧಿಕಾರಿಗಳು ಅನಗತ್ಯ ಕಿರುಕುಳ ನೀಡಬಾರದು ಎಂದ ಡಿಸಿ, ರೈತರ ಹಿತದೃಷ್ಟಿಯಿಂದ ಸಹಕರಿಸುವಂತೆಯೂ ತಿಳಿಸಿದರು. ರೈತ ಮುಖಂಡರಾದ ಕೆ.ಕುಮಾರಸ್ವಾಮಿ, ಕೆ.ಬಿ.ಲಿಂಗರಾಜು, ವಿದ್ಯಾಸಾಗರ್, ಕುರುಬೂರು ಸಿದ್ದೇಶ್, ಕೆ.ಎಸ್.ಸ್ವಾಮಿಗೌಡ, ಸತೀಶ್, ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಅತಿಥಿ ಶಿಕ್ಷಕರಿಗೆ ಅರ್ಜಿ ಆಹ್ವಾನ

ಮೈಸೂರು, ಡಿ.9– 2022–23ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೌಲಾನ ಆಜಾದ್ ಮಾದರಿ ಶಾಲೆ, ರಾಜೇಂದ್ರ ನಗರ ಶಾಲೆಗೆ ಆಂಗ್ಲ ಭಾಷಾ ಬೋಧನೆಗಾಗಿ ಅತಿಥಿ ಶಿಕ್ಷಕರು ಬೇಕಾಗಿರುವ ಕಾರಣ ಜಿಲ್ಲಾ ಕಚೇರಿ ಮೈಸೂರು ವತಿಯಿಂದ ಅರ್ಜಿ ಆಹ್ವಾನಿಸಲಾಗಿದ್ದು, MA, B.Ed(English) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಡಿ.17 ಕೊನೆಯ ದಿನಾಂಕವಾಗಿರುತ್ತದೆ. ಮಾಹಿತಿಗಾಗಿ ದಂಡಿನಮಾರಮ್ಮ ದೇವಸ್ಥಾನದ ಎದುರು ಇರುವ ಮೌಲಾನ ಆಜಾದ್ ಭವನದ ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಥವಾ ದೂ.ಸಂ.: 0821–2422088 ಅನ್ನು ಸಂಪರ್ಕಿಸಬಹುದು.

ಜಾಮೀನಿಗೆ ನಕಲಿ ಆರ್‌ಟಿಸಿ

ಗಾಂಜಾ ಪ್ರಕರಣದ ಆರೋಪಿ, ಆತನಿಗೆ ಜಾಮೀನು ನೀಡಿದವನ ವಿರುದ್ಧ ಪ್ರಕರಣ

ಮೈಸೂರು,ಡಿ.9–ಗಾಂಜಾ ಪ್ರಕರಣದಲ್ಲಿ ಬಂಧಿಸಲ್ಪಟ್ಟಿದ್ದ ಆರೋಪಿಗೆ ನ್ಯಾಯಾಲಯದಲ್ಲಿ ನಕಲಿ ದಾಖಲೆ ನೀಡಿ ಜಾಮೀನು ಕೊಡಿಸಿರುವ ಬಗ್ಗೆ ವರದಿಯಾಗಿದೆ.

2021ರಲ್ಲಿ ಗಾಂಜಾ ಪ್ರಕರಣದಲ್ಲಿ ಮೈಸೂರು ನಗರ ಸೆನ್ ಪೊಲೀಸರಿಂದ ಬಂಧಿಸಲ್ಪಟ್ಟಿದ್ದ ಇತೇಶಾಮ್ ಅಲಿಯಾಸ್ ಶಾಮ್(32) ಎಂಬಾತನಿಗೆ ಬೆಂಗಳೂರಿನ ತಿಲಕ್‌ನಗರ ನಿವಾಸಿ ಅಬ್ದುಲ್ ಅಜೀಂ(40) ಜಾಮೀನು ನೀಡಿದ್ದ. ಈ ವೇಳೆ ಜಾಮೀನಿಗಾಗಿ ಮೈಸೂರಿನ ಪಿಡಿಜೆ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರ್‌ಟಿಸಿ ನಕಲಿ ಎಂಬುದು ಗೊತ್ತಾಗಿದೆ. ಅಬ್ದುಲ್ ಅಜೀಂ ತನ್ನ ಜಮೀನು ಎಂದು ಬೇರೆಯವರಿಗೆ ಸೇರಿದ ಬೆಂಗಳೂರಿನ ಯಲಹಂಕದ ದೊಡ್ಡಬೆಟ್ಟ ಹಳ್ಳಿಯ ಸರ್ವೆ ನಂಬರ್ 40ರ ಆರ್‌ಟಿಸಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾನೆ. ಹೀಗಾಗಿ ಇತೇಶಾಮ್ ಮತ್ತು ಅಬ್ದುಲ್ ಅಜೀಂ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮೈಸೂರು ಜಿಲ್ಲಾ ಸೆಷನ್ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿ ಆರ್.ಬಿ. ಕುಲಕರ್ಣಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವೇಶ್ಯಾವಾಟಿಕೆ ನಡೆಯುತ್ತಿದ್ದ ಮನೆ ಮೇಲೆ ಸಿಸಿಬಿ ಪೊಲೀಸರ ದಾಳಿ

ಮಹಿಳೆ ಬಂಧನ; ಇಬ್ಬರು ಯುವತಿಯರ ರಕ್ಷಣೆ

ಮೈಸೂರು,ಡಿ.9–ವೇಶ್ಯಾವಾಟಿಕೆ ನಡೆಯುತ್ತಿದ್ದ ಮನೆಯ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಮಹಿಳೆಯನ್ನು ಬಂಧಿಸಿ, ಇಬ್ಬರು ಯುವತಿಯರನ್ನು ರಕ್ಷಿಸಿದ್ದಾರೆ.

ಕ್ರೈಂ ಬಾಕ್ಸ್

ಮೈಸೂರಿನ ಆಲನಹಳ್ಳಿಯಲ್ಲಿರುವ ಗುರುಮಲ್ಲೇಶ್ವರ ಬಡಾ ವಣೆಯ ಮನೆ ನಂಬರ್ 583/1ರಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಮಾಹಿತಿ ಮೇರೆಗೆ ಡಿಸಿಪಿ ಶ್ರೀಮತಿ ಗೀತಾ, ಸಿಸಿಬಿ ಎಸಿಪಿ ಅಶ್ವಥನಾರಾಯಣ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ, ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಶ್ರೀಕಾಂತ್, ಸಿಸಿಬಿ ಇನ್ಸ್‌ಪೆಕ್ಟರ್ ಪ್ರತಿಭಾ ಜಂಗವಾಡ, ಎಎಸ್‌ಐ ಕೆ.ಜಿ.ರಾಜು, ಸಿಬ್ಬಂದಿಗಳಾದ ರಾಜು, ಶ್ರೀನಿವಾಸ್, ರಾಜೇಶ್, ಮಮತಾ ಅವರನ್ನೊಳಗೊಂಡ ತಂಡ ಡಿಸೆಂಬರ್ 8ರಂದು ಮಧ್ಯಾಹ್ನ 2.30ರ ವೇಳೆಗೆ ದಾಳಿ ನಡೆಸಿದೆ. ಯುವತಿಯರನ್ನಿಟ್ಟುಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದ ಆಲನಹಳ್ಳಿಯ ಮಾನಸನಗರ ನಿವಾಸಿ ಜಯಲಕ್ಷ್ಮಿ(40) ಎಂಬಾಕೆಯನ್ನು ಬಂಧಿಸಿದ ಪೊಲೀಸರು, ಕೊಲ್ಕತ್ತಾ ಮೂಲದ ಯುವತಿ ಹಾಗೂ ಮೈಸೂರಿನ ಯುವತಿಯನ್ನು ರಕ್ಷಿಸಿ, 3 ಮೊಬೈಲ್ ಹಾಗೂ 2 ಸಾವಿರ ರೂ. ನಗದು ವಶಪಡಿಸಿಕೊಂಡಿದ್ದಾರೆ. ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾರ್ಟ್ ಟೈಂ ಜಾಬ್ ಕೊಡಿಸುವುದಾಗಿ ಆನ್‌ಲೈನ್‌ನಲ್ಲಿ ಲಕ್ಷಾಂತರ ರೂ. ವಂಚನೆ

ಮೈಸೂರು,ಡಿ.9–ಪಾರ್ಟ್ ಟೈಂ ಜಾಬ್ ನೀಡುವುದಾಗಿ ನಂಬಿಸಿ ವ್ಯಕ್ತಿಯೋರ್ವರಿಗೆ 3.30 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಶ್ರೀರಾಂಪುರ 2ನೇ ಹಂತದ ನಿವಾಸಿ ಕೆ.ಜಿ.ವಿಶ್ವನಾಥ್(42) ಎಂಬುವರ ಮೊಬೈಲ್‌ಗೆ ಪಾರ್ಟ್ ಟೈಂ ಜಾಬ್ ಬಗ್ಗೆ ಸಂದೇಶ ಬಂದಿದ್ದು, ಅದನ್ನು ನಂಬಿದ ಅವರು, ಸಂದೇಶ ಬಂದಿದ್ದ ನಂಬರ್‌ಗೆ ಕರೆ ಮಾಡಲಾಗಿ ಅಮೆಜಾನ್ ಶಾಪ್ ಜಾಬ್ ಡಾಟ್ ಕಾಂನಲ್ಲಿ ಕೆಲಸ ಕೊಡಿಸುವುದಾಗಿ ತಿಳಿಸಿ, 3,30,850 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ವಿಶ್ವೇಶ್ವರನಗರದ ಡಿ.ಎಸ್. ವ್ಯಾಕ್ಸ್ ಅಪಾರ್ಟ್‌ಮೆಂಟ್ ನಿವಾಸಿ ಎಂ.ಜಿ. ಮಂಜುನಾಥ್ (58) ಎಂಬುವರಿಗೆ ಟೆಲಿಗ್ರಾಂನಲ್ಲಿ ಪರಿಚಯವಾದ ವ್ಯಕ್ತಿಗಳು ಪಾರ್ಟ್ ಟೈಂ ಜಾಬ್ ಕೊಡಿಸುವುದಾಗಿ ನಂಬಿಸಿ 88,199 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಗಾಂಜಾ ಮಾರಾಟ: ಆರೋಪಿ ಬಂಧನ

ಮೈಸೂರು, ಡಿ. 9– ಗಾಂಜಾ ಮಾರಾಟಗಾರನನ್ನು ಬಂಧಿಸಿರುವ ಮೈಸೂರು ಸಿಸಿಬಿ ಪೊಲೀಸರು 2.570 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಶಾಂತಿನಗರ ನಿವಾಸಿ ಫೈರೋಜ್ ಖಾನ್(30) ಬಂಧಿತನಾಗಿದ್ದು, ಈತ ಡಿಸೆಂಬರ್ 8ರಂದು ಮಧ್ಯಾಹ್ನ 3.30ರ ಸುಮಾರಿನಲ್ಲಿ ರಾಜೀವ್‌ನಗರ 1ನೇ ಹಂತದ ದಾರೋಸ್–ಸಲಾಂ ಮಸೀದಿ ರಸ್ತೆಯಲ್ಲಿ ರುವ ಮನೆ ನಂಬರ್

2.570 ಕೆಜಿ ಗಾಂಜಾ ವಶ

884ರ ಬಳಿ ಹೋಂಡಾ ಆಕ್ಟೀವಾ (ಕೆಎ 55–ಇಸಿ 2488) ದಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ವೇಳೆ ದಾಳಿ ನಡೆಸಿದ ಪೊಲೀಸರು, 2.570 ಕೆಜಿ ಗಾಂಜಾ, ಹೋಂಡಾ ಆಕ್ಟೀವಾ ಮತ್ತು 3000 ರೂ. ನಗದು ವಶಪಡಿಸಿಕೊಂಡಿದ್ದಾರೆ. ಡಿಸಿಪಿ ಎಂ.ಎಸ್.ಗೀತಾ, ಸಿಸಿಬಿ ಎಸಿಪಿ ಸಿ.ಕೆ.ಅಶ್ವಥನಾರಾಯಣ ಮಾರ್ಗದರ್ಶನದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಿಬ್ಬಂದಿಗಳಾದ ಜೋಸೆಫ್ ನೊರೊನ್ಹಾ, ರವಿಕುಮಾರ್, ಶ್ರೀನಿವಾಸಪ್ರಸಾದ್, ಅನಿಲ್, ಸುಬಾನಲ್ಲ ಬಾಲದಾರ ಅವರನ್ನೊಳಗೊಂಡ ತಂಡ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು.


ಹುಲಿ ಗಣತಿಗಾಗಿ ಅಳವಡಿಸಿದ್ದ 4 ಕ್ಯಾಮರಾ ಕಳವು

ಅರಣ್ಯಾಧಿಕಾರಿಗಳಿಂದ ಪೊಲೀಸರಿಗೆ ದೂರು

ಅಂತರಸಂತೆ, ಡಿ. 9– ಹುಲಿ ಗಣತಿಗಾಗಿ ಅಳವಡಿಸಿದ್ದ ನಾಲ್ಕು ಕ್ಯಾಮರಾಗಳನ್ನು ಕಳವು ಮಾಡಿರುವ ಬಗ್ಗೆ ಅಂತರಸಂತೆ ವನ್ಯಜೀವಿ ವಲಯದಿಂದ ವರದಿಯಾಗಿದೆ.

2022–23ನೇ ಸಾಲಿನ ಹುಲಿ ಗಣತಿ ಕಾರ್ಯಕ್ಕಾಗಿ ಅಂತರಸಂತೆ ವನ್ಯಜೀವಿ ವಲಯದ ಉದ್ಬೂರು ಶಾಖೆಯ ಕಲ್ಲಹೆಬ್ಬಳ್ಳ ಗಸ್ತಿನ ಕೆಇಬಿ ಲೈನ್ ಮತ್ತು ಮಧ್ಯೆ ಅಪ್ರೋಚ್ ರಸ್ತೆಯ ಮೋರಿ ಬಳಿ ಒಟ್ಟು 4 ಚುಬ್ಬಿ ಬ್ಯಾಕ್ ಡಿಜಿಟಲ್ ಟ್ರ್ಯಾಪಿಂಗ್ ಕ್ಯಾಮರಾಗಳನ್ನು ಅರಣ್ಯ ಇಲಾಖೆಯು ನವೆಂಬರ್ 6ರಂದು ಅಳವಡಿಸಿತ್ತು. ಡಿಸೆಂಬರ್ 1ರವರೆಗೂ ಈ ಕ್ಯಾಮರಾಗಳು ಕಾರ್ಯನಿರ್ವಹಿಸಿದ್ದು, ಡಿ.2ರಂದು ಅರಣ್ಯ ರಕ್ಷಕರು ಗಮನಿಸಿದಾಗ ನಾಲ್ಕು ಕ್ಯಾಮರಾಗಳು, 16 ಬ್ಯಾಟರಿ ಶೆಲ್‌ಗಳು, 2 ಮೆಮೋರಿ ಕಾರ್ಡ್‌ಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಡಿಆರ್‌ಎಫ್‌ಓ ರಾಹುಲ್ ಮಾವರ್ಕರ ಸದಾನಂದ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಅಂತರಸಂತೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಾಂಗ್ರೆಸ್‌ನಿಂದ ಹೊಸಬರಿಗೆ ಮಣೆ: ಖರ್ಗೆ ಪ್ರಸ್ತಾಪಕ್ಕೆ ಡಿಕೆಶಿ ಸಹಮತ



ಬೆಂಗಳೂರು: ಹೊಸಮುಖಗಳಿಗೆ ಅವಕಾಶ ಕೊಡಬೇಕು ಎಂಬುದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಇರಾದೆಯಾಗಿದೆ. ಇವೆಲ್ಲವೂ ರಾಜಕೀಯ ತಂತ್ರಗಾರಿಕೆ. ಒಂದೇ ದಿನದಲ್ಲಿ ಎಲ್ಲವೂ ಹೇಳಲಾಗದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಸೂಚ್ಯವಾಗಿ ತಿಳಿಸಿದರು.

ಸದಾಶಿವನಗರದ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸಮುಖಗಳಿಗೆ ಮಣೆ ಹಾಕುವ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಉದಯಪುರ ನಿರ್ಣಯಗಳನ್ನು ನಾವು ಜಾರಿ ಮಾಡ್ತೇವೆ ಎಂದು ಖರ್ಗೆ ಅವರು ಪ್ರಾರಂಭದ ದಿನವೇ ಹೇಳಿದ್ದಾರೆ. ನಿರ್ಣಯವನ್ನು ದೇಶದ ಜನರ ಮುಂದಿಟ್ಟಿದ್ದಾರೆ. ಎಲ್ಲವೂ ಹಂತಹಂತವಾಗಿ ನಡೆಯಲಿದೆ ಎಂದರು.

ವಿಧಾನಪರಿಷತ್ ಸದಸ್ಯ ಎ.ಹೆಚ್ ವಿಶ್ವನಾಥ್ ಭೇಟಿ ವಿಚಾರವಾಗಿ ಪ್ರತಿಕ್ರಿಯಿಸಿ, ನಾನು ಮತ್ತು ವಿಶ್ವನಾಥ್ ಯುವ ಕಾಂಗ್ರೆಸ್‌ನಲ್ಲಿದ್ದಾಗಿನಿಂದಲೂ ಕೆಲಸ ಮಾಡಿದ್ದೇವೆ. ಖರ್ಗೆ ಜೊತೆಗೂ ಸಂಪುಟದಲ್ಲಿ ವಿಶ್ವನಾಥ್ ಕೆಲಸ ಮಾಡಿದ್ದಾರೆ. ಅವರೊಬ್ಬ ಮುಂದಾಲೋಚನೆ ಇರುವ ವ್ಯಕ್ತಿ. ರಾಜಕೀಯವಾಗಿ ಯಾವುದೇ ವಿಚಾರವನ್ನು ನಾವು ಮಾತನಾಡಿಲ್ಲ ಎಂದು ಹೇಳಿದರು.

ವಿಶ್ವನಾಥ್ ತಮ್ಮ ಬಾಂಬೆ ಫ್ರೆಂಡ್ಸ್ ಜೊತೆಗೆ ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತಾರಾ ಎಂಬ ಪ್ರಶ್ನೆಗೆ ಉತ್ತರಿಸಿದ ಡಿಕೆಶಿ, ರಾಜಕೀಯ ನಿಂತ ನೀರಲ್ಲ. ನಾನು ಈ ಕುರ್ಚಿ ಬಿಟ್ಟರೆ (ಕೆಪಿಸಿಸಿ ಅಧ್ಯಕ್ಷ ಸ್ಥಾನ) ಪಕ್ಕದಲ್ಲಿರುವ (ಮಾಜಿ ಶಾಸಕ ನಂಜಯ್ಯನಮಠ) ಇವರೇ ಬಂದು ಕುಳಿತುಕೊಳ್ತಾರೆ. ಈಗಾಗಲೇ ಶಿವರಾಂ ಹೆಬ್ಬಾರ್ ಕ್ಷೇತ್ರದಲ್ಲಿ ಪಾಟೀಲ್ ಟಿಕೆಟ್‌ಗೆ ಅರ್ಜಿ ಹಾಕಿದ್ದಾರೆ. ಹಿರೇಕೆರೂರು ಕ್ಷೇತ್ರದಲ್ಲಿ ಮಾಜಿ ಶಾಸಕ ಬಣಕಾರ್ ಬರೀ ಎರಡ್ಮೂರು ಸಾವಿರ ಮತಗಳಲ್ಲಿ ಸೋತಿದ್ದರು. ಬಣಕಾರ್ ಈಗ ಪಕ್ಷ ಸೇರಿದ್ದಾರೆ. ನಮ್ಮ ಸಿದ್ಧಾಂತ ನಂಬಿಕೊಂಡು, ಒಪ್ಪಿಕೊಂಡು ಬರುವಂತವರಿಗೆ ಸ್ವಾಗತವಿದೆ ಎಂದರು.

ಕಾಲ ಹೆಚ್ಚಿದ್ದರೆ ಹೆಚ್ಚು ಕೆಲಸ ಮಾಡಬಹುದು: ಅಧ್ಯಕ್ಷ ಸ್ಥಾನ ನಿಭಾಯಿಸಲು ಡಿಕೆಶಿ ಹೆಣಗಾಡುತ್ತಿದ್ದಾರೆ ಎಂದು ಡಾ. ಪರಮೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರು ನನ್ನ ಮೇಲಿನ ಅನುಕಂಪದಿಂದ ಹಾಗೆ ಹೇಳಿದ್ದಾರೆ. ದಿನಕ್ಕೆ ಇರುವುದು 24 ಗಂಟೆ ಮಾತ್ರ. ಕಾಲ ಇನ್ನೊಂದಿಷ್ಟು ಹೆಚ್ಚಿದ್ದರೆ ಹೆಚ್ಚು ಕೆಲಸ ಮಾಡಬಹುದಿತ್ತು. ನಾನು ದಿನಾಲೂ ಮಲಗೋದು ರಾತ್ರಿ 2–3 ಗಂಟೆ ಆಗುತ್ತದೆ. ಹೀಗಾಗಿ ಆರೋಗ್ಯದ ಬಗ್ಗೆ ಗಮನ ಕೊಡಿ ಎಂದು ಪರಮೇಶ್ವರ್ ಹೇಳುತ್ತಾ ಇರುತ್ತಾರೆ ಎಂದು ಹೇಳಿದರು.

ಕಾಂಗ್ರೆಸ್‌ನಲ್ಲಿ ಮಾತ್ರ ದಲಿತ ಸಿಎಂ: ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ದಲಿತ ಸಿಎಂ ಸಾಧ್ಯ ಆಗುತ್ತೆ. ಅದೇ ನಮ್ಮ ಪಾರ್ಟಿಯ ಶಕ್ತಿ. ಬೇರೆಯವರ ಥರ ಮುಸ್ಲಿಂ ಸಿಎಂ ಮಾಡ್ತೀವಿ ಅಂತಾ ಹೇಳಲ್ಲ. ದೆ ಆರ್ ಕೇಪೇಬಲ್, ನೋ ಡೌಟ್. 12 ವರ್ಷ ಕೆಪಿಸಿಸಿ ಅಧ್ಯಕ್ಷರಾಗಿ ಡಾ. ಪರಮೇಶ್ವರ್ ಕೆಲಸ ಮಾಡಿದ್ದಾರೆ. ಎಐಸಿಸಿ ಅಧ್ಯಕ್ಷ ಸ್ಥಾನವನ್ನು ದಲಿತ ಎಂಬ ಕಾರಣಕ್ಕೆ ಖರ್ಗೆ ಅವರಿಗೆ ಕೊಟ್ಟಿಲ್ಲ. ಅನುಭವಿ ರಾಜಕಾರಣಿ ಅಂತಾ ಕೊಟ್ಟಿದ್ದೇವೆ. ಅವರಿಗೆ ಹಿರಿತನ ಇಲ್ಲವಾ, ಅವರು ನಾಯಕರು ಅಲ್ಲವಾ. ನಮ್ಮ ಪಕ್ಷದಲ್ಲಿ ಯಾರಾದರೂ ಸಿಎಂ ಆಗಬಹುದು. ವೀರಪ್ಪಮೊಯ್ಲಿ ಅವರ ಸಮುದಾಯ ಎಷ್ಟಿತ್ತು. ಗುಂಡೂರಾವ್ ಸಿಎಂ ಆಗಿರಲಿಲ್ಲವಾ ಎಂದರು.

ಏನು ಬೇಕಾದರೂ ಆಗಬಹುದು

ವಲಸಿಗರು ಹಾಗೂ ಅನ್ಯ ಪಕ್ಷದವರನ್ನು ಪಕ್ಷಕ್ಕೆ ಸೆಳೆಯುವ ವಿಚಾರವಾಗಿ ಪ್ರತಿಕ್ರಿಯಿಸಿದ ಡಿಕೆಶಿ, ದೇರ್ ವಿಲ್ ಬಿ ಸಪ್ರೈಸ್. ಬೇಕಾದಷ್ಟು ಸಪ್ರೈಸ್ ಇರುತ್ತದೆ. ಕೆಲವೊಂದು ಕ್ಷೇತ್ರಗಳಲ್ಲೂ ಇರುತ್ತದೆ. ಬರೀ ವಲಸಿಗರ ಬಗ್ಗೆ ಯಾಕೆ ಯೋಚನೆ ಮಾಡ್ತಾ ಇದ್ದೀರಾ?. ಬಣಕಾರ್, ಪಾಟೀಲ್, ಮಧುಬಂಗಾರಪ್ಪ, ಶರತ್ ಬಚ್ಚೇಗೌಡ ವಲಸಿಗರಾ. ಮಸ್ಕಿ ಅಭ್ಯರ್ಥಿ ವಲಸಿಗರಾ. ಮಸ್ಕಿಯಲ್ಲಿ ಹೋದ ತಕ್ಷಣ ಇನ್ನೊಬ್ಬರು ಬಂದರು. ಹೊಸಕೋಟೆಯಲ್ಲಿ ಹೋದರು, ಇನ್ನೊಬ್ಬರು ಬಂದರು. ಒಬ್ಬರು ಖಾಲಿ ಆಗುತ್ತಿದ್ದಂತೆ ಇನ್ನೊಬ್ಬರು ರೆಡಿ ಆಗ್ತಾ ಇರ್ತಾರೆ. ಜೆಡಿಎಸ್‌ನಿಂದ 15 ಜನ ಸೋಲು ಕಂಡವರು ಅರ್ಜಿ ಹಾಕಿದ್ದಾರೆ. ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು ಎಂದು ಡಿ.ಕೆ.ಶಿವಕುಮಾರ್ ಪರೋಕ್ಷವಾಗಿ ತಿಳಿಸಿದರು.

ರೋಹಿಣಿ ಸಿಂಧೂರಿ ವಿರುದ್ಧ ಕ್ರಮಕ್ಕೆ ಎಂಎಲ್‌ಸಿ ಮಂಜೇಗೌಡ ಆಗ್ರಹ



ಮೈಸೂರು,ಡಿ.9(ಆರ್‌ಕೆಬಿ)–ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಈಗ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ವೇಳೆ ಸರ್ಕಾರಿ ಲೆಕ್ಕಪತ್ರ ಇಲಾಖೆ ಇದ್ದರೂ ಖಾಸಗಿ ಸಂಸ್ಥೆಯೊಂದಕ್ಕೆ ದೇವಸ್ಥಾನಗಳ ಆಡಿಟ್ ವರದಿ ನೀಡಿ, ಕಮಿಷನ್ ಪಡೆದಿದ್ದಾರೆ. ಇದೇ ರೀತಿ ಹಲವಾರು ಅಕ್ರಮಗಳಲ್ಲಿ ಅವರು ಭಾಗಿಯಾಗಿದ್ದು, ಈ ಕುರಿತು ಸರ್ಕಾರ ಕೂಡಲೇ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಆಗ್ರಹಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೈಸೂರಿನ ಎಟಿಐ ಸಂಸ್ಥೆಯ ಅತಿಥಿ ಗೃಹದಲ್ಲಿ ವಾಸ್ತವ್ಯ ಹೂಡಿದ್ದ ವೇಳೆ ಅಲ್ಲಿದ್ದ ಪೀಠೋಪಕರಣ ಮೊದಲಾದವನ್ನು ಅವರು ತಮ್ಮ ಮನೆಗೆ ಸ್ಥಳಾಂತರಿಸಿದ ಆರೋಪ ಕೇಳಿಬಂದಿದೆ. ಆದರೆ ಅಂತಹ ಕೆಲಸ ತಾವು ಮಾಡುವುದಿಲ್ಲ ಎಂದು ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಈ ಕುರಿತು ಸರ್ಕಾರದ ವರದಿಯೇ ಇದ್ದು, ಅವನ್ನು ಹಿಂದಿರುಗಿಸುವಂತೆ ತಿಳಿಸಲಾಗಿದೆ. ಹೀಗಾಗಿ ರೋಹಿಣಿ ಸಿಂಧೂರಿ ಅವರು ಮತ್ತೊಂದು ಅಕ್ರಮದಲ್ಲಿ ಭಾಗಿಯಾಗಿರುವುದು ಸ್ಪಷ್ಟವಾಗಿದೆ ಎಂದು ತಿಳಿಸಿದರು.

ತಿರುಪತಿಯಲ್ಲಿ ರಾಜ್ಯದ ಭಕ್ತಾದಿಗಳಿಗೆ ಕಟ್ಟಡ ನಿರ್ಮಿಸಲು 458 ಕೋಟಿ ಬಿಡುಗಡೆ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ತಮ್ಮ ಪತಿಯ ಒಡೆತನದ ಆರ್ಕಿಟೆಕ್ಟ್ ಸಂಸ್ಥೆಗೆ ರೋಹಿಣಿ ಸಿಂಧೂರಿ ಕೆಲಸ ನೀಡಿ, 10 ಕೋಟಿ ರೂ. ಬಿಡುಗಡೆಯಾಗುವಂತೆ ನೋಡಿಕೊಂಡಿದ್ದಾರೆ. ಇವರು ಮೈಸೂರು ಡಿಸಿಯಾಗಿದ್ದ ವೇಳೆ ಪಾರಂಪರಿಕ ಕಟ್ಟಡದಲ್ಲಿ ಈಜುಕೊಳ ನಿರ್ಮಿಸಿದ್ದರು. ಈ ರೀತಿ ಅವರ ವಿರುದ್ಧ ಹಲವಾರು ಅಕ್ರಮಗಳ ಪಟ್ಟಿಯೇ ಇದೆ. ಹೀಗಿದ್ದರೂ ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ಹೀಗಾಗಿ ಕ್ರಮಕ್ಕೆ ಒತ್ತಾಯಿಸಿ ಬೆಂಗಳೂರಿನ ವಿಧಾನಸೌಧ–ವಿಕಾಸ ಸೌಧದ ನಡುವಿನ ಗಾಂಧಿ ಪ್ರತಿಮೆ ಬಳಿ ಜೆಡಿಎಸ್ ಪಕ್ಷದವರೊಡಗೂಡಿ ಪ್ರತಿಭಟನೆ ಹಮ್ಮಿಕೊಳ್ಳಲಿರುವುದಾಗಿ ಸಿ.ಎನ್.ಮಂಜೇಗೌಡ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಶ್ರೀನಿವಾಸ್, ಶಿವಕುಮಾರ್ ಇತರರು ಉಪಸ್ಥಿತರಿದ್ದರು.



ಮೈಸೂರು ಟೌನ್‌ಹಾಲ್‌ನಲ್ಲಿ ಬೆಂಗಳೂರಿನ ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್ ಹಾಗೂ ಶ್ರೀ ರೇಣುಕಾ ಕಲಾವೃಂದವು ಗ್ರಾಮೀಣ ರಂಗಕಲೆ ರಂಗೋತ್ಸವ ಅಂಗವಾಗಿ ಆಯೋಜಿಸಿದ್ದ ನಾಟಕ ಪ್ರದರ್ಶನದ ವೇಳೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಅವರಿಗೆ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಆಯೋಜಕರಾದ ಸ್ವಪ್ನ ನಾಗರಾಜ್, ಶೈಲೂ, ಮಹೇಶ್ವರಿ ಪಾಟೀಲ್, ಕೂರ್ಗಳ್ಳಿ ಬೋರೇಗೌಡ, ಹೆಚ್.ಪಿ.ನಾಗೇಂದ್ರಪ್ರಸಾದ್, ಜಟ್ಟಿಹುಂಡಿ ಸುನೀಲ್ ಉಪಸ್ಥಿತರಿದ್ದರು.

ಯುವ ಸಾಧಕರಿಗೆ ಕನ್ನಡ ವಿಕಾಸ ರತ್ನ ಪ್ರಶಸ್ತಿ

ಮೈಸೂರು,ಡಿ.9–ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಕೊಡಮಾಡುವ 2022ನೇ ಸಾಲಿನ 'ಕನ್ನಡ ವಿಕಾಸ ರತ್ನ' ಪ್ರಶಸ್ತಿಗೆ ಸಂಘಟನೆ, ಪ್ರಕಾಶನ, ಸಾಹಿತ್ಯ ಕ್ಷೇತ್ರದ ಮೈಸೂರಿನ ಮೂವರು ಯುವ ಸಾಧಕರು ಆಯ್ಕೆಯಾಗಿದ್ದಾರೆ ಎಂದು ವೇದಿಕೆ ರಾಜ್ಯಾಧ್ಯಕ್ಷೆ ಹೆಚ್.ಎಲ್.ಯಮುನಾ ತಿಳಿಸಿದ್ದಾರೆ.



ಡಾ.ಬಸವರಾಜು



ಲೋಕೇಶ್



ಶಿಶಿರಂಜನ್

ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಕಾರ್ಯದರ್ಶಿ ಡಾ.ಬಿ. ಬಸವರಾಜು (ಸಾಂಸ್ಕೃತಿಕ ಸಂಘಟನೆ), ವಿಸ್ಮಯ ಪ್ರಕಾಶನದ ಮಾಲೀಕ ಹಾಲತಿ ಲೋಕೇಶ್ (ಪುಸ್ತಕ ಪ್ರಕಾಶನ), ಯುವ ಸಾಹಿತಿ ಹಾಗೂ ರಂಗಕರ್ಮಿ ಎಸ್.ಶಿಶಿರಂಜನ್ (ಸಾಹಿತ್ಯ ಮತ್ತು ರಂಗಭೂಮಿ) ಈ ಮೂವರಿಗೆ 'ಕನ್ನಡ ವಿಕಾಸ ರತ್ನ' ಪ್ರಶಸ್ತಿಗೆ ಪರಿಗಣಿಸಲಾಗಿದೆ.

ಡಿ.10ರಂದು ವಿಜಯನಗರ ಜಿಲ್ಲಾ ಸಾಹಿತ್ಯ ಭವನದಲ್ಲಿ ಪತ್ರಿಕೋದ್ಯಮಿ ಹಾಗೂ ವಿಚಾರವಾದಿ ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಶಾಸಕರಾದ ಸಿ.ಎನ್.ಮಂಜೇಗೌಡ, ಎಲ್.ನಾಗೇಂದ್ರ, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಶಿಕ್ಷಣೋದ್ಯಮಿ ವಿ.ಕವೀಶ್‌ಗೌಡ, ಸಾಹಿತಿ. ಟಿ.ಸತೀಶ್ ಜವರೇಗೌಡ ಮತ್ತಿತರರ ಸಮಕ್ಷಮದಲ್ಲಿ ನಡೆಯುವ 'ಕನ್ನಡ ಹಬ್ಬ'ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಶೂಟೌಟ್‌ನಲ್ಲಿ ಬ್ರೆಜಿಲ್ ಔಟ್: ಕ್ರೊವೇಷ್ಯಾ ಸೆಮೀಸ್‌ಗೆ



ಅಲ್‌ರಯಾನ್, ಡಿ.9–ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡವನ್ನು ಮಣಿಸಿದ ಕ್ರೊವೇಷ್ಯಾ, ಕತಾರ್‌ನಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದೆ. ಅಲ್ ರಯಾನ್‌ನ ಎಜುಕೇಷನ್ ಸಿಟಿ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಕ್ರೊವೇಷ್ಯಾ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 4–2 ರಲ್ಲಿ ರೋಚಕ ಗೆಲುವು ಪಡೆಯಿತು. ನಿಗದಿತ ಹಾಗೂ ಹೆಚ್ಚುವರಿ ಅವಧಿ ಆಟದ ಬಳಿಕ ಎರಡೂ ತಂಡಗಳು 1–1 ರಲ್ಲಿ ಸಮಬಲ ಸಾಧಿಸಿದ್ದವು. ಪೆನಾಲ್ಟಿ ಶೂಟೌಟ್‌ನಲ್ಲಿ ಕ್ರೊವೇಷ್ಯಾದ ನಿಕೊಲಾ ವ್ಲಾಸಿಚ್, ಲೊವ್ರೊ ಮಜೊವ್, ಲುಕಾ ಮಾಡ್ರಿಚ್ ಮತ್ತು ಮಿಸ್ಲಾವ್ ಒರ್ಸಿಚ್ ಅವರು ಗೋಲು ಗಳಿಸಿದರು.

ಬ್ರೆಜಿಲ್ ಪರ ಕ್ಯಾಸೆಮಿರೊ ಮತ್ತು ಪೆಡ್ರೊ ಮಾತ್ರ ಚೆಂಡನ್ನು ಗುರಿ ಸೇರಿಸಿದರು. ರಾಡ್ರಿಗೊ ಅವರ ಮೊದಲ ಕಿಕ್‌ಅನ್ನು ಕ್ರೊವೇಷ್ಯಾ ಗೋಲ್‌ಕೀಪರ್ ಡೊಮಿನಿಕ್ ಲಿವಕೊವಿಚ್ ಯಶಸ್ವಿಯಾಗಿ ತಡೆದರು. 4ನೇ ಕಿಕ್ ತೆಗೆದುಕೊಂಡ ಮಾರ್ಕಿನೋಸ್ ಅವರು ಒದ್ದ ಚೆಂಡು ಕ್ರಾಸ್‌ಬಾರ್‌ಗೆ ಬಡಿದು ವಾಪಾಸಾಯಿತು.

ಈ ವೇಳೆ ಕ್ರೊವೇಷ್ಯಾ ಆಟಗಾರರು ಗೆಲುವಿನ ಸಂಭ್ರಮ ಆಚರಿಸಿದರೆ, ಆರನೇ ಪ್ರಶಸ್ತಿಯ ಆಸೆ ಕೈಬಿಟ್ಟ ಬ್ರೆಜಿಲ್‌ನವರು ಕಣ್ಣೀರಿಟ್ಟರು. ಸ್ಟಾರ್ ಆಟಗಾರ ನೇಮರ್ ವಿಶ್ವಕಪ್ ಎತ್ತಿಹಿಡಿಯಬೇಕು ಎಂದು ಕನಸು ಕಂಡಿದ್ದ ಅವರ ಅಭಿಮಾನಿಗಳೂ ನಿರಾಸೆ ಅನುಭವಿಸಿದರು.

ಭಾರೀ ಪೈಪೋಟಿ: ಮೊದಲ 90 ನಿಮಿಷಗಳ ಆಟದಲ್ಲಿ ಜಿದ್ದಾಜಿದ್ದಿನ ಹೋರಾಟ ನಡೆಯಿತು. ಪ್ರಥಮಾರ್ಧದಲ್ಲಿ ಉಭಯ ತಂಡಗಳಿಂದ ಗೋಲು ಗಳಿಸುವ ಉತ್ತಮ ಪ್ರಯತ್ನ ನಡೆಯಲಿಲ್ಲ. ಎರಡನೇ ಅವಧಿಯಲ್ಲಿ ಬ್ರೆಜಿಲ್ ತನ್ನ ಆಕ್ರಮಣದ ವೇಗವನ್ನು ಹೆಚ್ಚಿಸಿತು. ಇದರಿಂದ ಗೋಲು ಗಳಿಸುವ ಹಲವು ಅವಕಾಶಗಳು ಸೃಷ್ಟಿಯಾದವು. ನೇಮರ್‌ಗೆ 3 ಉತ್ತಮ ಅವಕಾಶಗಳು ಲಭಿಸಿದರೂ, ಯಶಸ್ಸು ಕಾಣಲಿಲ್ಲ. ಕ್ರೊವೇಷ್ಯಾ ಗೋಲ್‌ಕೀಪರ್ ಲಿವಕೊವಿಚ್ ಅವರು ತಡೆಯಾಗಿ ನಿಂತರು.

ಹೆಚ್ಚುವರಿ ಅವಧಿಯಲ್ಲಿ ನೇಮರ್ (105+1 ನೇ ನಿ.) ಗೋಲು ಗಳಿಸಿ ಬ್ರೆಜಿಲ್‌ಗೆ ಗೆಲುವಿನ ನಿರೀಕ್ಷೆ ಮೂಡಿಸಿದ್ದರು. ಆದರೆ ಬ್ರೂನೊ ಪೆಟ್ಕೊವಿಚ್ (117ನೇ ನಿ.) ಅವರು ಕ್ರೊವೇಷ್ಯಾ ತಂಡದ ನೆರವಿಗೆ ನಿಂತರು. ಇದರಿಂದ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್‌ನ ಮೊರೆ ಹೋಗಲಾಯಿತು.

ಪೆಲೆ ದಾಖಲೆ ಸರಿಗಟ್ಟಿದ ನೇಮರ್: ನೇಮರ್ ಅವರು ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 77 ಗೋಲುಗಳನ್ನು ಗಳಿಸುವ ಮೂಲಕ ಬ್ರೆಜಿಲ್ ಪರ ಅತ್ಯಧಿಕ ಗೋಲು ಗಳಿಸಿದ ದಿಗ್ಗಜ ಆಟಗಾರ ಪೆಲೆ ಅವರ ದಾಖಲೆ ಸರಿಗಟ್ಟಿದರು. ಪೆಲೆ 1957 ಮತ್ತು 1971ರ ಅವಧಿಯಲ್ಲಿ 77 ಗೋಲುಗಳನ್ನು ಹೊಡೆದಿದ್ದರು.



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಿಡಿಎಸ್ ಜನರಲ್ ದಿವಂಗತ ಬಿಪಿನ್ ರಾವತ್ ಸ್ಮರಣಾರ್ಥ ಕಾಲೇಜಿನ ಎನ್‌ಸಿಸಿ, ಎನ್‌ಎಸ್‌ಎಸ್, ಭಾರತೀಯ ರೆಡ್ ಕ್ರಾಸ್ ವಿಂಗ್, ಐಕ್ಯೂಎಸಿ ವಿಭಾಗಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಹೆಚ್‌ಡಿಎಫ್‌ಸಿ ಬ್ಯಾಂಕ್ ಸಹಕಾರದೊಂದಿಗೆ ರಕ್ತದಾನ ಶಿಬಿರ ನಡೆಯಿತು. ಕಾಲೇಜಿನ ಪ್ರಾಚಾರ್ಯರಾದ ಡಾ.ಎಸ್.ಮರೀಗೌಡ, ಎನ್‌ಸಿಸಿ ಘಟಕಾಧಿಕಾರಿ ಡಾ.ಹರ್ಷ, ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ.ಧನಂಜಯ ಪಾಲಹಳ್ಳಿ, ಜಯದೇವ ಆಸ್ಪತ್ರೆ ವೈದ್ಯೆ ಡಾ.ರಶ್ಮಿ, ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ನವೀನ್ ಉಪಸ್ಥಿತರಿದ್ದರು.



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಿದ್ದ ಮೈಸೂರು ವಿವಿ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಲಭಿಸಿದೆ. ಚಿತ್ರದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ್, ಡಾ.ಭಾಸ್ಕರ್, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಹಾಗೂ ಕ್ರೀಡಾಪಟುಗಳಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಡಿ.9– ಮೈಸೂರು ತಾಲೂಕಿನ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ssp.karnataka.govi.inರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಡಿ.31 ಕೊನೆ ದಿನ. ಮೆಟ್ರಿಕ್ ನಂತರ ಪ್ರೋತ್ಸಾಹಧನ ಮಂಜೂರಾತಿ ಪಡೆಯುವ ವಿದ್ಯಾರ್ಥಿಗಳಿಗೆ ಆದಾಯ ಮಿತಿ ಇರುವುದಿಲ್ಲ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅವರ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ಆಧಾರ್ ಸಂಖ್ಯೆಯೊಂದಿಗೆ NPCL ರಲ್ಲಿ ಜೋಡಣೆ ಮಾಡಿಸಿರಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಭಾರತೀಯ ಭಾಷಾ ಉತ್ಸವ

ಮೈಸೂರು,ಡಿ.9–ಭಾರತೀಯ ಭಾಷಾ ಸಂಸ್ಥಾನವು ಏಕ್ ಭಾರತ್ ಶ್ರೇಷ್ಠ ಭಾರತ್ ಅಡಿಯಲ್ಲಿ ಭಾರತೀಯ ಭಾಷಾ ಉತ್ಸವವನ್ನು ಆಯೋಜಿಸಿದೆ. ಉತ್ಸವದ ಉದ್ಘಾಟನಾ ಸಮಾರಂಭವು ಡಿ.11ರಂದು ಬೆಳಗ್ಗೆ 10.30ಕ್ಕೆ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರೆಸಿಡೆನ್ಸಿ ಕಾಲೇಜ್‌ನ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ.ವಿ.ಮುರುಗನ್, ಸಹಾಯಕ ಪ್ರಾಧ್ಯಾಪಕರಾದ ಠಾಕುರ್ ಪ್ರಸಾದ್ ಮುರ್ಮು, ಪುರುಲಿಯ, ಹೇಮ ಖುರ್ಷಾಪುರ ಉಪನ್ಯಾಸ ನೀಡಲಿದ್ದಾರೆ. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್ ಸಮಾರಂಭದ ಅಧ್ಯಕ್ಷತೆ ವಹಿಸುವರು. ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಸಿದ್ಧಿ ಸಮುದಾಯದ 'ಅಮ್ಮೆ ಮಾಡ್ಲೆ ಕಲಾ ತಂಡ'ದವರಿಂದ ಮಧ್ಯಾಹ್ನ 3 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಚಾಮುಂಡೇಶ್ವರಿಯಲ್ಲಿ ಬಿಜೆಪಿ ಸಂಘಟನೆ ಗಟ್ಟಿಯಾಗಿದೆ

ಸಿದ್ದಲಿಂಗಪುರ ಜಿಪಂ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ

ಮೈಸೂರು, ಡಿ.9– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆ ಗಟ್ಟಿಯಾಗಿದ್ದು, ಕಾರ್ಯಕರ್ತರು ಈ ಬಾರಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುತ್ತಾರೆ ಎಂದು ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಿದ್ದಲಿಂಗಪುರ ಜಿಲ್ಲಾ ಪಂಚಾಯತ್ ಕ್ಷೇತ್ರದ ವ್ಯಾಪ್ತಿಯ ಒಟ್ಟು 37 ಬೂತ್‌ಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಕಾರ್ಯಕರ್ತರ ಸಂಖ್ಯೆ ಹೆಚ್ಚಾಗಿದ್ದು, ಪ್ರತಿಯೊಬ್ಬ ಕಾರ್ಯಕರ್ತನು ಈ ಬಾರಿ ಬಿಜೆಪಿ ಗೆಲುವಿಗೆ ಶ್ರಮಿಸುತ್ತಿದ್ದಾನೆ. ಕ್ಷೇತ್ರದಲ್ಲಿ ಭಾರತೀಯ ಜನತಾ ಪಾರ್ಟಿ ಸಂಘಟನೆ ಗಟ್ಟಿಯಾಗಿದ್ದು ಈ ಬಾರಿ ಚುನಾವಣೆ ಬಿಜೆಪಿ ಚುನಾವಣೆಯಾಗಿ ಹೊರಹೊಮ್ಮಲಿದೆ ಎಂದು ಹೇಳಿದರು.



ಕ್ಷೇತ್ರದಾದ್ಯಂತ ಮತದಾರರಲ್ಲಿ ಬಿಜೆಪಿ ಪರ ಒಲವು ಹೆಚ್ಚಾಗಿದ್ದು, ಈ ಬಾರಿಯ ಚುನಾವಣೆಯಲ್ಲಿ ಮತದಾರರು ಭಾರತೀಯ ಜನತಾ ಪಾರ್ಟಿಯನ್ನು ಬೆಂಬಲಿಸುತ್ತಾರೆ ಎಂಬ ವಿಶ್ವಾಸ ಕಾರ್ಯಕರ್ತರಲ್ಲಿ ಮೂಡುತ್ತಿದೆ ಎಂದು ಹೇಳಿದರು.

ವಿರೋಧ ಪಕ್ಷಗಳು ಯಾವುದೇ ರೀತಿ ತಂತ್ರಗಾರಿಕೆ ಮಾಡಿದರೂ ಕೂಡ ಭಾರತೀಯ ಜನತಾ ಪಾರ್ಟಿ ಗೆಲುವನ್ನು ತಡೆಯಲು ಸಾಧ್ಯವಿಲ್ಲ. ಈ ಕ್ಷೇತ್ರದಲ್ಲಿ ಈ ಹಿಂದೆಯೇ ಬಿಜೆಪಿ ಶಾಸಕರು ಆಯ್ಕೆ ಆಗಬೇಕಿತ್ತು. ಎರಡು ಬಾರಿ ಗೆಲುವಿನ ಹತ್ತಿರಕ್ಕೆ ಬಂದು ನಮ್ಮ ಅಭ್ಯರ್ಥಿಗಳು ಪರಾಜಿತರಾಗಿದ್ದು, ಈ ಬಾರಿ ಪಕ್ಷದ ಅಭ್ಯರ್ಥಿ ಗೆಲ್ಲುವುದು ನಿಶ್ಚಿತ ಎಂದರು.

ಜಿಪಂ ಕಾರ್ಯಕರ್ತರ ಸಭೆ ಅಧ್ಯಕ್ಷತೆಯನ್ನು ಸಿದ್ದಲಿಂಗಪುರ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಲೋಹಿತ್ ಕಾಮನಕೆರೆಹುಂಡಿ ವಹಿಸಿದ್ದರು. ಚಾಮುಂಡೇಶ್ವರಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ಲಕ್ಷ್ಮೀಪುರ ರವಿ ಸ್ವಾಗತಿಸಿ, ನಿರೂಪಿಸಿದರು.

